ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 4 ಶನಿವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 79 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 4 ಶನಿವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 79 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವಿದ್ಯುತ್ ಕೊರತೆ ನೀಗಲು ಸಜ್ಜಾಗಿ

ಇಂಧನ ಇಲಾಖೆ ಪ್ರಗತಿ ಪರಿಶೀಲನೆ ವೇಳೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ

ಬೆಂಗಳೂರು, ಜು.3– ಎಲ್ ನಿನೊ (Elnino) ಪರಿಣಾಮದಿಂದಾಗಿ ಜಲ ವಿದ್ಯುತ್ ಉತ್ಪಾದನೆ ಕುಸಿಯುವ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ವಿಶೇಷ ತುರ್ತು ಕಾರ್ಯಯೋಜನೆ ರೂಪಿಸುವ ಜೊತೆಗೆ ಸಂಗ್ರಹಣೆ ಮತ್ತು ಇತರೆ ಮೂಲಗಳ ಉತ್ಪಾದನೆಗೆ ತುರ್ತು ಗಮನ ಹರಿಸಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ ನೀಡಿದರು.

ಮೊದಲ ಬಾರಿ ಇಂಧನ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿಗಳು, ಬರಗಾಲದ ಪರಿಸ್ಥಿತಿ ಎದುರಿಸಲು ಇಲಾಖೆ ಏನೇನು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ ಎನ್ನುವ ಬಗ್ಗೆ ವಿವರಗಳನ್ನು ಪಡೆದು, ಸಾರ್ವಜನಿಕ ಬಳಕೆಗೆ ತೊಂದರೆ ಆಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದರು.

ಇಂಧನ ಭದ್ರತೆಗಾಗಿ ಸರ್ಕಾರಕ್ಕೆ ಮೀಸಲಾದ ಕಲ್ಲಿದ್ದಲು ಗಣಿಗಳನ್ನು ಕಾರ್ಯಾರಂಭಗೊಳಿಸಿ, ಸಾಕಷ್ಟು ಕಲ್ಲಿದ್ದಲು ಸಂಗ್ರಹವನ್ನು ನಿರಂತರವಾಗಿ ಕಾಯ್ದುಕೊಳ್ಳಬೇಕು ಎಂದು ಸೂಚನೆ ನೀಡಿದರು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಸದ್ಯ ನಮ್ಮಲ್ಲಿ ವಿದ್ಯುತ್ ಸಂಗ್ರಹಣಾ ಸ್ಥಿತಿ ಸುಸ್ಥಿತಿಯಲ್ಲಿದೆ. ಹಿಂದಿನ ಮೂರು ವರ್ಷ ವಿದ್ಯುತ್ ಕಡಿತ ಇಲ್ಲದೆ ನಿರ್ವಹಿಸಿದ್ದೇವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು ಸದ್ಯದ ಸ್ಥಿತಿಯಲ್ಲಿ ನವೀಕರಿಸಬಹುದಾದ ಇಂಧನದ ಸಮರ್ಥ ನಿರ್ವಹಣೆಗಾಗಿ ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್‌ಗಳು (BESS), ಪಂಪ್ಡ್ ಸ್ಟೋರೇಜ್ ಯೋಜನೆಗಳನ್ನು (PSPs) ತ್ವರಿತವಾಗಿ ಜಾರಿಗೊಳಿಸಬೇಕು ಎಂದರು.

ನಾವು ಐಟಿ ಕ್ಯಾಪಿಟಲ್ ಆಗಿದ್ದೇವೆ. ಕೃತಕ ಬುದ್ಧಿಮತ್ತೆಯಲ್ಲೂ ನಮ್ಮ ರಾಜ್ಯ ಕ್ಯಾಪಿಟಲ್ ಆಗಬೇಕು ಎನ್ನುವ ದಿಕ್ಕಿನಲ್ಲಿ ನಾವು ಮುಂದುವರೆಯುತ್ತಿದ್ದೇವೆ. ಹೀಗಾಗಿ ಡೇಟಾ ಸೆಂಟರ್‌ಗಳು, ಕೃತಕ ಬುದ್ಧಿಮತ್ತೆ (AI) ಮೂಲ ಸೌಕರ್ಯ ಹಾಗೂ ಡಿಜಿಟಲ್ ಆರ್ಥಿಕತೆಯಿಂದ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಗೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು ಎಂದರು.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಇಂಧನ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದರು.

ಸಭೆಯ ಹೈಲೈಟ್ಸ್

- ಎಸ್ಕಾಂಗಳ ಆರ್ಥಿಕ ಬಲವರ್ಧನೆಗೆ ದ್ರವ್ಯತೆ (Liquidity) ಸುಧಾರಣೆ ಹಾಗೂ ಸಾಲ ನಿರ್ವಹಣೆಯ ಮೂಲಕ ಎಸ್ಕಾಂಗಳ ಹಣಕಾಸು ಸ್ಥಿರತೆಯನ್ನು ಹೆಚ್ಚಿಸಬೇಕು.
- ಪ್ರಸರಣ ಜಾಲವನ್ನು ಬಲಪಡಿಸುವ ಮೂಲಕ ನವೀಕರಿಸಬಹುದಾದ ಇಂಧನದ ಅನಗತ್ಯ ನಿಯಂತ್ರಣ (Curtailment) ಸಮಸ್ಯೆಯನ್ನು ನಿವಾರಿಸಬೇಕು.
- ಕಲ್ಲಿದ್ದಲು ಸರಬರಾಜು ಭದ್ರತೆಗಾಗಿ ಮೀಸಲು ಕಲ್ಲಿದ್ದಲು ಗಣಿಗಳನ್ನು ಕಾರ್ಯಾರಂಭಗೊಳಿಸಿ, ಸಾಗಣೆ ಮತ್ತು ಸಂಗ್ರಹ ವ್ಯವಸ್ಥೆಯನ್ನು ಬಲಪಡಿಸುವ ಮೂಲಕ ಕಲ್ಲಿದ್ದಲು ಭದ್ರತೆಯನ್ನು ಖಚಿತಪಡಿಸಬೇಕು.
- ವಿದ್ಯುತ್ ವಾಹನ (EV) ಮೂಲಸೌಕರ್ಯಕ್ಕಾಗಿ ರಾಜ್ಯಾದ್ಯಂತ ಇವಿ ಚಾರ್ಜಿಂಗ್ ಮೂಲ ಸೌಕರ್ಯವನ್ನು ವೇಗವಾಗಿ ವಿಸ್ತರಿಸುವುದರ ಜೊತೆಗೆ ಅದಕ್ಕೆ ಅಗತ್ಯವಾದ ವಿದ್ಯುತ್ ಜಾಲ ಸುಧಾರಣೆಗಳನ್ನು ಕೈಗೊಳ್ಳಬೇಕು.

ಗೃಹ ಜ್ಯೋತಿಯ 12631 ಕೋಟಿ ಪಾವತಿಸಿ: ಗೃಹ ಜ್ಯೋತಿ ಯೋಜನೆಯಿಂದಾಗಿ ಯಾವುದೇ ಹೊರೆ ಆಗಿಲ್ಲ. ಆದರೆ, ಸರ್ಕಾರಿ ಇಲಾಖೆಗಳು ಎಸ್ಕಾಂಗಳಿಗೆ ಪಾವತಿಸಬೇಕಿರುವ 12,631 ಕೋಟಿ ರೂಪಾಯಿ ಬಾಕಿಯನ್ನು ತ್ವರಿತವಾಗಿ ಪಾವತಿಸುವುದು ಅಥವಾ ಹಣಕಾಸು ಭದ್ರತೆ (Securitisation) ಮೂಲಕ ಪರಿಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದರು.

ರೈತರ ಅನುಕೂಲಕ್ಕಾಗಿ ನಮ್ಮ ಸರ್ಕಾರ ಕೃಷಿ ವಿದ್ಯುತ್ ಸಹಾಯಧನವನ್ನು ವರ್ಷಕ್ಕೆ 22,000 ಕೋಟಿ ನೀಡುತ್ತಿದೆ. ಹೀಗಾಗಿ ಫೀಡರ್ ಸೌರೀಕರಣ (Feeder Solarisation), ಇಂಧನ–ದಕ್ಷ ಪಂಪ್‌ಸೆಟ್‌ಗಳ ಬಳಕೆ, ವಿದ್ಯುತ್ ಬೇಡಿಕೆ ನಿರ್ವಹಣೆ (Demand Side Management) ಕಾರ್ಯಕ್ರಮಗಳನ್ನು ವೇಗಗೊಳಿಸಿ ಎನ್ನುವ ಸೂಚನೆಯನ್ನು ಸಿಎಂ ನೀಡಿದರು. 2035ರ ವೇಳೆಗೆ ಗರಿಷ್ಠ ವಿದ್ಯುತ್ ಬೇಡಿಕೆ 38 ಗಿಗಾ ವ್ಯಾಟ್ (GW) ತಲುಪುವ ನಿರೀಕ್ಷೆ ಇರುವುದರಿಂದ ■10ನೇ ಪುಟಕ್ಕೆ

ಎಸ್‌ಐಆರ್ 'Sir' ಈ ಅಧ್ವಾನ

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಬಿಜೆಪಿ–ಜೆಡಿಎಸ್ ಆಕ್ರೋಶ

- ಬಾಂಗ್ಲಾ ದೇಶಿ ವಲಸಿಗರ ಮತದಾರರ ಪಟ್ಟಿಗೆ ಸೇರಿಸುವ ವ್ಯವಸ್ಥಿತ ಸಂಚಿಗೆ ಕಿಡಿ
- ಬೂತ್ ಮಟ್ಟದ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ವ್ಯಾಪಕ ಅಕ್ರಮಕ್ಕೆ ಹಾದಿ

ಬೆಂಗಳೂರು, ಜು.3(ಕೆಎಂಶಿ)– ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಹಸ್ತಕ್ಷೇಪ ಮಾಡಿ ಮತದಾರರಲ್ಲದವರನ್ನು ಉಳಿಸಿಕೊಳ್ಳಲು ಮುಂದಾಗಿದೆ ಎಂದು ಪ್ರತಿಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ಇಂದಿಲ್ಲಿ ಆರೋಪ ಮಾಡಿವೆ.

ಬೂತ್ ಮಟ್ಟದ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಬಾಂಗ್ಲಾದೇಶದ ಅಕ್ರಮ ವಲಸಿಗರ ಹೆಸರುಗಳನ್ನು ಮತದಾರರ ಪಟ್ಟಿಯಲ್ಲಿ ನಮೂದಿಸುವ ಕಾರ್ಯ ನಡೆಯುತ್ತಿದೆ ಎಂದು ದೂರಿವೆ.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಕೆಲವು ದಾಖಲೆಗಳ ಸಮೇತ ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದರೆ, ಕೇಂದ್ರದ ಮತ್ತೊಬ್ಬ ಸಚಿವೆ ಶೋಭಾ ಕರಂದ್ಲಾಜೆ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತ್ಯೇಕ ಸುದ್ದಿಗೋಷ್ಠಿಗಳನ್ನು ನಡೆಸಿ ರಾಜ್ಯ ಕಾಂಗ್ರೆಸ್ ಸರ್ಕಾರ ಅಕ್ರಮ ಮತದಾರರ ಪಟ್ಟಿ ತಯಾರಿಗೆ ಕಿಡಿಕಾರಿದ್ದಾರೆ.

ರಾಜಧಾನಿ ಬೆಂಗಳೂರಿನಲ್ಲೇ ಹಲವೆಡೆ ಪ್ರಕ್ರಿಯೆಯಲ್ಲಿ ಲೋಪಗಳು ಆಗುತ್ತಿದ್ದು, ಮುಖ್ಯಮಂತ್ರಿಗಳ ಮೂಗಿನ ನಡಿಯೇ ಈ ಕೃತ್ಯಗಳು ನಡೆಯುತ್ತವೆ ಎಂದು ದೂರಿದ್ದಾರೆ.

ರಾಜ್ಯ ಸರ್ಕಾರದ ಗುಲಾಮರಂತೆ ವರ್ತನೆ: ಕುಮಾರಸ್ವಾಮಿ ಮಾತನಾಡಿ,



SIR ದಂಧೆಯ ಚಿತ್ರಣ ಪ್ರದರ್ಶಿಸುತ್ತಿರುವ ಕೇಂದ್ರ ಸಚಿವ ಕುಮಾರಸ್ವಾಮಿ



ಶೋಭಾ ಕರಂದ್ಲಾಜೆ ಪತ್ರಿಕಾಗೋಷ್ಠಿ

ಮತದಾರರ ಪಟ್ಟಿ ಪರಿಷ್ಕರಣೆ ಅಧಿಕಾರಿಗಳು ರಾಜ್ಯ ಸರ್ಕಾರದ ಗುಲಾಮರಂತೆ ವರ್ತಿಸುತ್ತಿದ್ದು, ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ರಾಮ ಮಂದಿರದ ಬಗ್ಗೆ ಮಾತನಾಡುತ್ತಾರೆ, ಆದರೆ, ಎಸ್‌ಐಆರ್ ಹೆಸರಿನಲ್ಲಿ ಮತದಾರರ ಹುಂಡಿಯನ್ನೇ ಲೂಟಿ ಮಾಡಲು ಸರ್ಕಾರ ಹೊರಟಿದೆ.

ಇಂತಹ ಕೃತ್ಯಗಳಿಂದ ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡುವ ಕಾರ್ಯ ನಡೆದಿದೆ ಎಂದು ಟೀಕಿಸಿದರು.

ರಾಜ್ಯದ ವಿವಿಧ ಭಾಗಗಳಿಂದ ಮತದಾರರ ಪಟ್ಟಿ ಪರಿಷ್ಕರಣೆ ವೇಳೆ ನಡೆಯುತ್ತಿರುವ ಅಕ್ರಮಗಳ ವರದಿಗಳು ಬರುತ್ತಿವೆ. ಇದನ್ನು ಕೇಂದ್ರ ಚುನಾವಣಾ ಆಯೋಗದ ಗಮನಕ್ಕೆ ತಂದು ದೂರು ಸಲ್ಲಿಸಲಾಗುವುದು ಎಂದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಪ್ರತ್ಯೇಕ ಸುದ್ದಿಗೋಷ್ಠಿಯಲ್ಲಿ



ವಿಜಯೇಂದ್ರ ಮಾಧ್ಯಮ ಗೋಷ್ಠಿ.

ಮಾತನಾಡಿ, ಎಸ್‌ಐಆರ್ ಪ್ರಕ್ರಿಯೆಯಲ್ಲಿ ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ)ಗಳ ದುರುಪಯೋಗ ಆಗುತ್ತಿದೆ, ಅಧಿಕಾರಿಗಳನ್ನು ಮಸೀದಿಯಲ್ಲಿ ಕೂರಿಸಿ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳಿಸಲಾಗುತ್ತಿದೆ. ರಾಜ್ಯ ಸರ್ಕಾರ ಹಿಂದೂ ಮತದಾರರ ವಿರುದ್ಧ ಷಡ್ಯಂತ್ರ ನಡೆಸುತ್ತಿದೆ. ಸಾಗರದಲ್ಲಿ ಬಿಎಲ್‌ಓಗಳನ್ನು ಕಾಂಗ್ರೆಸ್ ■10ನೇ ಪುಟಕ್ಕೆ

ಗೃಹ ಜ್ಯೋತಿ ಮಾಹಿತಿ ಸಂಗ್ರಹಣೆ ವೇಳೆ ಜಾತಿಯನ್ನು ಹೇಳಲೇ ಬೇಕಿಲ್ಲ

ಬೆಂಗಳೂರು, ಜು.3(ಕೆಎಂಶಿ)– ಗೃಹಜ್ಯೋತಿ ಯೋಜನೆ ಮಾಹಿತಿ ಸಂಗ್ರಹಣೆ ವೇಳೆ ಜಾತಿ ಕುರಿತ ಮಾಹಿತಿ ನೀಡುವುದು ಕಡ್ಡಾಯವಲ್ಲ ಎಂದು ರಾಜ್ಯ ಸರ್ಕಾರ ಇಂದಿಲ್ಲಿ ಸ್ಪಷ್ಟನೆ ನೀಡಿದೆ.

ರಾಜ್ಯಾದ್ಯಂತ ಜುಲೈ 1 ರಿಂದ ಆರಂಭವಾಗಿರುವ ಗೃಹಜ್ಯೋತಿ ಯೋಜನೆಯ ಮಾಹಿತಿ ಸಂಗ್ರಹಕ್ಕೆ ಸಂಬಂಧಿಸಿದಂತೆ ಫಲಾನುಭವಿಯ ಜಾತಿ ಕುರಿತು ಕೇಳಿರುವ ಮಾಹಿತಿ ಕಡ್ಡಾಯವಲ್ಲ ಎಂಬುದಾಗಿ ಸರ್ಕಾರ ಸ್ಪಷ್ಟಪಡಿಸಿದೆ. ಗೃಹಜ್ಯೋತಿ ಯೋಜನೆಗೆ ಜಾತಿ ವಿವರ ಕಡ್ಡಾಯ ಎಂಬುದಾಗಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದ ಬೆನ್ನಲ್ಲೇ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ಈ ನಿರ್ಧಾರ ಕೈಗೊಂಡಿದೆ.

ವಿದ್ಯುತ್ ವಿತರಣಾ ಸಂಸ್ಥೆ ಸಿಬ್ಬಂದಿ ಹಾಗೂ ಮೀಟರ್ ರೀಡರ್‌ಗಳು ಸೇವಾ ಸಿಂಧು ಮೊಬೈಲ್ ಅಪ್ಲಿಕೇಷನ್ ಹಾಗೂ ಮುದ್ರಿತ ಘೋಷಣಾ ಪತ್ರದ ಮೂಲಕ ಮನೆಗೆ ತೆರಳಿ ಮಾಹಿತಿ ಕಲೆ ಹಾಕುತ್ತಿದ್ದು, ಫಲಾನುಭವಿಯ ಜಾತಿ ಪ್ರಮಾಣಪತ್ರಕ್ಕೆ ಸಂಬಂಧಿಸಿದ ಮಾಹಿತಿ ಐಚ್ಛಿಕ ವಿಷಯವಾಗಿದೆ ಎಂದಿದೆ. ಜಾತಿ ಮಾಹಿತಿ ನೀಡಲು ಇಷ್ಟವಿಲ್ಲದಿದ್ದರೆ ಮೊಬೈಲ್ ಅಪ್ಲಿಕೇಷನ್‌ನಲ್ಲಿ ಫಲಾನುಭವಿಗಳಿಂದ ಮಾಹಿತಿ ನೀಡಲು ನಿರಾಕರಣೆ ಎಂಬ ಆಯ್ಕೆ ನಮೂದಿಸಲು ಸಿಬ್ಬಂದಿಗೆ ಸೂಚಿಸಲಾಗಿದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಡಿಕೆಶಿ ಮುಖ್ಯಮಂತ್ರಿಯಾಗಿ 30 ದಿನ

- ಅಲ್ಪ ಕಾಲದಲ್ಲೇ ಕೈಗೊಂಡ ಮಹತ್ವದ ತೀರ್ಮಾನಗಳ ಪಟ್ಟಿ ಬಿಡುಗಡೆ
- ಸರ್ಕಾರದ ಕ್ಷಿಪ್ರ ಗತಿಯ ಕಾರ್ಯ ನಿರ್ವಹಣೆ ಸಾಕ್ಷ್ಯ ಸಾದರ

ಬೆಂಗಳೂರು, ಜು.3(ಕೆಎಂಶಿ)–ಡಿ.ಕೆ.ಶಿವಕುಮಾರ್ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು 30 ದಿನಗಳಾದವು. ಈ ವೇಳೆ ಕೈಗೊಂಡ ಮಹತ್ವದ ತೀರ್ಮಾನಗಳನ್ನು ಮುಖ್ಯಮಂತ್ರಿ ಸಚಿವಾಲಯ ಪಟ್ಟಿ ಮಾಡಿ ಮಾಧ್ಯಮಕ್ಕೆ ಬಿಡುಗಡೆ ಮಾಡಿದೆ.



ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ಎಲ್ಲಾ ಪಂಚಾಯತ್, ವಾರ್ಡ್‌ಗಳಲ್ಲಿ ಭಾರತ್ ಜೋಡೋ ಯುವಕರ ಸಂಘ ಸ್ಥಾಪನೆ, ತಲಾ 10 ಲಕ್ಷ ರೂ. ನೀಡುವ ನಿರ್ಣಯ.

2500 ಅಡಿವರೆಗಿನ ನೂತನ ವಸತಿ ಕಟ್ಟಡಗಳಿಗೆ ಶಾಶ್ವತ ವಿದ್ಯುತ್ ಸಂಪರ್ಕಕ್ಕೆ ಒಸಿ ವಿನಾಯಿತಿ, ರಾಜ್ಯದೆಲ್ಲೆಡೆ 'ಬಿ' ಯಿಂದ 'ಎ' ಖಾತಾ ಪರಿವರ್ತನೆ. ಬೆಂಗಳೂರಿನ ರಸ್ತೆಗಳನ್ನು ಗುಂಡಿ ಮುಕ್ತಗೊಳಿಸಲು 2 ಸಾವಿರ ಕೋಟಿ ರೂ. ಯೋಜನೆ, ಖಾಸಗಿ ವಲಯದ ಉದ್ಯೋಗ ವಿನಿಮಯ ಕೇಂದ್ರ ಸ್ಥಾಪಿಸಲು ತೀರ್ಮಾನ.

ಆರು ತಿಂಗಳಲ್ಲಿ 72 ಸಾವಿರ ಸರ್ಕಾರಿ ಹುದ್ದೆಗಳ ನೇಮಕಾತಿಗೆ, ಸಾರ್ವಜನಿಕರ ಕುಂದುಕೊರತೆ, ಅಹವಾಲು ಆಲಿಸಲು 'ಪ್ರಜಾಸೇವೆ' ಪ್ರತ್ಯೇಕ ಸಚಿವಾಲಯ ಸ್ಥಾಪನೆ.

ಶಾಸಕರು, ಮಂತ್ರಿಗಳ ಒತ್ತಡಕ್ಕೆ ಮಣಿಯದೇ ಕಾನೂನು ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಲು ಅಧಿಕಾರಿಗಳಿಗೆ ಸೂಚನೆ, ಗ್ಯಾರಂಟಿ ಯೋಜನೆಗಳು ಕರ್ನಾಟಕದವರಿಗೆ ಮಾತ್ರ ಲಭ್ಯವಾಗುವಂತೆ ನೋಡಿಕೊಳ್ಳುವುದು ಹಾಗೂ ಸೋರಿಕೆ ತಪ್ಪಿಸಲು ಕ್ರಮ ಕೈಗೊಳ್ಳುವುದು.

ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನ 5ನೇ ಅಭ್ಯರ್ಥಿ ವಿನಯ್ ಕಾರ್ತಿಕ್ ಗೆಲುವು.


ರೌಡಿಗಳ ನಿಗ್ರಹಕ್ಕೆ ಪೊಲೀಸ್ ಇಲಾಖೆಯಲ್ಲಿ ಜಿಲ್ಲೆಗೊಂದು ಪಡೆ ರಚನೆ, ಭ್ರಷ್ಟಾಚಾರ ವಿರುದ್ಧ ದೂರು ನೀಡಲು ದೂರವಾಣಿ ಸಂಖ್ಯೆ, ಮೀಟರ್ ಬಡ್ಡಿ ದಂಧೆಗೆ ಕಡಿವಾಣ ಹಾಕಲು ಅಧಿಕಾರಿಗಳಿಗೆ ನಿರ್ದೇಶನ. ಕೇಂದ್ರದ ನೀತಿ ಆಯೋಗ ಸಭೆಯಲ್ಲಿ ಕರ್ನಾಟಕದ ಬೇಡಿಕೆಗಳ ಪ್ರಸ್ತಾಪ, ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಷಾ, ಸಿ.ಆರ್.ಪಾಟೀಲ್, ನಿರ್ಮಲಾ ಸೀತರಾಮನ್, ಮನೋಹರ್‌ಲಾಲ್ ಖಟ್ಟರ್ ■10ನೇ ಪುಟಕ್ಕೆ

ಅಯೋಧ್ಯೆಯ ರಾಮ ಮಂದಿರದ ದೇಣಿಗೆ ಲೂಟಿ ಪ್ರಕರಣ

ಮೌನ ಮುರಿದ ಆರ್‌ಎಸ್‌ಎಸ್; ಕೋಟ್ಯಾಂತರ ರಾಮ ಭಕ್ತರಿಗೆ ನೋವಾಗಿದೆ

ನವದೆಹಲಿ, ಜು.3– ಅಯೋಧ್ಯೆಯ ರಾಮಮಂದಿರದ ದೇಣಿಗೆಯಿಂದ ಕೋಟ್ಯಾಂತರ ರೂಪಾಯಿ ಲೂಟಿ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೇ ಮೊದಲ ಬಾರಿಗೆ ಆರ್‌ಎಸ್‌ಎಸ್ ಮೌನ ಮುರಿದಿದೆ. ಈ ದುರದೃಷ್ಟಕರ ಘಟನೆಯ ಸುತ್ತ ಸೃಷ್ಟಿಯಾಗಿರುವ ಗೊಂದಲ ಮತ್ತು ಅನಿಶ್ಚಿತತೆ ಗಳು ತಕ್ಷಣವೇ ಕೊನೆಗೊಳ್ಳಬೇಕು ಎಂದು ಆರ್‌ಎಸ್‌ಎಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಒತ್ತಾಯಿಸಿದ್ದಾರೆ.





ದೇಣಿಗೆಗಳಿಂದ ಹಣ ಕಳುವಾಗಿರುವ ಘಟನೆಯು ಕೋಟ್ಯಾಂತರ ರಾಮಭಕ್ತರ ಶ್ರದ್ಧೆ ಹಾಗೂ ನಂಬಿಕೆಗೆ ನೋವಾಗಿದೆ. ಈ ಘಟನೆಯಿಂದ ನಾವೆಲ್ಲರೂ ತೀವ್ರವಾಗಿ ನೊಂದಿದ್ದೇವೆ ಎಂದು ದತ್ತಾತ್ರೇಯ ಹೊಸಬಾಳೆ ತಿಳಿಸಿದ್ದಾರೆ.

ಮಂದಿರದ ಆಡಳಿತ ಮಂಡಳಿ ಹಾಗೂ ಎಸ್‌ಐಟಿ ತನಿಖಾ ತಂಡವು ಈ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಅಗತ್ಯವಿರುವ ಎಲ್ಲಾ ಕಠಿಣ ಕ್ರಮಗಳನ್ನು ತಕ್ಷಣವೇ ಕೈಗೊಳ್ಳಬೇಕು. ಸಾರ್ವಜನಿಕರಲ್ಲಿ ಸದ್ಯ ಮೂಡಿರುವ ಗೊಂದಲ ಮತ್ತು ಅನಿಶ್ಚಿತತೆಗೆ ಆಡಳಿತ ಮಂಡಳಿ ಶೀಘ್ರವಾಗಿ ತೆರೆ ಎಳೆಯಬೇಕು ಎಂದು ಹೇಳಿದರು.

ಹಿಂದು ವಿರೋಧಿ ಸಂಚು: ಈ ಕಠಿಣ ಸಮಯದಲ್ಲಿ ಇಡೀ ಹಿಂದೂ ಸಮಾಜವು ಅಗತ್ಯ ಸಂಯಮ ■10ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಶೂಟೌಟ್ ಪ್ರಕರಣ

ಕಾನೂನು, ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸೇರಿ ಏಳು ಮಂದಿ ಬಂಧನ

ಕೃತ್ಯಕ್ಕೆ ಬಳಸಿದ್ದ ಪಿಸ್ತೂಲ್, ಕಾರು ಪೊಲೀಸ್ ವಶಕ್ಕೆ

ಮಂಡ್ಯ, ಜು.3– ನಗರದ ಹೊರವಲಯದ ಅಮರಾವತಿ ಹೋಟೆಲ್ ಸಮೀಪ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಗುರುವಾರ ಮುಂಜಾನೆ ಗೂಡ್ಸ್ ವಾಹನದ ಚಾಲಕನ ಮೇಲಿನ ಶೂಟೌಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸೇರಿದಂತೆ 7 ಮಂದಿಯನ್ನು ಬಂಧಿಸಿದ್ದು, ಕೃತ್ಯಕ್ಕೆ ಬಳಸಿದ್ದ ಕಾರು, ಒಂದು ಪಿಸ್ತೂಲ್, ಕಾರ್ಬನ್ ರೀಫಿಲ್ಸ್–2 ಪಿಲ್ಲೆಟ್ಸ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.



ರೋಹನ್‌ಗೌಡ

> ಇದು ಕ್ಷುಲ್ಲಕ ಕಾರಣಕ್ಕೆ ನಡೆದಿರುವ ಘಟನೆ. ದರೋಡೆ ಇಲ್ಲ ದರೋಡೆ ಯತ್ನವೂ ಅಲ್ಲ. ಕಾರಿನಲ್ಲಿ ಬರುತ್ತಿದ್ದವರಿಗೆ ಗೂಡ್ಸ್ ವಾಹನದ ಚಾಲಕ ಸೈಡ್ ಕೊಡದೆ ಸತಾಯಿಸಿದ ಎಂಬ ಕಾರಣಕ್ಕೆ ಓವರ್‌ಟೇಕ್ ಮಾಡಿಕೊಂಡು ಬಂದು ಶೂಟೌಟ್ ಮಾಡಲಾಗಿದೆ. ಇದನ್ನು ಬಿಟ್ಟರೆ ಬೇರೆ ಯಾವ ಉದ್ದೇಶವೂ ಇಲ್ಲ.
>
> -ಡಾ.ವಿ.ಜೆ.ಶೋಭಾರಾಣಿ, ಮಂಡ್ಯ ಜಿಲ್ಲಾ ಎಸ್ಪಿ



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ. ಶೋಭಾರಾಣಿ, ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಶೂಟೌಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಡ್ಯ ಅಶೋಕ ನಗರದ ನಿವಾಸಿ, ಖ್ಯಾತ ಉದ್ಯಮಿ ವಿಶಾಲ್ ರಘು ಅವರ ಪುತ್ರ ಕಾನೂನು ವಿದ್ಯಾರ್ಥಿ ಎಚ್.ವಿ.ರೋಹನ್‌ಗೌಡ(23), ಮರೀಗೌಡ ಬಡಾವಣೆಯ ತಮ್ಮಣ್ಣ ಅವರ ಪುತ್ರ ಬಿ.ಇ. ವಿದ್ಯಾರ್ಥಿ ಶಶಾಂಕ್(25), ಕಾರಸವಾಡಿ ರಸ್ತೆಯಲ್ಲಿರುವ ದ್ವಾರಕಾನಗರದ ನಿವಾಸಿ ಕಲೀಲ್ ಅವರ ಪುತ್ರ ಅಫಾನ್ (25), ಕುವೆಂಪು ನಗರದ ನಿವಾಸಿ ಮಹಮ್ಮದ್ ಜಾಫರ್ ಅವರ ಪುತ್ರ ಮಹಮ್ಮದ್ ಉಮರ್, ವಿದ್ಯಾನಗರದ ಜೋಸೆಫ್ ಅವರ ಪುತ್ರ ನಿತಿನ್(27), ಗಾಂಧಿ ನಗರದ ಮಹಮ್ಮದ್ ಅಬಿಬುಲ್ಲ ಅವರ ಪುತ್ರ ಮಹಮ್ಮದ್ ಅಬೂಬಕರ್ (25) ಮತ್ತು ವಿದ್ಯಾನಗರದ ನಿವಾಸಿ, ಜೋಸೆಫ್ ಅವರ ಪುತ್ರ ಡೆಲಿವರಿ ಹೆಡ್ ಸಚಿನ್ (26) ಅವರುಗಳನ್ನು ಬಂಧಿಸಲಾಗಿದೆ ಎಂದು ವಿವರಿಸಿದರು.

ಘಟನೆಯ ಹಿನ್ನೆಲೆ: ಮೈಸೂರಿನ ಗೋಕುಲಂ ನಿವಾಸಿ, ಸೂಪರ್ ಸ್ಪೀಡ್ ಸರ್ವೀಸ್ ಕೊರಿಯರ್‌ನಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿರುವ ಶಂಕರ್ ಅವರು ಜು.2ರಂದು ತಡರಾತ್ರಿ ಬೆಂಗಳೂರಿನ ಕೊರಿಯರ್ ಕಚೇರಿಯಿಂದ ಪಾರ್ಸಲ್ ತುಂಬಿಕೊಂಡು ಟಾಟಾ ಗೂಡ್ಸ್ ವಾಹನದಲ್ಲಿ ಮೈಸೂರಿಗೆ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಮುಂಜಾನೆ 4.50ರ ಸಮಯದಲ್ಲಿ ಬರುತ್ತಿರುವಾಗ ಮಂಡ್ಯ ಹೊರವಲಯದಲ್ಲಿರುವ ಅಮರಾವತಿ ಹೋಟೆಲ್ ಬಳಿ ಹಿಂಬದಿ ಕಾರಿನಲ್ಲಿ ಬರುತ್ತಿದ್ದ ಆರೋಪಿ ಎಚ್.ವಿ.ರೋಹನ್‌ಗೌಡ ಮತ್ತು ಸ್ನೇಹಿತರು ಗೂಡ್ಸ್ ವಾಹನವನ್ನು ಓವರ್ ಟೇಕ್ ಮಾಡಿ, ಅದನ್ನು ಅಡ್ಡಗಟ್ಟಿ ಚಾಲಕ ಶಂಕರ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ವಿವರಿಸಿದರು.

ಕಾರಿನ ಚಾಲಕ ಕಿಟಕಿ ಮೂಲಕ ಪಿಸ್ತೂಲ್ ಹೊರತೆಗೆದು ಗಾಳಿಯಲ್ಲಿ ಗುಂಡು ಹಾರಿಸಿದ್ದಾನೆ. ಆದರೆ, ಯಾವುದೇ ಅನಾಹುತ ಸಂಭವಿಸಿಲ್ಲ. ನಂತರ ಕಾರಿನ ಚಾಲಕ ಹಾಗೂ ಕಾರಿನಲ್ಲಿದ್ದ ಇನ್ನುಳಿದವರು ಕಾರನ್ನು ನಿಲ್ಲಿಸದೆ ವೇಗವಾಗಿ ಚಾಲನೆ ಮಾಡಿಕೊಂಡು ಪರಾರಿಯಾದರು ಎಂದು ಅವರು ಘಟನೆಯ ವಿವರಗಳನ್ನು ನೀಡಿದರು.

ನಂತರ ಈ ಘಟನೆಯಿಂದ ಹೆದರಿದ ಗೂಡ್ಸ್ ವಾಹನದ ಚಾಲಕ ಶಂಕರ್ ವಾಹನವನ್ನು ಮೈಸೂರಿನಲ್ಲಿರುವ ತಮ್ಮ ಕಚೇರಿಗೆ ತೆಗೆದುಕೊಂಡು ಹೋಗಿ ನಿಲ್ಲಿಸಿ ಸುಮ್ಮನಾಗಿದ್ದ. ಪೊಲೀಸ್ ಮೂಲಗಳಿಂದ ವಿಷಯ ತಿಳಿದು ಚಾಲಕ ಶಂಕರ್‌ನನ್ನು ಕರೆಯಿಸಿ ವಿಚಾರಣೆ ಮಾಡಲಾಗಿ ಘಟನೆ ■10ನೇ ಪುಟಕ್ಕೆ

ಶ್ರೀರಂಗಪಟ್ಟಣ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ

ಖಾಸಗಿ ವ್ಯಕ್ತಿಯಿಂದ 'ಸರ್ಕಾರಿ' ದರ್ಬಾರ್

■ ಎಡಿಎಲ್‌ಆರ್ ತಾನು ಹೋದಲ್ಲೆಲ್ಲಾ ಈತನಿಗೆ 'ಸರ್ಕಾರಿ' ಉಸಾಬರಿ ■ ಅಧಿಕಾರಿಗಳಿಂದಲೇ ಈತನಿಗೆ 15 ಸಾವಿರ ವೇತನ ■ ಭೂ ದಾಖಲೆಗಳ ಕಚೇರಿಯ ಪೂರ್ಣ ಹಿಡಿತ ಈ 'ಖಾಸಗಿ' ವ್ಯಕ್ತಿ ಕೈಯ್ಯಲ್ಲಿ! ■ ಕಚೇರಿಯ ಎಲ್ಲಾ ಸಿಬ್ಬಂದಿಯಿಂದಲೂ ಈತನಿಗೆ ಸಲಾಂ; ದಕ್ಷಿಣೆ ಸಲ್ಲಿಕೆ ■ ಎಡಿಎಲ್‌ಆರ್ ಜೊತೆ ಮೈಸೂರಲ್ಲೇ ವಾಸ; ಇವನಲ್ಲಿದ್ದವು ಹಲವು ತಹಶೀಲ್ದಾರ್‌ಗಳ ಸೀಲು ■ 200 ಎಕರೆ ಸರ್ಕಾರಿ ಭೂಮಿ ಕಂಡಕಂಡವರಿಗೆ ಧಾರೆಯೆರೆಯುವ ಪ್ರಯತ್ನದಲ್ಲಿ ಎಲ್ಲವೂ ಬಟಾಬಯಲು!! ■ ಎಡಿಎಲ್‌ಆರ್ ಪರಾರಿ, ಉಳಿದವರ ಬಂಧಿಸಿ ನ್ಯಾಯಾಂಗ ಬಂಧನಕ್ಕೊಪ್ಪಿಸಿದ ಪೊಲೀಸರು

ಶ್ರೀರಂಗಪಟ್ಟಣ, ಜು.3– ತಾಲೂಕಿನ ಭೂದಾಖಲೆಗಳ ಸಹಾಯಕ ನಿರ್ದೇಶಕರ (ಎಡಿಎಲ್‌ಆರ್) ಕಚೇರಿಯಲ್ಲಿ ಖಾಸಗಿ ವ್ಯಕ್ತಿಯೊಬ್ಬ ಸರ್ಕಾರಿ ನೌಕರನ ಸೋಗಿನಲ್ಲಿ ಅನಧಿಕೃತವಾಗಿ ಡಾಟಾ ಎಂಟ್ರಿ ಆಪರೇಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ಆತನಿಗೆ ಅಧಿಕಾರಿಗಳೇ ವೇತನ ನೀಡುತ್ತಿದ್ದ ಸಂಗತಿ ಲೋಕಾಯುಕ್ತ ಅಧಿಕಾರಿಗಳ ಪರಿಶೀಲನೆ ವೇಳೆ ಬಯಲಾಗಿದೆ. ಅಲ್ಲದೆ, ಈ ಖಾಸಗಿ ವ್ಯಕ್ತಿ ಸಹಕಾರದಲ್ಲಿ ಸಾಕಷ್ಟು ಅಕ್ರಮಗಳನ್ನು ನಡೆಸಿರುವ ಶಂಕೆ ವ್ಯಕ್ತವಾಗಿದೆ.



ನಿತಿನ್ | ಮಹಮ್ಮದ್ ಹುಸೇನ್ | ಯೋಗರಾಜ್ | ಅರವಿಂದ್ | ಜಯಬೋರೇಗೌಡ



ದಯಾನಂದ್ | ಮಧು | ರಮೇಶ್ | ಹರೀಶ್ | ನಿಶಾ

ಮೈಸೂರಿನ ಶಿವರಾತ್ರೀಶ್ವರನಗರದಲ್ಲಿ ಎಡಿಎಲ್‌ಆರ್ ಮಹಮ್ಮದ್ ಹುಸೇನ್ ಅವರೊಂದಿಗೇ ವಾಸವಿದ್ದ ನಿತಿನ್ ಪ್ರೇಮಾನಂದ ಮಹಾಲೆ, ಅನಧಿಕೃತವಾಗಿ ಸರ್ಕಾರಿ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವ್ಯಕ್ತಿ. ಈ ಇಬ್ಬರು ವಾಸವಿರುವ ಮನೆಯ ಶೋಧನಾ ಸಮಯದಲ್ಲಿ ಹುಣಸೂರು ತಹಶೀಲ್ದಾರ್, ಶಂಕರ ಭೂಮಾಪಕರು, ಪರ್ಯಾವೇಕ್ಷಕರು ಸೇರಿದಂತೆ ವಿವಿಧ ಜಿಲ್ಲೆಗಳ ಹಲವು ಭೂಮಾಪಕರ ಸೀಲುಗಳು ಪತ್ತೆಯಾಗಿವೆ.

ಈ ಸಂಬಂಧ ಮಂಡ್ಯ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ಪಿ.ಬ್ಯಾಟರಾಯಗೌಡ ಅವರು ನೀಡಿದ ದೂರಿನನ್ವಯ ಶ್ರೀರಂಗಪಟ್ಟಣ ಪೊಲೀಸ್ ಠಾಣೆಯಲ್ಲಿ ಖಾಸಗಿ ವ್ಯಕ್ತಿ ನಿತಿನ್ ಪ್ರೇಮಾನಂದ ಮಹಾಲೆ, ಎಡಿಎಲ್‌ಆರ್ ಮಹಮ್ಮದ್ ಹುಸೇನ್, ಸರ್ವೆ ಸೂಪರ್‌ವೈಸರ್ ಯೋಗರಾಜ್, ಸರ್ವೆಯರ್(ಭೂಮಾಪಕರು)ಗಳಾದ ಅರವಿಂದ್, ಜಯಬೋರೇಗೌಡ, ದಯಾನಂದ್, ಮಧು, ರಮೇಶ್, ಹರೀಶ್ ಹಾಗೂ ನೇಶಾ ಸಾರಿಕ ಮಲ್ಲಿ ಸೇರಿದಂತೆ ಹತ್ತು ಮಂದಿ ವಿರುದ್ಧ ಗುರುವಾರ ಎಫ್‌ಐಆರ್ ದಾಖಲಾಗಿದೆ. ■10ನೇ ಪುಟಕ್ಕೆ



ನಿತಿನ್ ಮನೆಯಲ್ಲಿ ಸಿಕ್ಕ ಸೀಲುಗಳು

ನಕ್ಕರೆ ಅದೇ ಸ್ವರ್ಗ

ಹಳ್ಳಿಗೆ ಕರೆಂಟ್ ಬರುವ ಸುದ್ದಿ ಕೇಳಿ ಗ್ರಾಮಸ್ಥರು ಖುಷಿಯಿಂದ ಕುಣಿದರು. ಒಂದು ನಾಯಿ ಕೂಡ ಕುಣಿಯುತ್ತಿತ್ತು.

ಗುಂಡ : ನಿನಗೇಕೆ ಖುಷಿ?

ನಾಯಿ : ಕರೆಂಟ್ ಜೊತೆ ಕಂಬ ಕೂಡ ಬರುತ್ತಲ್ವ!

ಮೈಸೂರು ಮಿತ್ರ

ಶನಿವಾರ, ಜುಲೈ 4, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಅದೃಷ್ಟ ನಮ್ಮ ಕೈಯಲ್ಲಿ ಇರುತ್ತೋ ಇಲ್ವೋ ಗೊತ್ತಿಲ್ಲ. ಆದರೆ ನಿರ್ಧಾರ ಮಾತ್ರ ನಮ್ಮ ಕೈಯಲ್ಲೇ ಇರುತ್ತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ತತ್ವದಲ್ಲಿ ಸತ್ವ ಹುಡುಕು, ವ್ಯಥೆಯಲ್ಲಿ ಕಥೆ ಹುಡುಕು.

ನಿಮ್ಮ ಪತ್ರಗಳು

ಕಂದಾಯ ಪಾವತಿಸುವವರು ಕುರ್ಚಿಗಾಗಿ ಕಚೇರಿಯಲ್ಲಿ ಭಿಕ್ಷೆ ಬೇಡಬೇಕಾ?

ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಡುವ ವಲಯ ಕಚೇರಿ–7 ರಲ್ಲಿ ಕುರ್ಚಿಗಾಗಿ ಭಿಕ್ಷೆ ಬೇಡುವ ಪರಿಸ್ಥಿತಿ ಇದೆ. ವಲಯ ಕಚೇರಿ–7 ರಲ್ಲಿ ಸ್ಥಳೀಯ ನಿವಾಸಿಯಾದ ಸುಮಾರು 65–70 ವರ್ಷದ ವಯೋವೃದ್ಧರೊಬ್ಬರು ಪೌತಿ ಖಾತೆಗಾಗಿ ಅರ್ಜಿ ಸಲ್ಲಿಸಿದ್ದರು.

ಇನ್ನು ತಮ್ಮಗಳ ಹೆಸರಿಗೆ ಪೌತಿ ಖಾತೆ ವರ್ಗಾವಣೆಗೊಳ್ಳದ್ದರಿಂದ ವಿಚಾರಿಸುವ ಸಲುವಾಗಿ ಕಚೇರಿಗೆ ಭೇಟಿ ನೀಡಿದ್ದರು. ಆದರೆ ದಾಖಲೆಗಳಲ್ಲಿ ಅಲ್ಲಿನ ಸಿಬ್ಬಂದಿಗೆ ಗೊಂದಲವಿದ್ದದ್ದರಿಂದ ಪೌತಿ ಖಾತೆ ವರ್ಗಾವಣೆಗೊಂಡಿರಲಿಲ್ಲ. ನಂತರ ವಯೋವೃದ್ಧರು ನನ್ನನ್ನು ಕರೆಸಿಕೊಂಡು ದಾಖಲೆಗಳ ಬಗ್ಗೆ ಸಿಬ್ಬಂದಿಗೆ ಅರಿವು ಮೂಡಿಸುವಂತೆ ತಿಳಿಸಿದರು. ನಾನು ದಾಖಲೆಗಳ ಬಗ್ಗೆ ಸೂಕ್ತವಾದ ವಿವರಣೆ ಕೊಟ್ಟೆ.

ನಂತರ ಸಹಜವಾಗಿ ಸಿಬ್ಬಂದಿ ಬಳಿ ಹೋದಾಗ ಅಲ್ಲಿ ಕುಳಿತುಕೊಳ್ಳಲು ಯಾವುದೇ ಕುರ್ಚಿಗಳು ಕಾಣಲಿಲ್ಲ. ಇದನ್ನು ಗಮನಿಸಿ ವಯೋವೃದ್ಧರಿಗೆ ನೀವು ಬಂದು ಎಷ್ಟು ಹೊತ್ತಾಯಿತು ಎಂದು ಕೇಳಿದೆ. ಅದಕ್ಕೆ ಒಂದೂವರೆ ಗಂಟೆಯಾಯಿತು ಎಂದರು. ಸಿಬ್ಬಂದಿಗೆ ಇದರ ಬಗ್ಗೆ ಪ್ರಶ್ನೆ ಮಾಡಿದರೆ, ಕುರ್ಚಿ ಬೇಕಾದರೆ ಎಸಿಯವರನ್ನು ಹೋಗಿ ಕೇಳಿ ಎಂದರು ಮತ್ತು ಸಿಎಂ ಕುರ್ಚಿಯೇ ಗ್ಯಾರಂಟಿ ಇಲ್ಲ ನಿಮಗ್ಯಾವ ಕುರ್ಚಿ ಹಾಕಲಿ ಎಂದು ಸಿಬ್ಬಂದಿಯಿಂದ ದರ್ಪದ ಉತ್ತರ ಬಂತು.

ನಂತರ ಇವರು ಹೇಳಿದಂತೆ ವಯೋವೃದ್ಧರನ್ನು ಕರೆದುಕೊಂಡು ಎಸಿ ಕೊಠಡಿಗೆ ತೆರಳಿದೆ. ಆದರೆ ಎಸಿಯವರು ಆ ಸಮಯದಲ್ಲಿ ಲಭ್ಯವಿರಲಿಲ್ಲ. ಆದರೆ ಆಶ್ಚರ್ಯವೆಂದರೆ ಎಸಿ ಕೊಠಡಿಯಲ್ಲಿ ಫಂಕ್ಷನ್ ಹಾಲ್‌ನಲ್ಲಿ ಒಂದರೊಳಗೆ ಒಂದು ಕುರ್ಚಿ ಜೋಡಿಸಿಡುವ ಹಾಗೆ ಸುಮಾರು 10–20 ಕುರ್ಚಿಗಳನ್ನು ಇಟ್ಟುಕೊಂಡಿದ್ದರು. ಇದನ್ನು ಅಲ್ಲಿದ್ದ ಸಿಬ್ಬಂದಿಯನ್ನು ಕೇಳಿದೆ. ಇಷ್ಟೊಂದು ಕುರ್ಚಿ ಇದೆಯಲ್ಲ. ವಯೋವೃದ್ಧರಿಗೆ ಕುರ್ಚಿ ಕೊಡ ಬಾರದ ಎಂದು ಕೇಳಿದ್ದಕ್ಕೆ ಅಲ್ಲಿನ ಸಿಬ್ಬಂದಿ ಬಹಳ ನಯವಾಗಿ ಉತ್ತರಿಸಿದರು. ಸಾರ್ ನಮ್ಮ ಎಸಿಯವರ ಪರ್ಮಿಷನ್ ಇಲ್ಲದೆ ನಾವು ಏನು ಮಾಡಲಾಗುವುದಿಲ್ಲ ನಾವು ಅಸಹಾಯಕರು ಸಾರ್. ಕುರ್ಚಿ ಬೇಕಾದರೆ ಎಸಿ ಹತ್ತಿರ ಭಿಕ್ಷೆ ಬೇಡಬೇಕಾ. ಎಸಿಯವರನ್ನು ಕೇಳುವುದಾದರೆ ರೆವಿನ್ಯೂ ಇನ್ಸ್‌ಪೆಕ್ಟರ್ ಕಂದಾಯ ಕಟ್ಟಿ ಎಂದು ಮನೆ ಹತ್ತಿರ ಬರುವ ಬದಲು ಎಸಿಯವರನ್ನು ಕಂದಾಯ ಕಟ್ಟಿಸಿಕೊಳ್ಳಲು ಮನೆಗಳ ಹತ್ತಿರ ಕಳುಹಿಸಲಿ.

ಕಂದಾಯ ಕಟ್ಟುವುದು ಸಾರ್ವಜನಿಕರು, ಇವರುಗಳು ಕಂದಾಯ ಪಾವತಿಸುವುದರಿಂದ ಆಯುಕ್ತರು, ಅಧಿಕಾರಿಗಳ ಕುರ್ಚಿ, ಕಾರ್, ಸಂಬಳ ಎಲ್ಲವು ಬರುವುದು. ಸಾರ್ವಜನಿಕರಿಗೆ ಒಂದು ಕುರ್ಚಿ ಇಲ್ಲ ಎಂದ ಮೇಲೆ ಕಂದಾಯ ಯಾಕೆ ಪಾವತಿಸಬೇಕು. ಇದು ಒಂದು ವಲಯ ಕಛೇರಿಯಲ್ಲಿ ಮಾತ್ರ ಕಾಣಬರುವ ದೃಶ್ಯವಲ್ಲ.

ಒಂದು ವಲಯ ಕಚೇರಿಯಲ್ಲಿ 'ಸಿಬ್ಬಂದಿಗಳ ಕುರ್ಚಿಯಲ್ಲಿ ಸಾರ್ವಜನಿಕರು ಕುಳಿತು ಕೊಳ್ಳಬಾರದು' ಎಂಬ ಬರಹವನ್ನು ಗೋಡೆಗೆ ಅಂಟಿಸಿರುವುದನ್ನು ಕಾಣಬಹುದು. ಮತ್ತು ಎಲ್ಲಾ ಒಂಭತ್ತು ವಲಯ ಕಚೇರಿಗಳಲ್ಲಿ ಇಂದಿನ ದಿನಗಳಲ್ಲಿ ಸಾರ್ವಜನಿಕರಿಗೆ ಕುರ್ಚಿಗಳನ್ನು ತೆಗೆದು ಹಾಕಿ ತಮ್ಮ ಕುರ್ಚಿಗಳನ್ನು ಭದ್ರ ಮಾಡಿಕೊಂಡು ಮಾತನಾಡಿಸುತ್ತಾರೆ. ಇನ್ನು ಮುಂದೆ ಆದರು ನಗರ ಪಾಲಿಕೆ ಆಯುಕ್ತರು ಕಂದಾಯ ಕಟ್ಟುವವರಿಗೆ ಕಚೇರಿಗಳಲ್ಲಿ ಕುರ್ಚಿಗಳನ್ನು ಹಾಕುವಂತೆ ಸೂಚಿಸಲಿ.

–ಎಂ.ಎನ್.ಧರಣಿ ವೆಂಕಟೇಶ, ಸಾಮಾಜಿಕ ಕಾರ್ಯಕರ್ತ, ಮೈಸೂರು

ಬ್ರಾಹ್ಮಣ ಸಂಪ್ರದಾಯದವರಿಗೆ ಎಸ್‌ಐಆರ್ ಅನಿವಾರ್ಯವೇ?

ಮಾನ್ಯರೆ,

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇತ್ತೀಚೆಗೆ ಒಂದು ಮಾತನ್ನು ಹೇಳಿ, ಜನರನ್ನು ಸಾಕಷ್ಟು ಹುರಿದುಂಬಿಸಿದ್ದಾರೆ. ಅದೇನೆಂದರೆ, ಎಸ್‌ಐಆರ್‌ನ ಸರ್ವೇ ಸಮಯದಲ್ಲಿ ನೀಡಬೇಕಾದ ನಿರ್ದಿಷ್ಟವಾದ ಮಾಹಿತಿಗಳನ್ನು ಒದಗಿಸಲು ವಿಫಲರಾದಲ್ಲಿ ಅಂತಹವರು ಸರ್ಕಾರದ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗುತ್ತಾರೆ ಎಂದು. ಅಂದರೆ, ಅವರು ಕೇವಲ ಸೌಲಭ್ಯ ಎಂಬುದನ್ನಷ್ಟೇ ಒಂದು ಮಾನದಂಡವಾಗಿಟ್ಟುಕೊಂಡು ಈ ಸರ್ವೇಯನ್ನು ಗುರುತಿಸಿದ್ದಾರೇನೋ ಎಂದೆನಿಸಿದರೆ, ಅದು ಸ್ವಾಭಾವಿಕವಾದುದಾಗುತ್ತದೆ. ಹಾಗಾಗಿ, ಕರ್ನಾಟಕದ ಎಲ್ಲಾ ಬ್ರಾಹ್ಮಣ ಸಂಪ್ರದಾಯದ ಜನತೆಯ ತಲೆಯಲ್ಲಿ ತಟಕ್ಕನೆ ಉದ್ಭವವಾಗುವ ಒಂದು ಯೋಚನೆ ಎಂದರೆ, ಈಗಾಗಲೇ ಸರ್ಕಾರವು ಸದರಿ ಸಂಪ್ರದಾಯದವರನ್ನು ಮುಂದುವರಿದ ಜನಾಂಗವೆಂದು ಪರಿಗಣಿಸಿ ಸರ್ಕಾರದ ಎಲ್ಲಾ ಸೌಲಭ್ಯಗಳಿಂದ ಆ ಜನಾಂಗವನ್ನು ದೂರವಿರಿಸಿರುವಾಗ (ಇದಕ್ಕೆ ಹೊಣೆ ಯಾರು? ಏಕೆ ಹೀಗೆ? ಎಂಬೆಲ್ಲಾ ಪ್ರಶ್ನೆಗಳಿಗೆ ಈಗ ಉತ್ತರವನ್ನು ಹುಡುಕಲು ಮುಂದಾಗುವುದು ಸೂಕ್ತವಲ್ಲ) ಈ ಸರ್ವೇಗೆ ಸೂಕ್ತವಾಗಿ ಸ್ಪಂದಿಸಬೇಕೋ, ಬೇಡವೋ? ಎಂದು. ಅವರು ಹಾಗೆ ಯೋಚಿಸಲು ಮುಂದಾದರೆ, ಬಹುಶ: ಅತಿಶಯೋಕ್ತಿಯೇನೂ ಅಲ್ಲವೆಂದೆನಿಸುತ್ತದೆ.

–ಹೆಚ್.ಕೆ.ಶಶಿಕುಮಾರ್, ರಾಮಕೃಷ್ಣನಗರ, ಮೈಸೂರು

ಧೂಳು ಮುಕ್ತಗೊಳಿಸಿ: ಚಾ.ನಗರ ಡಿಸಿಗೆ ಮನವಿ

ಮಾನ್ಯರೆ,

ಚಾಮರಾಜನಗರ ತಾಲೂಕಿನ ಚಂದಕವಾಡಿ ಹೋಬಳಿ ದಡದಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿ ಎರಡು ವರ್ಷಗಳ ನಂತರ ಆರಂಭವಾದ ಕಾಮಗಾರಿಗೆ ವರ್ಷವಾಗಿದೆ. ಆದರೆ ಕಾಮಗಾರಿ ಮುಗಿಯುವ ಲಕ್ಷಣಗಳೇ ಕಾಣುತ್ತಿಲ್ಲ. ಕಾಮಗಾರಿಯು ಗ್ರಾಮದ ಹೃದಯ ಭಾಗದಲ್ಲೇ ನಿಂತುಹೋಗಿದೆ. ಇದರಿಂದ ಕೂಸಿನ ಮನೆ, ಅಂಗನವಾಡಿ, ಪ್ರಾಥಮಿಕ ಶಾಲೆ, ಅಂಗಡಿ ಮುಂಗಟ್ಟು, ವಾಸದ ಮನೆಗಳ ನಿವಾಸಿಗಳು, ವಾಹನ ಸವಾರರು ಪ್ರತಿನಿತ್ಯ ಧೂಳಿನಿಂದ ಮಿಂದೇಳಬೇಕಾಗಿದೆ. ಮೂಗು, ಬಾಯಿ ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ರಸ್ತೆ ಬದಿಯಲ್ಲೆ ಅಂಗನವಾಡಿ ಕೇಂದ್ರ ಇರುವುದರಿಂದ ಅಡುಗೆಯ ಮೇಲೆ ಧೂಳು ತುಂಬಿಕೊಳ್ಳುತ್ತದೆ. ಇದರಿಂದ ಮಕ್ಕಳ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

ಚಂದಕವಾಡಿ ಮುಖ್ಯ ರಸ್ತೆಯಿಂದ ಕೇವಲ ಒಂದು ಕಿ.ಮಿ.ವರೆಗೆ ರಸ್ತೆ ಡಾಂಬರೀಕರಣವಾಗಿದ್ದು, ಉಳಿದ ಭಾಗ ಆಗಿಲ್ಲ. ಜಲ್ಲಿಕಲ್ಲುಗಳು ಮೇಲೆ ಎದ್ದಿದ್ದು ಸಂಚಾರಕ್ಕೂ ತೊಂದರೆಯಾಗಿದೆ. ವಾಹನ ಚಲಿಸುವಾಗ ಕಲ್ಲು ಪುಟಿದೇಳುತ್ತಿದ್ದು ಜನರ ಮೇಲೆ ಸಿಡಿಯುತ್ತಿವೆ. ಆದ್ದರಿಂದ ಜಿಲ್ಲಾಧಿಕಾರಿಗಳು ಗುತ್ತಿಗೆದಾರನಿಗೆ ಕಾಮಗಾರಿ ಮುಗಿಸುವಂತೆ ಹೇಳಬೇಕಿದೆ. ಇಲ್ಲ ಗ್ರಾಮಸ್ಥರೆ ರಸ್ತೆ ಬಂದ್ ಮಾಡುವ ಅನಿವಾರ್ಯತೆ ಇದೆ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ

ತಲೆಮಾರಿಗೆ ತಕ್ಕ ತಿಳುವಳಿಕೆ, ನಡವಳಿಕೆ!







ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ: 9916129654

> ಹಳೆ ತಲೆಮಾರುಗಳಲ್ಲಿರುವ ಕಠಿಣ ಶ್ರಮ, ಶಿಸ್ತು, ಉದ್ಯೋಗದಲ್ಲಿ ಸ್ಥಿರತೆ, ಕುಟುಂಬಗಳಿಗೆ ಕೊಡುವ ಪ್ರಾಮುಖ್ಯತೆ, ತಾಳ್ಮೆ, ಸಂಪ್ರದಾಯಗಳಿಗೆ ಕೊಡುವ ಗೌರವ, ಅವರಲ್ಲಿನ ಅನುಭವ ಮತ್ತು ನಾಯಕತ್ವದ ಗುಣಗಳನ್ನು ಇಂದಿನ ತಲೆಮಾರಿನವರು ಮುಂದುವರಿಸಿಕೊಂಡು ಹೋದಾಗಲೇ ಒಂದು ಸ್ವಚ್ಛಂದ ಸಮಾಜ ನಿರ್ಮಾಣ, ಇಲ್ಲವಾದಲ್ಲಿ ಲಂಗು–ಲಗಾಮು ಇಲ್ಲದ ಸ್ವೇಚ್ಛತೆಗೆ ಬಲಿಯಾಗಬೇಕಾದೀತು!.

ಈ ತಲೆಮಾರುಗಳು ಒಂದೊಂದೇ ಕಳೆಯುತ್ತಿದ್ದಂತೆ ಜೀವನಕ್ರಮವು ಹಳೆಯದಾಗುತ್ತಾ ಹೊಸದೊಂದು ಹುಟ್ಟಿಕೊಳ್ಳುತ್ತದೆ. ಬದಲಾವಣೆಯ ಪರ್ವ ಕಾಲದಲ್ಲಿ ಇದ್ದವರಿಗೆ ಎರಡು ವಿಭಿನ್ನ ಶೈಲಿಯ ಜೀವನಶೈಲಿಯ ಪರಿಚಯ ಮತ್ತು ಅನುಭವ ಸಿಗುವುದು. ಯಾವಾಗಲೂ ಹಳೆಯದನ್ನು ಮೆಲುಕುತ್ತಾ, ಹೊಸದನ್ನು ದೂಷಿಸುತ್ತಾ ವಿಧಿ ಇಲ್ಲದೆ ಹೊಸದಕ್ಕೆ ಹೊಂದಿಕೊಳ್ಳುತ್ತಾನೆ. ಮುಂದಿನ ಪೀಳಿಗೆಗೂ ಇದೇ ಪುನರಾವರ್ತನೆ ಆಗುತ್ತಾ ಹೋಗುತ್ತದೆ. ಕಾಲಚಕ್ರ ಉರುಳುತ್ತಿದ್ದಂತೆ ತಲೆಮಾರುಗಳು ಬದಲಾಗುವುದು ಮತ್ತು ಪ್ರಕೃತಿ ಸಹಜವಾಗಿ ಆಚಾರ–ವಿಚಾರಗಳು, ಸಂಸ್ಕೃತಿ ಮತ್ತು ಮೌಲ್ಯಗಳು ಮುಂದುವರಿಯುತ್ತಾ ಹಳೆಯದರ ಜೊತೆಗೆ ಹೊಸದು ಸೇರುತ್ತಾ, ಕೆಲವು ಕಳಚುವ ಕ್ರಿಯೆಯಲ್ಲಿ ಕಾಡುವ ನೆನಪುಗಳು, ನೋವು, ನಲಿವುಗಳನ್ನು ಉಂಡು ಹೊಸ ಜೀವನಕ್ರಮಕ್ಕೆ ಪಲ್ಲಟಗೊಳ್ಳುತ್ತೇವೆ.

ನಗರೀಕರಣವು ಹಳ್ಳಿಗಳನ್ನು ನುಂಗುತ್ತಿರುವುದರಿಂದ ಹಳ್ಳಿಗಳು ಮೂಲ ಸೊಗಡನ್ನು ಕಳೆದುಕೊಳ್ಳುತ್ತಿವೆ. ಖಾಸಗಿ ಇಂಗ್ಲಿಷ್ ಶಾಲೆಗಳಿಲ್ಲದ ಆ ದಿನಗಳು ಸರ್ಕಾರಿ ಶಾಲೆಯ ವಿಶಾಲ ಆವರಣ, ತುಂಬಾ ದೇಶಿಯ ಆಟಗಳಲ್ಲಿ ಮಗ್ನರಾಗಿರುವ ಮಕ್ಕಳು, ಶಿಕ್ಷಕರು ಕೊಡುತ್ತಿದ್ದ ಬೆತ್ತದೇಟು, ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಓದಿದರೂ ಫಸ್ಟ್ ಕ್ಲಾಸ್ ಅಂಕಗಳನ್ನು ಮುಟ್ಟಲಾಗದ ಮಕ್ಕಳು. ಸಗಣಿ ಸಾರಿಸಿದ ಮನೆ, ಕತ್ತಲೆ ಆಯಿತೆಂದರೆ ಬೆಳಗುತ್ತಿದ್ದ ಸೀಮೆ ಎಣ್ಣೆ ದೀಪಗಳು, ದೀಪದ ಬೆಳಕಿನಲ್ಲಿ ಓದುವಾಗ ತೂಕಡಿಸಿ ಮುಂಗುರುಳನ್ನು ಸುಟ್ಟುಕೊಂಡ ಘಟನೆಗಳು. ಬಳಪ ಮತ್ತು ಸ್ಲೇಟು, ಮಕ್ಕಳು ಹಾಗೂ ಗುರುಗಳ ನಡುವೆ ಇದ್ದ ಸಂಬಂಧಗಳು ಎಲ್ಲವೂ ಮನದಲ್ಲಿ ಹಚ್ಚಹಸಿರಾಗಿವೆ.

ಹಳ್ಳಿಗಳಲ್ಲಿ ಇಂಗ್ಲಿಷ್ ಶಾಲೆಗಳ ಮಯ, ಬೆಳಿಗ್ಗೆ ಮತ್ತು ಸಂಜೆ ಹಳ್ಳಿ ರಸ್ತೆಗಳಲ್ಲಿ ಶಾಲಾ ಮಕ್ಕಳಿರುವ ಹಳದಿ ಬಸ್ಸುಗಳು ಧೂಳೆಬ್ಬಿಸಿಕೊಂಡು ಸಂಚರಿಸುತ್ತಿವೆ. ಮಕ್ಕಳ ಬೆನ್ನಿನ ಮೇಲೆ ಭಾರ ಹೆಚ್ಚಾಗಿದೆ, ಮನೆಯಲ್ಲಿ ಮಕ್ಕಳು ಆಂಗ್ಲ ಪದಗಳನ್ನು ಯಥೇಚ್ಛವಾಗಿ ಬಳಸುತ್ತಿದ್ದಾರೆ, ಪೋಷಕರು ಕೂಡ ಮಕ್ಕಳೊಟ್ಟಿಗೆ ಹರುಕುಮುರುಕು ಆಂಗ್ಲ ಪದಗಳನ್ನು ಬಳಸಿ ಮಾತನಾಡುತ್ತಾರೆ.

ದೂರದ ನಗರದಿಂದ ಇಂಜಿನಿಯರಿಂಗ್ ಕಾಲೇಜುಗಳ ಬಸ್‌ಗಳು ಕೂಡ ಹಳ್ಳಿಯ ಮಕ್ಕಳನ್ನು ಕರೆದೊಯ್ಯಲು ನಿತ್ಯ ಬರುತ್ತಿವೆ. ಹಳ್ಳಿಗಳಲ್ಲಿ ಸರಾಸರಿ ಕನಿಷ್ಠ ಮನೆಗೊಬ್ಬರು ಇಂಜಿನಿಯರ್‌ಗಳಿದ್ದಾರೆ. ನಾವು ಓದುವಾಗ ಒಬ್ಬಿಬ್ಬರು ಇಂಜಿನಿಯರ್ ಇರುವುದೇ ದೊಡ್ಡದಿತ್ತು. ಈಗ ಸಾಸಿವೆ ಇಲ್ಲದ ಮನೆಯಂತೆ ಇಂಜಿನಿಯರ್‌ಗಳಿಲ್ಲದ ಮನೆಗಳಿಲ್ಲ ಎನ್ನುವಂತಾಗಿದೆ. ಆ ದಿನಗಳಲ್ಲಿ ಹೆಣ್ಣು ಮಕ್ಕಳು ಯಾವ ಇಂಜಿನಿಯರಿಂಗ್ ಕಾಲೇಜಿನಲ್ಲೂ ಇರಲಿಲ್ಲ. ಪೀಳಿಗೆಯ ಪರಿವರ್ತನೆಯಾಗಿದೆ, ಹೆಚ್ಚು ಅವರದ್ದೇ ಸಂಖ್ಯೆ ಎಲ್ಲಾ ಕಾಲೇಜುಗಳಲ್ಲಿ.

ಇತ್ತೀಚಿನ ದಿನಗಳಲ್ಲಿ ಜೆನ್‌ಜಿ ಪದ ಎಲ್ಲೆಡೆ ಬಳಕೆ ಆಗುತ್ತಿದೆ. ಜೆನ್‌ಜಿ ಪದದ ಅರ್ಥವನ್ನು ಹುಡುಕ ಹೊರಟಾಗ ಒಂದಷ್ಟು ಮಾಹಿತಿಗಳು ಲಭ್ಯವಾದವು. ಯುವಕರಿಗೆ ಮದುವೆ–ಮುಂಜಿಗಳಿಲ್ಲದೆ ಜೀವನ ಮೂರಾಬಟ್ಟೆ ಆಗುತ್ತಿರುವ ಈ ಸಂದರ್ಭಕ್ಕೆ ಅವುಗಳನ್ನು ತಿಳಿದುಕೊಳ್ಳುವುದು ಅವಶ್ಯ ಎನಿಸಿ, ನಿಮಗೂ ತಂದಿದ್ದೇನೆ.

ಜನರೇಷನ್ ಎನ್ನುವುದು ಕಾಲ–ಕಾಲಕ್ಕೆ ಬದಲಾಗಿರುವುದನ್ನು ಕಾಣುತ್ತಿದ್ದೇವೆ. ಬದಲಾದ ಕಾಲಘಟ್ಟಕ್ಕೆ ಅನುಗುಣವಾಗಿ ಜನಿಸಿದ ಮಕ್ಕಳ ನಡುವಳಿಕೆ, ಅಳವಡಿಸಿಕೊಂಡಿರುವ ಸಂಸ್ಕೃತಿ, ಬೆಳೆಸಿಕೊಂಡಿರುವ ತಿಳುವಳಿಕೆ ಇತ್ಯಾದಿಗಳನ್ನು ಪರಿಗಣಿಸಿ ಸಮಾಜಶಾಸ್ತ್ರದ ಪರಿಣಿತರು ತಲೆಮಾರುಗಳ ಅವಧಿಯನ್ನು ವಿಶೇಷತೆ, ಲಕ್ಷಣ ಹಾಗೂ ಸಾಮರ್ಥ್ಯಗಳ ಆಧಾರದಲ್ಲಿ ವಿಂಗಡಿಸಿ ಅದಕ್ಕೊಂದು ಪ್ರತ್ಯೇಕ ಹೆಸರು ಕೊಟ್ಟಿದ್ದಾರೆ: 1. ಬೇಬಿ ಬೂಮರ್ಸ್ (1946–1964), 2. ಜನರೇಷನ್ ಎಕ್ಸ್(1965–1980), 3. ಮಿಲೆನಿಯಲ್ಸ್(1981–1996), 4. ಜನರೇಷನ್ ಝಡ್(ಜೆನ್‌ಜಿ, 1997–2012), 5. ಜನರೇಷನ್ ಆಲ್ಫಾ(2013–2025), 6. ಜನರೇಷನ್ ಬಿಟಾ(2026–ಅಂದಾಜು 2039) ಮುಂದೆ ಜನರೇಷನ್ ಗಾಮ... ಹೀಗೆ ಪೀಳಿಗೆಗಳು ಬೆಳೆಯುತ್ತಾ ಹೋಗುತ್ತವೆ. ಯಾವ ತಲೆಮಾರಿಗೆ ಭೂಮಿಯ ಸಂಪೂರ್ಣ ಚಿತ್ರಣ ಬದಲಾಗುತ್ತೋ ಆ ದೇವರೇ ಬಲ್ಲ. ಈಗ ಸಮಾಜದಲ್ಲಿ ಎಲ್ಲರ ಕಣ್ಣು ಜೆನ್‌ಜಿಗಳನ್ನು ಮತ್ತು ಅವರ ಬುದ್ಧಿಮತ್ತೆಯನ್ನು ಮೆಚ್ಚಿದೆ. ಇವರು ಸ್ಮಾರ್ಟ್ ಫೋನ್ ಮತ್ತು ಇಂಟರ್‌ನೆಟ್ ಸಂಪರ್ಕದೊಂದಿಗೆ ಹುಟ್ಟಿ ಬೆಳೆದವರು.

ಬೇಬಿ ಬೂಮರ್ಸ್ ಪೀಳಿಗೆ: ಎರಡನೇ ಮಹಾಯುದ್ಧದ ತರುವಾಯ ಜನನ ಪ್ರಮಾಣವು ಏರಿಕೆ ಕಂಡಿತು, ಅದಕ್ಕಾಗಿ ಈ ಹೆಸರು ಬಂತೆಂದು ಹೇಳಲಾಗುತ್ತದೆ. ಈ ತಲೆಮಾರು ಕಠಿಣ ಪರಿಶ್ರಮ ಮತ್ತು ಶಿಸ್ತಿಗೆ ಮಹತ್ವ ಕೊಡುತ್ತಾರೆ. ಉದ್ಯೋಗದಲ್ಲಿ ಸ್ಥಿರತೆ ಹಾಗೂ ಕುಟುಂಬದ ಮೌಲ್ಯಗಳಿಗೆ ಮೊದಲ ಪ್ರಾಶಸ್ತ್ಯ, ತಾಳ್ಮೆ ಮತ್ತು ಬದ್ಧತೆ, ಸಂಪ್ರದಾಯಗಳಿಗೆ ಗೌರವ ನೀಡುವುದು ಮತ್ತು ಅನುಭವ ಹಾಗೂ ನಾಯಕತ್ವ ಗುಣವುಳ್ಳವರಾಗಿರುತ್ತಾರೆ.

ಜನರೇಷನ್ ಎಕ್ಸ್: ಇವರುಗಳು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಕಾಲಘಟ್ಟದಲ್ಲಿ ಹುಟ್ಟಿದವರಾಗಿರುತ್ತಾರೆ. ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ, ಕಂಪ್ಯೂಟರ್‌ಗಳ ಆರಂಭಿಕ ಬೆಳವಣಿಗೆಯನ್ನು ಕಂಡವರು. ಕುಟುಂಬ ಮತ್ತು ಕೆಲಸ ಎರಡನ್ನೂ ಸಮತೋಲನದಿಂದ ನಿರ್ವಹಿಸುವುದು, ಬದಲಾವಣೆಗೆ ಹೊಂದಿಕೊಳ್ಳುವ ಗುಣ, ಜವಾಬ್ದಾರಿಯುತ ಜೀವನಶೈಲಿ, ವಾಸ್ತವವನ್ನು ಅರಿತು ನಡೆಯುವುದು, ಸಮಸ್ಯೆಗಳನ್ನು ಪರಿಹರಿಸುವ ಬುದ್ಧಿವಂತಿಕೆ ಉಳ್ಳ ತಲೆಮಾರುಗಳಿವರು.

ಮಿಲೇನಿಯಲ್ಸ್ ಅಥವಾ ಜನರೇಷನ್ ವೈ: ಡಿಜಿಟಲ್ ಕಾಲದ ಜನರಿವರು. ಇಂಟರ್‌ನೆಟ್ ಮತ್ತು ಡಿಜಿಟಲ್ ಕ್ರಾಂತಿಯ ಜೊತೆಗೆ ಬೆಳೆದ ಮೊದಲ ತಲೆಮಾರಿದು. ಈ ಪೀಳಿಗೆಯವರಲ್ಲಿ ಹೊಸ ಕಲಿಕೆ ಮತ್ತು ನವೀನತೆಯ ಆಸಕ್ತಿ, ತಂತ್ರಜ್ಞಾನ ಬಳಕೆಯಲ್ಲಿ ನಿಪುಣರು, ಸ್ಟಾರ್ಟ್‌ಅಪ್ ಸಂಸ್ಕೃತಿಯ ಒಲವು, ಬದುಕಿನಲ್ಲಿ ಸಮತೋಲನವನ್ನು ಬಯಸುತ್ತಾರೆ. ಇವರಲ್ಲಿ ಸೃಜನಶೀಲತೆ, ಜಾಗತಿಕ ದೃಷ್ಟಿಕೋನ ಹಾಗೂ ತಂಡದೊಟ್ಟಿಗೆ ಕೆಲಸ ಮಾಡುವ ಸಾಮರ್ಥ್ಯ ಉಳ್ಳವರಾಗಿರುತ್ತಾರೆ.

ಜನರೇಷನ್ ಝಡ್: ಸ್ಮಾರ್ಟ್ ಆಗಿರುವ ಮಕ್ಕಳಿವರು, ಅಂಡ್ರಾಯಿಡ್ ಫೋನ್ ಮತ್ತು ಮಾಧ್ಯಮಗಳ ಯುಗದಲ್ಲಿ ಹುಟ್ಟಿ ಅದನ್ನೇ ಮೈಗೂಡಿಸಿಕೊಂಡು ಬೆಳೆದವರು. ವೇಗವಾಗಿ ಮಾಹಿತಿಗಳನ್ನು ಸಂಗ್ರಹಿಸುವ ಸಾಮರ್ಥ್ಯ, ಪರಿಸರ ಸಮಾನತೆ ಹಾಗೂ ಸಾಮಾಜಿಕ ನ್ಯಾಯದ ಬಗ್ಗೆ ಕಾಳಜಿ, ಸಾಫ್ಟ್‌ವೇರ್ ಉದ್ಯೋಗಗಳ ಕಡೆಗೆ ಹೆಚ್ಚು ಒಲವು, ಹೊಸ ಕೌಶಲ್ಯವನ್ನು ಬೇಗ ಕಲಿಯುವ ಸಾಮರ್ಥ್ಯ ಮತ್ತು ತಂತ್ರಜ್ಞಾನದಲ್ಲಿ ಪರಿಣಿತ ಪಡೆದವರಾಗಿರುತ್ತಾರೆ.

ಜನರೇಷನ್ ಆಲ್ಫಾ: ಇವರೆಲ್ಲಾ ಕೃತಕ ಬುದ್ಧಿಮತ್ತೆಯ ಸ್ಮಾರ್ಟ್ ಸಾಧನಗಳು ಮತ್ತು ಡಿಜಿಟಲ್ ಪರಿಸರದಲ್ಲೇ ಹುಟ್ಟಿದ ಮಹಾ ವೈಜ್ಞಾನಿಕತೆಯ ಪೀಳಿಗೆ ಇದು. ವೇಗವಾಗಿ ಕಲಿಯುವ ಸಾಮರ್ಥ್ಯ ಇರುವ ಮಕ್ಕಳಿವರು. ಸೃಜನಾತ್ಮಕ ಚಿಂತನೆ ಹಾಗೂ ಡಿಜಿಟಲ್ ಕೌಶಲ್ಯಗಳಲ್ಲಿ ಸದಾ ಮುಂದಿರುವ ಪೀಳಿಗೆ. ಹುಟ್ಟಿನಿಂದಲೇ ಟಚ್ ಸ್ಕ್ರೀನ್ ಮತ್ತು ಎಐ ಬಳಕೆ, ಆನ್‌ಲೈನ್ ಶಿಕ್ಷಣದಲ್ಲಿ ಅನುಭವ, ತಂತ್ರಜ್ಞಾನವು ಜೀವನದ ಅವಿಭಾಜ್ಯ ಅಂಗವಾಗಿ ಕಾಣುವುದು ಮತ್ತು ದೃಶ್ಯಾಧಾರಿತ ಕಲಿಕೆ ಹೆಚ್ಚು ಒತ್ತು ಕೊಡುವ ಜನಾಂಗ.

ಜನರೇಷನ್ ಬೀಟಾ: 2026 ಮತ್ತು ಅಂದಾಜು 2039ರ ನಡುವೆ ಹುಟ್ಟಲಿರುವ ಮಕ್ಕಳಿವರು. ಈಗಷ್ಟೇ ಹುಟ್ಟುತ್ತಿದ್ದಾರೆ ಇವರ ಗುಣಲಕ್ಷಣಗಳು ನಿಖರವಾಗಿ ಮುಂದಿನ ದಿನಗಳಲ್ಲಿ ಕಾಣಬಹುದು. ಇವರು ಉಳಿದೆಲ್ಲಾ ತಲೆಮಾರುಗಳಿಗಿಂತ ಬಹಳವೇ ಮುಂದುವರಿದ ಸೂಪರ್ ಫಾಸ್ಟ್ ಕಾಲಘಟ್ಟದಲ್ಲಿ ಹುಟ್ಟಿದವರಾಗಿರುತ್ತಾರೆ. ದುರಂತ ಅಥವಾ ನತದೃಷ್ಟರು ಎನ್ನಬಹುದು. ಗತಕಾಲದ ಪರಂಪರೆ ಹಾಗೂ ಸಂಸ್ಕೃತಿಯ ಅರಿವು ಇರುವುದಿಲ್ಲ. ಬೇಬಿ ಬೂಮರ್ಸ್ ಪೀಳಿಗೆಯ ಜೀವನಶೈಲಿಯ ಕಥೆಗಳನ್ನು ಕೇಳಿದರೆ ಬೆಚ್ಚಿ ಬೀಳುವರು. ನಮ್ಮ ಪೂರ್ವಿಕರು ಹೀಗೂ ಬದುಕಿದ್ದರಾ? ಎಂಬ ಉದ್ಗಾರ ಅವರಿಂದ ಬರದೇ ಇರದು. ಬೇಬಿ ಬೂಮರ್ಸ್‌ಗಳಲ್ಲಿ ಶೇಕಡ 90ಕ್ಕಿಂತ ಹೆಚ್ಚು ಇಹಲೋಕ ತ್ಯಜಿಸಿರುತ್ತಾರೆ ಅಳಿದುಳಿದ ಮುಪ್ಪಿನ ಹಿರಿಯರು ತಮ್ಮ ಜೀವನದ ಕಥೆಯನ್ನು ಮರಿಮಕ್ಕಳಿಗೆ ಹೇಳಿಕೊಂಡು ಮಕ್ಕಳ ಕುತೂಹಲಕ್ಕೆ ಕಾರಣರಾಗಿರುತ್ತಾರೆ (ದೈವಕೃಪೆಯಿಂದ ವೃದ್ಧಾಶ್ರಮಕ್ಕೆ ಸೇರಿಸದೇ ಇದ್ದರೆ). ಪ್ರತೀ ಕೆಲಸದಲ್ಲೂ ಇವರಿಗೆ ಕೃತಕ ಬುದ್ಧಿಮತ್ತೆ(ಎಐ) ಸಹಾಯ ಬೇಕೇಬೇಕು, ಎಲ್ಲವೂ ಸ್ವಯಂಚಾಲಿತವಾಗಿರುತ್ತವೆ, ನಗರಗಳು ಸ್ಮಾರ್ಟ್‌ಗಳಾಗಿರುತ್ತವೆ.

ಇದರ ನಂತರ ಬರುವಂತಹದ್ದು, ಜನರೇಷನ್ ಗಾಮಾ. ಬಹುಶಃ 2040ರ ನಂತರ ಈ ಹೆಸರು ಚಾಲ್ತಿಗೆ ಬರಬಹುದು. ಇದು ಅಧಿಕೃತವಾಗಿ ವರ್ಗೀಕರಿಸದೇ ಇರುವುದರಿಂದ ಗುಂಪಿನ ವಿಶೇಷತೆ ಮತ್ತು ಸಾಮರ್ಥ್ಯವನ್ನು ಖಚಿತವಾಗಿ ಎಲ್ಲೂ ಹೇಳಿಲ್ಲ. ಇವೆಲ್ಲವೂ ಅಧಿಕೃತವಾಗಿ ವಿಂಗಡಣೆ ಆಗಿರುವಂತಹದ್ದಲ್ಲ. ವಿವಿಧ ಸಂಶೋಧನಾ ಸಂಸ್ಥೆಗಳು ಪೀಳಿಗೆಯ ಲಕ್ಷಣಗಳನ್ನು ವಿಶ್ಲೇಷಿಸಿ ವರ್ಗೀಕರಿಸಿರುವಂತಹದ್ದು, ಸಮಾಜದ ವಾಸ್ತವವು ಹೀಗೇ ಇರುವುದರಿಂದ ಅಂಗೀಕರಿಸಬಹುದಾಗಿದೆ.

ಪ್ರಸ್ತುತ ಸಾಮಾಜಿಕ ಮಾಧ್ಯಮ ಹಾಗೂ ತಂತ್ರಜ್ಞಾನ ಹೊಂದಿರುವ ಜೆನ್‌ಜಿ ಎಂದು ಕರೆಯಲ್ಪಡುವ ಜನರೇಷನ್ ಝಡ್ (Generation-Z GenZ) ಯುವಕರದ್ದೆ ಕಾರುಬಾರು ನಡೆಯುತ್ತಿರುವುದು. ಅದರಲ್ಲೂ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಇವರೇ ಮುಂಚೂಣಿಯಲ್ಲಿ ಇರುವುದು. ಆದರೂ ಆಡಳಿತದ ಚುಕ್ಕಾಣಿ ಹಿಡಿದಿರುವವರು ಯಾರು ಅಂತೀರಾ... ಶಿಸ್ತು, ಅನುಭವ ಹಾಗೂ ಪರಿಶ್ರಮವನ್ನು ಹೊಂದಿರುವ 'ಬೇಬಿ ಬೂಮರ್ಸ್'ಗಳೇ! ಹಳೆ ತಲೆಮಾರುಗಳಲ್ಲಿರುವ ಕಠಿಣ ಶ್ರಮ, ಶಿಸ್ತು, ಉದ್ಯೋಗದಲ್ಲಿ ಸ್ಥಿರತೆ, ಕುಟುಂಬಗಳಿಗೆ ಕೊಡುವ ಪ್ರಾಮುಖ್ಯತೆ, ಸಂಪ್ರದಾಯಗಳಿಗೆ ಕೊಡುವ ಗೌರವ, ಅವರಲ್ಲಿನ ಅನುಭವ ಮತ್ತು ನಾಯಕತ್ವದ ಗುಣಗಳನ್ನು ಇಂದಿನ ತಲೆಮಾರಿನವರು ಮುಂದುವರಿಸಿಕೊಂಡು ಹೋದಾಗಲೇ ಒಂದು ಸ್ವಚ್ಛಂದ ಸಮಾಜ ನಿರ್ಮಾಣ. ಇಲ್ಲವಾದಲ್ಲಿ ಲಂಗು–ಲಗಾಮು ಇಲ್ಲದ ಸ್ವೇಚ್ಛತೆಗೆ ಬಲಿಯಾಗಬೇಕಾದೀತು!.


ಹಿರಿಯ ನಾಗರಿಕರಿಗೆ ವಿವಿಧ ಕಾರ್ಯಕ್ರಮ

ಮೈಸೂರು, ಜು.3(ಜಿಎ)–ಸ್ವರಾಂಜಲಿ ತಂಡದ ವತಿಯಿಂದ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗಾಗಿ ಜು.5,12,19 ಮತ್ತು 26 ರಂದು ಬೆಳಗ್ಗೆ 9ಕ್ಕೆ ನಗರದ ಜೆ.ಕೆ. ಮೈದಾನದಲ್ಲಿ ಮೈಸೂರು ವೈದ್ಯಕೀಯ ಕಾಲೇಜು ಪ್ಲಾಟಿನಂ ಜ್ಯುಬಿಲಿ ಸಭಾಂಗಣದಲ್ಲಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ.

ವೈದ್ಯ ಎಂ.ಎನ್. ರಘುವೀರ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಈ ವಿಷಯ ತಿಳಿಸಿ, ಜು.5 ಕನ್ನಡ ಕಸ್ತೂರಿ, ಜು.12 ಇಂಗ್ಲಿಷ್, ಜು..19 ಸಂಸ್ಕೃತ, ಜು.26 ರಂದು ಹಿಂದಿ ಸಾಹಿತ್ಯ ಕುರಿತ ಕಾರ್ಯಕ್ರಮಗಳನ್ನು ಹಿರಿಯ ನಾಗರಿಕರಿಗೆ ಆಯೋಜಿಸಲಾಗಿದೆ ಎಂದರು.

ಆಸಕ್ತರು ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗೆ ಹೆಚ್.ಪಿ.ಮಧುಸೂದನ್, ದೂ.8105367458 ಅಥವಾ ಎಂ.ವಿ. ಜೀವನ್‌ಕುಮಾರ್, ದೂರವಾಣಿ ನಂಬರ್ 9986230050 ಅನ್ನು ಸಂಪರ್ಕಿಸಬಹುದು ಎಂದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಜು.3– ಕಡಕೊಳ–ಐ.ಪಿ ಹಾಗೂ ಆಯರಹಳ್ಳಿ–ಐ.ಪಿ ಫೀಡರ್ ವ್ಯಾಪ್ತಿಯಲ್ಲಿ ಗೋಪುರ ನಿರ್ಮಾಣ ಕಾಮಗಾರಿ ಕೆಲಸದ ನಿಮಿತ್ತ ಜು.5ರಂದು ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಕಡಕೊಳ, ಕೆ.ಎಂ.ಹುಂಡಿ, ಹೊಸಮಾಳ, ಕೆಐಎಡಿಬಿ ರಸ್ತೆ, ಟಿವಿಎಸ್ ಆಕ್ಸಿಲರಿ, ಕೂಡನಹಳ್ಳಿ, ಕೋಚನಹಳ್ಳಿ, ಬ್ಯಾತಹಳ್ಳಿ, ಸಿಂಧುವಳ್ಳಿ, ಚಿಕ್ಕಕಾನ್ಯ, ದೊಡ್ಡಕಾನ್ಯ ಐ.ಪಿ. ಪ್ರದೇಶಗಳು ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮರದ ದಿಮ್ಮಿ ಸ್ಥಳಾಂತರಿಸುವ ವೇಳೆ ದಂತ ಭಗ್ನ; ಈ ದಸರಾದಲ್ಲಿ ಅಭಿಮನ್ಯುವಿಗೆ ಹೊಸ ಲುಕ್!

ಮೈಸೂರು,ಜು.3(ಎಂಟಿವೈ)–ನಾಡಹಬ್ಬ ದಸರಾ ಗಜಪಡೆಯ ನಾಯಕ, ಅಂಬಾರಿ ಹೊರಲಿರುವ ಅಭಿಮನ್ಯುವಿನ ಎಡಭಾಗದ ದಂತ ಸಣ್ಣ ಪ್ರಮಾಣದಲ್ಲಿ ತುಂಡರಿಸಿದ್ದು, ಈ ಬಾರಿ ನ್ಯೂ ಲುಕ್‌ನಲ್ಲಿ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾನೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮತ್ತಿಗೋಡು ಆನೆ ಶಿಬಿರದಲ್ಲಿರುವ 59 ವರ್ಷದ ಕ್ಯಾಪ್ಟನ್ ಅಭಿಮನ್ಯು ಮರದ ದಿಮ್ಮಿ ಮೇಲೆತ್ತುವ ಸಂದರ್ಭದಲ್ಲಿ ಎಡಭಾಗದ ದಂತ ಸ್ವಲ್ಪ ತುಂಡಾಗಿದೆ. ದುಬಾರೆ ಆನೆ ಕಾಳಗ ದುರಂತದಿಂದಾಗಿ ಸಾಕಾನೆ ಶಿಬಿರಗಳಿಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮತ್ತಿಗೋಡು ಕ್ಯಾಂಪ್‌ನಲ್ಲಿ ಮರದ ದಿಮ್ಮಿಗಳನ್ನು ಸ್ಥಳಾಂತರಿಸುವ ಕಾರ್ಯಾಚರಣೆ ವೇಳೆ ಬಲಭಾಗಕ್ಕೆ ಬಾಗಿದಂತೆ ಇದ್ದ ಎಡಭಾಗದ ದಂತದ ಮುಂದಿನ ಭಾಗ ತುಂಡಾಗಿದೆ. ಇದರಿಂದ ಈ ಬಾರಿ ಕ್ಯಾಪ್ಟನ್ ಅಭಿಮನ್ಯು ಹೊಸ ಲುಕ್‌ನಲ್ಲಿ ದಸರಾ ಮಹೋತ್ಸವಕ್ಕೆ ಆಗಮಿಸಲಿದ್ದಾನೆ.



ದಂತ ತುಂಡರಿಸಿ ಹೊಸ ಲುಕ್‌ನಲ್ಲಿರುವ ಅಭಿಮನ್ಯು.



ಕಳೆದ ವರ್ಷ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಅಭಿಮನ್ಯು.

ಈ ಸಾಲಿನ ದಸರಾ ಮಹೋತ್ಸವದಲ್ಲಿ ಅಭಿಮನ್ಯುವೇ ಅಂಬಾರಿ ಹೊರುವುದು ಖಚಿತವಾಗಿದೆ. 2020ರಿಂದಲೂ ಅಂಬಾರಿ ಹೊರುವ ಜವಾಬ್ದಾರಿ ಯಶಸ್ವಿಯಾಗಿ ನಿಭಾಯಿಸುತ್ತಿರುವ ಅಭಿಮನ್ಯು, 2026ನೇ ಸಾಲಿನ ದಸರಾ ಮಹೋತ್ಸವದಲ್ಲಿ ಅಂಬಾರಿ ಹೊತ್ತರೆ ಸತತ 7ನೇ ಬಾರಿ ಅಂಬಾರಿ ಹೊತ್ತಂತೆ ಆಗಲಿದೆ. ಈ ಹಿಂದೆ ದ್ರೋಣ 18 ಬಾರಿ, ಬಲರಾಮ 13 ಬಾರಿ, ಅರ್ಜುನ ಸತತ 8 ಬಾರಿ ಅಂಬಾರಿ ಹೊತ್ತು ಸಾಧನೆ ಮಾಡಿದ್ದು, ಇದೀಗ ಹೆಚ್ಚು ಬಾರಿ ಅಂಬಾರಿ ಹೊತ್ತ ಆನೆಗಳ ಸಾಲಿನಲ್ಲಿ ಅಭಿಮನ್ಯು ಹೆಸರು ಸೇರ್ಪಡೆಯಾಗಲಿದೆ.

1970ರಲ್ಲಿ ಕೊಡಗು ಜಿಲ್ಲೆಯ ಹೆಬ್ಬಳ್ಳ ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿದ ಅಭಿಮನ್ಯು 2.72 ಮೀಟರ್ ಎತ್ತರ, 3.51 ಮೀಟರ್ ಉದ್ದ ಹಾಗೂ 5635 ಕೆಜಿ ತೂಕ ಹೊಂದಿದ್ದಾನೆ. ಕಳೆದ 30 ವರ್ಷದಿಂದ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡ ಅನುಭವವಿದೆ. ಈ ಹಿಂದೆ 2012ರಿಂದ 2015ರವರೆಗೆ ಅರಮನೆ ಗಾಡಿಯನ್ನು ಎಳೆಯುವ ಜವಾಬ್ದಾರಿ ನಿಭಾಯಿಸುತ್ತಿದ್ದ ಅಭಿಮನ್ಯು, ನಂತರ ಶ್ರೀರಂಗಪಟ್ಟಣ ದಸರಾ ಮಹೋತ್ಸವದಲ್ಲಿ ಅಂಬಾರಿ ಹೊರುತ್ತಿತ್ತು. ಕೂಂಬಿಂಗ್ ಸ್ಟಾರ್, ಕರ್ನಾಟಕದ ಎಕೆ–47 ಸೇರಿದಂತೆ ಹಲವು ಹೆಸರಿನಿಂದ ಕರೆಯಲ್ಪಡುವ ಅಭಿಮನ್ಯು ಕರ್ನಾಟಕ ಮಾತ್ರವಲ್ಲದೆ, ದೇಶದಾದ್ಯಂತ ಅತ್ಯಂತ ಬಲಿಷ್ಠ ಆನೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪ್ರಸ್ತುತ ಅಭಿಮನ್ಯು ಆನೆಯನ್ನು ಮಾವುತ ಜೆ.ಎಸ್.ವಸಂತ್ ಮತ್ತು ಜೆ.ಕೆ.ರಾಜು ಪಾಲನೆ ಮಾಡುತ್ತಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಶನಿವಾರ 4 ಜುಲೈ 2026

ಮುಡಾ ರದ್ದು ಮಾಡಿ ಎಂಡಿಎ ಆಚರಣೆಗೆ ತಂದಿದ್ದ ಸಿದ್ದರಾಮಯ್ಯ ಸರ್ಕಾರ;
ಇಲ್ಲಿವರೆಗೂ ಅದಕ್ಕೆ ಆಯುಕ್ತರನ್ನೇ ನೇಮಿಸಲಾಗಲಿಲ್ಲ!

- ವರ್ಷಗಳಿಂದಲೂ ಖಾಲಿ ಇರುವ ಆಯುಕ್ತರ ಸ್ಥಾನ
- ಅಧಿಕಾರಿ, ಸಿಬ್ಬಂದಿಯ ಹೇಳೋರು ಕೇಳೋರಿಲ್ಲ
- ಬಣಗುಟ್ಟುವ ವಿಭಾಗಗಳು, ಆಸನಗಳು ಖಾಲಿ ಖಾಲಿ
- ಯಾರನ್ನೇ ಕೇಳಿದರೂ 'ನನಗೆ ಗೊತ್ತಿಲ್ಲ' ಎಂಬ ಉತ್ತರ



ಮೈಸೂರು, ಜು.3(ಬಿಎಲ್‌ಯು)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ದಲ್ಲಿ ನಡೆದ ಸಾವಿರಾರು ಕೋಟಿಯ ನಿವೇಶನಗಳ ಅಕ್ರಮ ಮಂಜೂರಾತಿ ಅವ್ಯವಹಾರದ ಹಿನ್ನೆಲೆಯಲ್ಲಿ ಹಗರಣಯುಕ್ತ 'ಮುಡಾ'ವನ್ನೇ ಇಲ್ಲವಾಗಿಸಿದ ರಾಜ್ಯ ಸರ್ಕಾರ, ಹೊಸದಾಗಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ವನ್ನು ಅಸ್ತಿತ್ವಕ್ಕೆ ತಂದಿತು. ಆದರೆ ಅದಕ್ಕೆ ಅಗತ್ಯವಿರುವ ವ್ಯವಸ್ಥೆಯನ್ನೇ ಮಾಡದೇ ಇರುವುದರಿಂದ 'ಎಂಡಿಎ' ಈಗ ಮುಡಾಗಿಂತ ಕಡೆ ಎಂಬಂತಾಗಿದೆ.

ಮೊದಲಿಗೆ, ಹೊಸದಾಗಿ ಅಸ್ತಿತ್ವಕ್ಕೆ ಬಂದ ಎಂಡಿಎಗೆ ಸರ್ಕಾರ ಪೂರ್ಣ ಪ್ರಮಾಣದ ಆಯುಕ್ತರನ್ನೇ ಇದುವರೆಗೆ ನೇಮಕ ಮಾಡಲಿಲ್ಲ. ಮೈಸೂರು ಉಪ ವಿಭಾಗಾಧಿಕಾರಿ ಆಗಿದ್ದ ಕೆ.ಆರ್.ರಕ್ಷಿತ್ ಅವರನ್ನು ಎಂಡಿಎ ವಿಶೇಷ ಭೂ ಸ್ವಾಧೀನಾಧಿಕಾರಿಯಾಗಿ ವರ್ಗಾವಣೆ ಮಾಡಿ, ನಂತರ ಅವರನ್ನೇ ಎಂಡಿಎ ಪ್ರಭಾರ ಆಯುಕ್ತರನ್ನಾಗಿ ನಿಯುಕ್ತಿಗೊಳಿಸಿತು.

ಕಳೆದ ಒಂದು ವರ್ಷದಿಂದ ಎಂಡಿಎ ಪ್ರಭಾರ ಆಯುಕ್ತರಾಗಿ ಕಾರ್ಯ ನಿರ್ವಹಿಸಿದ ರಕ್ಷಿತ್ ಅವರನ್ನು ಸರ್ಕಾರ ಈಗ ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಅವರ ಆಪ್ತ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದೆ. ಹಾಗಾಗಿ ರಕ್ಷಿತ್ ಅವರು ಎಂಡಿಎ ಪ್ರಭಾರ ಆಯುಕ್ತ ಸ್ಥಾನ ತೊರೆದು 25 ದಿನಗಳಾದವು. ಈ ದಿನದವರೆಗೆ ಎಂಡಿಎಗೆ ಆಯುಕ್ತರ ನೇಮಕ ಮಾಡಿಲ್ಲ.

ಎಂಡಿಎಗೆ ಆಯುಕ್ತರು ಮಾತ್ರವಲ್ಲದೆ ವಿಶೇಷ ಭೂ ಸ್ವಾಧೀನಾಧಿಕಾರಿ ಸ್ಥಾನವೂ ಖಾಲಿ ಬಿದ್ದಿದೆ. ಒಂದು ಪ್ರತಿಷ್ಠಿತ ಸಂಸ್ಥೆಯಲ್ಲಿ ಬಹಳ ಪ್ರಮುಖವಾದ ಎರಡು ಹುದ್ದೆಗಳು ಖಾಲಿ ಇವೆ.

ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ ಅವರು ಎಂಡಿಎ ಅಧ್ಯಕ್ಷರಾಗಿದ್ದಾರೆ. ಆದರೆ ಜಿಲ್ಲಾಡಳಿತದ ಕಾರ್ಯ ಒತ್ತಡದಿಂದ ಲಕ್ಷ್ಮೀಕಾಂತರೆಡ್ಡಿ ಅವರು ಎಂಡಿಎ ಆಡಳಿತದತ್ತ ಅಷ್ಟಾಗಿ ಗಮನ ನೀಡಲು ಸಾಧ್ಯವಾಗುತ್ತಿಲ್ಲ. ಎಂಡಿಎ ಸಭೆ ಸೇರಿದಂತೆ ಕೆಲವು ಸಂದರ್ಭದಲ್ಲಿ ಮಾತ್ರ ಇಲ್ಲಿನ ಕಚೇರಿಗೆ ತೆರಳಿ, ಕಡತಗಳಿಗೆ ಸಹಿ ಸೇರಿದಂತೆ ಇತರೆ ಕಾರ್ಯ ನಿರ್ವಹಿಸುತ್ತಾರೆ. ತುರ್ತು ನಿರ್ಧಾರ ಇಲ್ಲವೇ ಕಾರ್ಯದ ವೇಳೆ ಲಕ್ಷ್ಮೀಕಾಂತರೆಡ್ಡಿ ಅವರು ತಮ್ಮ ಕಚೇರಿಗೆ ಸಿಬ್ಬಂದಿಯ ಕರೆಸಿಕೊಳ್ಳುತ್ತಿದ್ದಾರೆ.

ಎಂಡಿಎ ಅಧ್ಯಕ್ಷರು ಹಾಗೂ ಆಯುಕ್ತರನ್ನು ಬಿಟ್ಟರೆ ಕಾರ್ಯದರ್ಶಿ ನಂತರದ ಉನ್ನತ ಅಧಿಕಾರಿಯಾಗಿದ್ದಾರೆ. ಆದರೆ, ಅವರು ಎಂಡಿಎಗೆ ಸಂಬಂಧಿಸಿದ ಯಾವುದೇ ವಿಚಾರ ಕೇಳಿದರೂ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ಕೇಳಿ ಎಂದು ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಾರೆ. ಮುಡಾದಲ್ಲಿ ಸಾವಿರಾರು ಕೋಟಿ ಅವ್ಯವಹಾರ ನಡೆದಿರುವುದರಿಂದ ಒಂದು ಸಣ್ಣ ವಿಚಾರವಾಗಿಯೂ ಪ್ರತಿಕ್ರಿಯೆ ನೀಡಲು ಎಂಡಿಎ ಕಾರ್ಯದರ್ಶಿ ಜಾನ್ಸನ್ ಹಿಂಜರಿಯುತ್ತಾರೆ. ಹಾಗಾಗಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ಈಗ ಒಂದು ನಿಷ್ಕ್ರಿಯ ಸಂಸ್ಥೆಯಾಗಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಮೇಟಿ ಇಲ್ಲದ ಮೇಲೆ ಕೆಳ ಹಂತದ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಯಾವ ಲಂಗು–ಲಗಾಮು ಇಲ್ಲದಂತಾಗಿದೆ. ಬೆಳಿಗ್ಗೆ ಕಚೇರಿಗೆ ಬಂದು ಸಹಿ ಹಾಕಿ ಹೋದರೆ ಮತ್ತೆ ಅವರಿಗೆ ಮನಸ್ಸು ಬಂದಾಗ ಇಲ್ಲವೇ ಪುರುಸೊತ್ತು ಇದ್ದಾಗ ಕಚೇರಿಗೆ ಬರುತ್ತಾರೆ. ಇಲ್ಲದಿದ್ದರೆ ಅದೂ ಇಲ್ಲ.

ಹಾಗಾಗಿ ಎಂಡಿಎ ಕಚೇರಿ ಬಣಗುಟ್ಟುತ್ತಿದೆ. ಯಾವ ವಿಭಾಗಕ್ಕೆ ಹೋದರೂ ಅಲ್ಲಿ ಅಧಿಕಾರಿಗಳು, ಸಿಬ್ಬಂದಿಗಳಿಲ್ಲದೆ ಆಸನಗಳು ಖಾಲಿ ಖಾಲಿಯಾಗಿರುತ್ತವೆ. ಅಲ್ಲಿ ಯಾರಾದರೊಬ್ಬರು ಇದ್ದು, ಏನನ್ನಾದರೂ ಕೇಳಿದರೆ 'ನನಗೆ ಗೊತ್ತಿಲ್ಲ' ಸಿದ್ಧ ಉತ್ತರ ನೀಡಿ ಕೈತೊಳೆದುಕೊಳ್ಳುತ್ತಾರೆ.

ಮುಡಾದಲ್ಲಿ ವಿಧಾನಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು, ಕಾರ್ಪೊರೇಟರ್ ಪ್ರತಿನಿಧಿ, ಸರ್ಕಾರದಿಂದ ನಾಮ ನಿರ್ದೇಶನಗೊಂಡ ಸದಸ್ಯರಿದ್ದರು. ಸಾರ್ವಜನಿಕರ ಯಾವುದಾದರು ಕೆಲಸ ಕಾರ್ಯಗಳಿದ್ದರೆ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಿ ಇಲ್ಲವೆ ಒತ್ತಡ ಹೇರಿ ಮಾಡಿಸಿ ಕೊಡುತ್ತಿದ್ದರು. ಆದರೆ, ಈಗ ಜನಪ್ರತಿನಿಧಿಗಳೂ ಇಲ್ಲ, ಇದರಿಂದ ಎಂಡಿಎನಲ್ಲಿ ಹೇಳುವವರು, ಕೇಳುವವರು ಯಾರೂ ಇಲ್ಲದಂತಾಗಿದೆ.

ಇನ್ನೆರಡು ದಿನದಲ್ಲಿ ಆಯುಕ್ತರ ನೇಮಕ

ಎಂಡಿಎ ಆಯುಕ್ತರ ಸ್ಥಾನ ಖಾಲಿ ಇರುವ ವಿಚಾರ ಸರ್ಕಾರದ ಗಮನದಲ್ಲಿದೆ. ಇನ್ನೆರಡು ದಿನದಲ್ಲಿ ಆಯುಕ್ತರನ್ನು ಸರ್ಕಾರ ನೇಮಕ ಮಾಡಲಿದೆ. ಪ್ರಭಾರ ಇಲ್ಲವೆ ಪೂರ್ಣ ಪ್ರಮಾಣದ ಆಯುಕ್ತರ ಸರ್ಕಾರ ನೇಮಕ ಮಾಡಲಿದ್ದು, ಈ ಸಂಬಂಧ ಸರ್ಕಾರದ ಮಟ್ಟದಲ್ಲಿ ಪ್ರಕ್ರಿಯೆ ನಡೆಯುತ್ತಿದೆ.



-ಜಿ.ಲಕ್ಷ್ಮೀಕಾಂತರೆಡ್ಡಿ, ಎಂಡಿಎ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ, ಮೈಸೂರು.

ಓಲ್ಡ್ ವೈನ್ ಇನ್ ನ್ಯೂ ಬಾಟಲ್‌ನಂತೆ ಮುಡಾ ಈಗ ಎಂಡಿಎ ಆಗಿ ಬದಲಾಗಿದೆಯಷ್ಟೆ!

ಓಲ್ಡ್ ವೈನ್ ಇನ್ ನ್ಯೂ ಬಾಟಲ್ (ಹೊಸ ಬಾಟಲ್‌ಗೆ ಹಳೆ ಮದ್ಯ) ಎಂಬಂತೆ ಮುಡಾ ಹೆಸರು ಎಂಡಿಎ ಆಗಿ ಬದಲಾಗಿದೆಯೇ ಹೊರತು ಅಲ್ಲಿ ಯಾವುದೇ ಸಣ್ಣ ಸುಧಾರಣೆಯೂ ಆಗಿಲ್ಲ.

ಮೈಸೂರು ನಗರವನ್ನು ವ್ಯವಸ್ಥಿತ ಹಾಗೂ ಯೋಜನಾಬದ್ಧವಾಗಿ ನಿರ್ಮಾಣ ಮಾಡಲು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1903 ರಲ್ಲಿ ಸಿಐಟಿಬಿ (ಸಿಟಿ ಇಂಪ್ರೂಮೆಂಟ್ ಟ್ರಸ್ಟ್ ಬೋರ್ಡ್) ಸ್ಥಾಪಿಸಿದರು. ಇದು ನಗರದ ಅಭಿವೃದ್ಧಿಗೆ ಏಷ್ಯಾದಲ್ಲೇ ಮೊದಲ ಬಾರಿಗೆ ರಚನೆಯಾದ ಕಾನೂನು ಬದ್ಧ ಸಂಸ್ಥೆಯಾಗಿತ್ತು.

ತರುವಾಯ ಸಿಐಟಿಬಿಯನ್ನು 1988ರಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಎಂದು ಮರು ನಾಮಕರಣ ಮಾಡಲಾಯಿತು. ಈಗ ರಾಜ್ಯ ಸರ್ಕಾರ ಮುಡಾ ರದ್ದು ಮಾಡಿ ಮೇ 16, 2025ರಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ಮರು ನಾಮಕರಣ ಮಾಡಿದೆ.

ಹೊಸ ಬಾಟಲ್‌ಗೆ ಹಳೆ ಮದ್ಯ ಸುರಿದಂತೆ ಹೆಸರುಗಳು ಬದಲಾಗಿದೆಯೇ ಹೊರತು ಯಾವುದೇ ರೀತಿಯ ಸುಧಾರಣೆಗಳಾಗಿಲ್ಲ. ಮಹಾರಾಜರ ಕಾಲದಲ್ಲಿ ಆದ ನಗರದ ಯೋಜನಾಬದ್ಧ ಅಭಿವೃದ್ಧಿ ನೋಡಿದವರು, ಕೇಳಿದವರು ತರುವಾಯ ಮರು ನಾಮಕರಣಗೊಂಡ ಮುಡಾ ಹಾಗೂ ಎಂಡಿಎ ಅವ್ಯವಸ್ಥೆ ನೋಡಿ ಮರುಗುತ್ತಿದ್ದಾರೆ.

ಮುಡಾದಲ್ಲಿ ನಡೆದ ಸಾವಿರಾರು ಕೋಟಿ ಹಗರಣದ ನಂತರ ಕ್ಲೀನ್ ಮಾಡುವುದಾಗಿ ಭರವಸೆ ನೀಡಿದ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಲಿಷ್ಠ ವ್ಯವಸ್ಥೆ ಅಸ್ತಿತ್ವಕ್ಕೆ ತರುವುದಾಗಿ ರೂಪಿಸಿದ ಎಂಡಿಎನಲ್ಲಿ ಕೂಡ ಯಾವುದೇ ಸುಧಾರಣೆ ಆಗಿಲ್ಲ.

ಸೂರು ಇಲ್ಲದ ಸಾವಿರಾರು ನಿವೇಶನಾಕಾಂಕ್ಷಿಗಳು ಚಾತಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ಈ ತನಕ 20X30 ಅಳತೆಯ ನಿವೇಶನಗಳನ್ನು ಕೂಡ ಹಂಚಿಕೆ ಮಾಡಿಲ್ಲ. ಈಗಾಗಲೇ ನಿರ್ಮಾಣವಾಗಿರುವ ಬಡಾವಣೆಗಳ ಮೂಲೆ ನಿವೇಶನ ಹಾಗೂ ವಾಣಿಜ್ಯ ನಿವೇಶನಗಳನ್ನು ಹರಾಜು ಮಾಡಲಾಗಿದೆಯೇ ಹೊರತು ಜನ ಸಾಮಾನ್ಯರಿಗೆ ಸರ್ಕಾರದ ನಿಯಮದಂತೆ ರಿಯಾಯಿತಿ ದರದಲ್ಲಿ ಒಂದೂ ನಿವೇಶನ ನೀಡಿಲ್ಲ.

ಸ್ವಚ್ಛ ಆಡಳಿತದ ಬಗ್ಗೆ ಪ್ರತಿದಿನ ಮಾತನಾಡುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈಗಲಾದರೂ ಎಂಡಿಎಗೆ ಕಾಯಕಲ್ಪ ನೀಡುವರೇ ಕಾದು ನೋಡಬೇಕಾಗಿದೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಪ್ರಚುರಪಡಿಸುವುದೇನೆಂದರೆ, ನನ್ನ ಕಕ್ಷಿದಾರರು, ಷೆಡ್ಯೂಲ್ ಸ್ವತ್ತನ್ನು (1) ಶ್ರೀ ಲೋಕೇಶ್ ಗೌಡ. ಜೆ. ಬಿನ್ ಜಯಣ್ಣ (37 ವರ್ಷ) ಮನೆ ಸಂಖ್ಯೆ 45, ಶಾರದಾನಗರ ರೈಲ್ವೆ ಬಡಾವಣೆ 2 ನೇ ಕ್ರಾಸ್, ದೇವರಾಜ ಮೊಹಲ್ಲಾ ನಿವಾಸಿ, ಮತ್ತು (2) ಶ್ರೀ. ನಿಶ್ಚಯ್ . ಎಸ್. ಬಿನ್ ಹೆಚ್.ಡಿ. ಸೋಮಶೇಖರ್ (31 ವರ್ಷ) ಮನೆ ಸಂಖ್ಯೆ 1020, ರಾಮಕೃಷ್ಣ ನಗರ "ಐ" ಬ್ಲಾಕ್, ವಿವೇಕಾನಂದ ರಸ್ತೆ, ಮೈಸೂರು, ರವರಿಂದ ಕ್ರಯಕ್ಕೆ ಪಡೆಯಲು ನಿರ್ಧ–ರಿಸಿರುತ್ತಾರೆ.

ಆದ್ದರಿಂದ, ಯಾವುದೇ ವ್ಯಕ್ತಿ, ಸಂಘ ಸಂಸ್ಥೆಗಳಿಗಾಗಲೀ, ಬ್ಯಾಂಕ್ ಯಾ ಸೊಸೈಟಿಗಳಿಗಾಗಲೀ ಷೆಡ್ಯೂಲ್ ಸ್ವತ್ತಿನಲ್ಲಿ ಯಾವುದೇ ರೀತಿಯ ಹಕ್ಕು, ಅಧಿಕಾರ, ಪಾಲು, ಆಸಕ್ತಿ, ಇದ್ದಲ್ಲಿ, ಈ ಪ್ರಕಟಣೆಯ ದಿನದಿಂದ ಹದಿನೈದು (15) ದಿನಗಳ ಒಳಗಾಗಿ, ಈ ಕೆಳಗಿನ ವಿಳಾಸದಾರರನ್ನು ಸಂಪರ್ಕಿಸತಕ್ಕದ್ದು. ತಪ್ಪಿದಲ್ಲಿ, ಈ ಸ್ವತ್ತಿನ ಮೇಲೆ ಯಾವುದೇ ಹಕ್ಕು, ಅಧಿಕಾರಗಳು ಮತ್ತು ಅಭ್ಯಂತರಗಳು ಯಾರಿಗೂ ಇರುವುದಿಲ್ಲವೆಂದು ಭಾವಿಸಿ ಮಾರಾಟ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ ಹುಣಸೂರು ತಾಲೂಕ್ ಬಿಳಿಕೆರೆ ಹೋಬಳಿ, ಹಳ್ಳದಕೊಪ್ಪಲು ಗ್ರಾಮಕ್ಕೆ ಸೇರಿದ ಕೃಷಿ ಜಮೀನು, ಸರ್ವೆ ನಂಬರ್ 2/3, 2/6, 2/7, 2/8, 2/9, 2/10, 2/11 ಒಟ್ಟು ವಿಸ್ತೀರ್ಣ 2 ಎಕರೆ 8 ಗುಂಟೆ, ಇದರ ಚಕ್ಕುಬಂದಿ: ಪೂರ್ವಕ್ಕೆ–ಹೆಚ್ ಕೆ ನಾಗಣ್ಣ ನವರ ಜಮೀನು, ಪಶ್ಚಿಮಕ್ಕೆ–ಮಹದೇವಪುರವರ ಜಮೀನು, ಉತ್ತರಕ್ಕೆ– ರಸ್ತೆ, ದಕ್ಷಿಣಕ್ಕೆ–ಹೆಚ್.ಕೆ.ನಾಗಣ್ಣನವರ ಜಮೀನು

ಸಹಿ/– ಎಂ. ಎಸ್. ಶ್ರೀಧರ್
ವಕೀಲರು. 212/S, 4ನೇ ಮೇನ್,
1 ಬಿ ಕ್ರಾಸ್ ಐ ಬ್ಲಾಕ್,
ರಾಮಕೃಷ್ಣ ನಗರ, ಮೈಸೂರು–22
ಮೊ : 9448467703
E mail id: sridhar.madenur@gmail.com
Date: 2–7–2026

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶಿವಮೊಗ್ಗ – 577201, ಎ.ಆರ್.ಬಿ. ಕಾಲೋನಿ, ಅಶೋಕ ನಗರ, 1ನೇ ಕ್ರಾಸ್, ಪ್ರಶಾಂತ್ ನಿಲಯ, ಮನೆ ನಂ. 35–19–1 ಎ ರಲ್ಲಿ ವಾಸವಾಗಿರುವ ಶ್ರೀ ಕೆ.ಪಿ.ಶಂಕರ ಚಾರಿ ರವರ ಧರ್ಮಪತ್ನಿಯಾದ **ಶ್ರೀಮತಿ ಜಯಮ್ಮ ರವರು** ಈ ಕೆಳಗೆ ಕಾಣಿಸಿರುವ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಿಂದ ಕ್ರಯಕ್ಕೆ ಕೊಂಡುಕೊಳ್ಳಲು ತೀರ್ಮಾನಿಸಿ ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತಾರೆ.

ಷೆಡ್ಯೂಲ್‌ನಲ್ಲಿ ನಮೂದಾಗಿರುವ ಸ್ವತ್ತು ಹಾಲೀ ಮಾರಾಟಗಾರರಿಗೆ ಸೇರಿದ ಸ್ವತ್ತಾಗಿದ್ದು, ಸದರಿ ಸ್ವತ್ತು ಅವರ ಮಾಲೀಕತ್ವ ಹಕ್ಕು ಬಾಧ್ಯತೆ ಮತ್ತು ಸ್ವಾಧೀನಾನುಭವದಲ್ಲಿರುವ ಸ್ವತ್ತಾಗಿರುತ್ತದೆ. ಸದರಿ ಸ್ವತ್ತನ್ನು ನಮ್ಮ ಕಕ್ಷಿದಾರರು ಖರೀದಿಸಲು ಸ್ವತ್ತಿನ ಮಾಲೀಕರಿಂದ **ದಿನಾಂಕ: 01–07–2026** ರಂದು ಕ್ರಯದ ಕರಾರು ಪತ್ರ ಮಾಡಿಕೊಂಡಿದ್ದು, ಸದರಿ ಸ್ವತ್ತಿಗೆ ಸಂಬಂದಪಟ್ಟಂತೆ ಮೇಲೆ ಕಾಣಿಸಿದ ವ್ಯಕ್ತಿಗಳಲ್ಲದೇ ಯಾರಿಗಾದರೂ ಯಾವುದೇ ರೀತಿಯ ಕಾನೂನುಬದ್ಧ ಹಕ್ಕು–ಬಾಧ್ಯತೆ ಮತ್ತು ಹಿತಾಸಕ್ತಿ ಇದ್ದಲ್ಲಿ ಈ ದಿನದಿಂದ **07 (ಏಳು)** ದಿನಗಳ ಒಳಗಾಗಿ ತಮ್ಮ ತಕರಾರು ಮತ್ತು ಹಕ್ಕು ಬಾಧ್ಯತೆಗೆ ಸಂಬಂಧಿಸಿದಂತೆ ಲಿಖಿತವಾಗಿ ಹಾಗೂ ಖುದ್ದಾಗಿ ಅಥವಾ ವಕೀಲರ ಮೂಲಕ ಸಂಬಂಧಪಟ್ಟ ದಾಖಲಾತಿಗಳೊಡನೆ ಈ ಕೆಳಕಂಡ ವಿಳಾಸಕ್ಕೆ ತಿಳಿಯಪಡಿಸತಕ್ಕದ್ದು, ಒಂದು ವೇಳೆ ಈ ಮೇಲ್ಕಂಡ **07 (ಏಳು)** ದಿನಗಳ ಒಳಗಾಗಿ ಯಾವುದೇ ತಂಟೆ ತಕರಾರುಗಳು ಬರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮಾಲೀಕರೊಡನೆ ನೋಂದಾಯಿತ ಶುದ್ಧ ಕ್ರಯ ಪತ್ರವನ್ನು ಮಾಡಿಕೊಳ್ಳುತ್ತಾರೆ. ಆನಂತರ ಬರುವ ತಕರಾರು ನಮ್ಮ ಕಕ್ಷಿದಾರರನ್ನು ಯಾವುದೇ ರೀತಿಯಿಂದಲೂ ಬಾಧ್ಯಪಡಿಸುವುದಿಲ್ಲ ಎಂದು ತಿಳಿಯಪಡಿಸಲಾಗಿದೆ. ಹಾಗೂ ಸದರಿ ಷೆಡ್ಯೂಲ್ ಸ್ವತ್ತಿಗೆ ಯಾವುದೇ ಹಕ್ಕುಗಳು / ಆಕ್ಷೇಪಣೆಗಳು ಇಲ್ಲವೆಂದು ತಿಳಿದು ಹಾಲೀ ಮಾರಾಟಗಾರರೇ ಸ್ವತ್ತಿನ ಸಂಪೂರ್ಣ ಮಾಲೀಕರೆಂದು ಪರಿಗಣಿಸಿ ಕೆಳಗೆ ತಿಳಿಸಿದ ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆಯಲು ಮುಂದಾಗುತ್ತಾರೆ.

ಷೆಡ್ಯೂಲ್ ಸ್ವತ್ತು

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೋಗಾದಿ ಗ್ರಾಮ, ಪ್ರೀತಿ ಲೇಔಟ್, ಹಾಲಿ ಬೋಗಾದಿ ಪಟ್ಟಣ ಪಂಚಾಯತ್ ನಮೂನೆ–3 (ನಿಯಮ–20) ರ ಪ್ರಕಾರ **ಸ್ವತ್ತಿನ ಸಂಖ್ಯೆ 5299625106, ವಾರ್ಡ್ ನಂ. 4, ನಿರ್ಧರಣಾ ಸಂಖ್ಯೆ 69, ನಿವೇಶನ ಸಂಖ್ಯೆ 69 ರ ಸ್ವತ್ತಿಗೆ** ಚಕ್ಕುಬಂದಿ; **ಪೂರ್ವಕ್ಕೆ:** ನಿವೇಶನ ಸಂಖ್ಯೆ 48, **ಪಶ್ಚಿಮಕ್ಕೆ:** ರಸ್ತೆ, **ಉತ್ತರಕ್ಕೆ:** ನಿವೇಶನ ಸಂಖ್ಯೆ 68, **ದಕ್ಷಿಣಕ್ಕೆ :** ರಸ್ತೆ. ಈ ಮಧ್ಯೆ ಇರುವ **ಪೂರ್ವ ಪಶ್ಚಿಮ (15.00+15.10)/2** ಮೀಟರ್‌ಗಳು, **ಉತ್ತರ ದಕ್ಷಿಣ (10.58+9.00)/2** ಮೀಟರ್‌ಗಳು, ಒಟ್ಟು 147.33 ಚದರ ಮೀಟರ್‌ಗಳುಳ್ಳ ಪೂರ್ತಾ ಖಾಲಿ ನಿವೇಶನ

ಸ್ಥಳ: ಮೈಸೂರು
ದಿನಾಂಕ: 03–07–2026

ಸಹಿ/– ಎನ್.ಆರ್. ಉಮೇಶ್, ವಕೀಲರು ಹಾಗೂ ನೋಟರಿ
ಕಛೇರಿ ನಂ.474, ಗಣಪತಿ ದೇವಸ್ಥಾನದ ಎದುರು, ಗದ್ದಿಗೆ ಮುಖ್ಯ ರಸ್ತೆ, ಬೋಗಾದಿ, ಮೈಸೂರು–570026 ಮೊ.ನಂ. 9844635621

ಪತಿ ಕೊಂದು ಹೃದಯಾಘಾತದ ಕತೆ ಕಟ್ಟಿದ್ದ ಪ್ರಕರಣ

ಪತ್ನಿ ಸೇರಿ ಆರು ಆರೋಪಿಗಳ ಬಂಧನ



ಮೈಸೂರು, ಜು.3– ಮೈಸೂರು ಕುವೆಂಪುನಗರದ ನಿತ್ಯಾನಂದ ಹತ್ಯೆ ಪ್ರಕರಣ ಸಂಬಂಧ ಅವರ ಪತ್ನಿ ಸೇರಿದಂತೆ ಆರು ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು ಅವರೆಲ್ಲಾ ಈಗ ಜೈಲು ಪಾಲಾಗಿದ್ದಾರೆ.

ನಿತ್ಯಾನಂದ ಅವರ ಪತ್ನಿ, ಖಾಸಗಿ ಶಾಲೆ ಶಿಕ್ಷಕಿ ಎಸ್.ಸುಶೀಲಾ(40), ಕೆ.ಆರ್.ನಗರದ ನಿವಾಸಿ ವಿ.ಹರೀಶ್ (32), ಕೋಲಾರ ಜಿಲ್ಲೆ, ಮುಳುಬಾಗಿಲು ತಾಲೂಕು ತಿರುಮನಹಳ್ಳಿಯ ರಂಗನಾಥ್(42), ಕೆಜಿಎಫ್ ತಾಲೂಕು ದೊಡ್ಡಕಾರಿ ಗ್ರಾಮದವರಾದ ಎಂ.ಚಂದನ್ (23), ಎನ್.ಗಜೇಂದ್ರ(23) ಹಾಗೂ ಕೆ.ಎಸ್.ನವೀನ್ (27) ಬಂಧಿತರು. ಕುವೆಂಪುನಗರದ ಹುಡ್ಕೋ ಬಡಾವಣೆ ನಿವಾಸಿ ನಿತ್ಯಾನಂದ ಜೂ.29ರಂದು ಸಂಶಯಾಸ್ಪದ ರೀತಿ ಮೃತಪಟ್ಟಿದ್ದರು. ಹೃದಯಾಘಾತದಿಂದ ಸಾವನ್ನಪ್ಪಿದ್ದಾಗಿ ಇವರ ಪತ್ನಿ ಸುಶೀಲಾ ಕತೆ ಕಟ್ಟಿದ್ದಳು. ಆದರೆ, ನಿತ್ಯಾನಂದ ಕತ್ತಿನಲ್ಲಿ ಬಟ್ಟೆಯಲ್ಲಿ ಬಿಗಿದ ಕಲೆ ಗಮನಿಸಿದ ಅವರ ಸಹೋದರ ಪೊಲೀಸರಿಗೆ ಮಾಹಿತಿ ನೀಡಿದ್ದರು. ಈ ಸಂಬಂಧ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡ ಕುವೆಂಪುನಗರ ಠಾಣೆ ಪೊಲೀಸರು, ಸ್ಥಳದಲ್ಲಿ ಸಿಕ್ಕ ಭೌತಿಕ ಹಾಗೂ ತಾಂತ್ರಿಕ ಸಾಕ್ಷ್ಯಾಧಾರಗಳ ಆಧಾರದಲ್ಲಿ ತನಿಖೆ ಆರಂಭಿಸಿದರು.

ಸಬ್‌ಇನ್ಸ್‌ಪೆಕ್ಟರ್ ಮದನ್ ಕುಮಾರ್ ಹಾಗೂ ಸಿಬ್ಬಂದಿ ಆರೋಪಿ ಸುಶೀಲಾಳನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದರು. ಆ ವೇಳೆ ನನ್ನ ಗಂಡ ನಿತ್ಯ ಕುಡಿದು ಬಂದು ಹಿಂಸೆ ನೀಡುತ್ತಿದ್ದ ಕಾರಣ ತನ್ನ ತಂಗಿಯ ಗಂಡ ಹರೀಶ್ ಹಾಗೂ ಆತನ ಸಂಬಂಧಿ ಚಂದನ್ ಜೊತೆ ಮಾತನಾಡಿ, ಕೊಲೆ ಮಾಡಲು ಸಂಚು ರೂಪಿಸಿದೆವು. ಅದರಂತೆ ಜೂ.28ರಂದು ಮಧ್ಯರಾತ್ರಿ 5 ಜನ ಕೋಲಾರ ಮೂಲದವರನ್ನು ಮನೆಗೆ ಕರೆಸಿಕೊಂಡು ನನ್ನ ಗಂಡನ ಕತ್ತು ಹಿಸುಕಿ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಳು. ಬಳಿಕ ಪೊಲೀಸರು ಕೃತ್ಯದಲ್ಲಿ ಭಾಗಿಯಾಗಿದ್ದ ಎಲ್ಲಾ ಆರೋಪಿಗಳನ್ನು ಬಂಧಿಸಿದ್ದಾರೆ.

ನಗರದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಡಾ.ಹರ್ಷಾ ಪ್ರಿಯಂವದಾ ಅವರ ಮಾರ್ಗದರ್ಶನ, ಕೃಷ್ಣರಾಜ ವಿಭಾಗದ ಎಸಿಪಿ ಪ್ರಕಾಶ್.ಕೆ.ಸಿ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಕುವೆಂಪುನಗರ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್(ಪ್ರಭಾರ) ಸಿ.ಈ.ರೋಹಿತ್, ಸಬ್‌ಇನ್ಸ್‌ಪೆಕ್ಟರ್ ವಿ.ಮದನ್‌ಕುಮಾರ್, ಸಿಬ್ಬಂದಿ ವಸಂತ, ಧನುಜಾ, ಅಪರಾಧ ವಿಭಾಗದ ವಿ.ಆನಂದ್, ಕೆ.ಶ್ರೀನಾಥ್, ಕೆ.ಜೆ.ಸುರೇಶ್ ಹಾಗೂ ಡಿ.ಎಸ್.ದೊಡ್ಡೆಗೌಡ ಪಾಲ್ಗೊಂಡಿದ್ದರು.

ಹಿರಿಯ ನಾಗರಿಕರಿಗೆ ಆರೋಗ್ಯ ಸುಧಾರಣೆ ಕುರಿತು ಉಪನ್ಯಾಸ

ಮೈಸೂರು, ಜು. 3 – ಮೈಸೂರಿನ ಹಿರಿಯ ನಾಗರಿಕರ ಮಂಡಳಿಯ ಮಾಸಿಕ ಉಪನ್ಯಾಸ ಸರಣಿಯ ಭಾಗವಾಗಿ ಜು. 6 ರಂದು ಸಂಜೆ 5.00 ಗಂಟೆಗೆ ಸರಸ್ವತಿ ಸಮುದಾಯ ಭವನದಲ್ಲಿ ಡಾ. ಲಕ್ಷ್ಮೀಗೌಡ ಅವರಿಂದ ಹಿರಿಯ ನಾಗರಿಕರಿಗೆ ಆರೋಗ್ಯ ಸುಧಾರಣೆ ಕುರಿತು ವೈದ್ಯ ತಜ್ಞರಿಂದ ಸಲಹೆಗಳು ಕುರಿತು ಉಪನ್ಯಾಸ ನೀಡುವರು. ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಹೆಚ್.ಎಂ.ನಾಗರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 9980412406 ಸಂಪರ್ಕಿಸಬಹುದು.

Change of Name

I Shanthamani.K, D/O Kuttiayana Goundar Residing at #19/2, Kari-nanjapura, Ramaswamy Layout, Chamarajanagar Town, Chamara-janagar Taluk and District-571313, have Changed my Name from Shanthamani to shanthamani .K on my Own free will infront of Notary Naganna vide Affidavit dtd: 02/07/2026 at Chamarjanagar
Sd/- Shanthamani .K

ನಾಳೆ ರಾಜ್ಯ, ರಾಷ್ಟ್ರ ಮಟ್ಟದ ಯೋಗಾಸನ ಸ್ಪರ್ಧೆ

ಮೈಸೂರು, ಜು.3– ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಜಿಕೆ ವಿನ್ಯಾಸ ಯೋಗ ಕೇಂದ್ರ, ಶ್ರೀಕೃಷ್ಣ ಯೋಗಾಸ್, ಮೈಸೂರು ವಿವೇಕಾನಂದ ಯೋಗಾಸ್ ಹಾಗೂ ಯೋಗಾಸ್ ಸ್ಪೋರ್ಟ್ಸ್ ಫೌಂಡೇಷನ್ ಸಹಯೋಗದಲ್ಲಿ ರಾಜ್ಯ ಶಾಲಾ–ಕಾಲೇಜು ಯೋಗಾಸನ ಚಾಂಪಿಯನ್ ಶಿಪ್, ರಾಷ್ಟ್ರ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆಯನ್ನು ಜು.5 ರಂದು ಮೈಸೂರು ವಿಶ್ವ ವಿದ್ಯಾನಿಲಯದ ಯೋಗ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸ್ಪರ್ಧೆಯು ವಯೋಮಾನಕ್ಕನುಗುಣವಾಗಿ ವಿವಿಧ ವಿಭಾಗಗಳಲ್ಲಿ ನಡೆಯಲಿದೆ. ಪ್ರವೇಶ ದರ 500 ರೂ ನಿಗದಿಪಡಿಸಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ಪ್ರಥಮ ಬಹುಮಾನ 2000 ರೂ, ದ್ವಿತೀಯ 1500 ರೂ, ತೃತೀಯ 1000 ರೂ.ನಗದು ಜತೆಗೆ ಪ್ರಮಾಣ ಪತ್ರ, ಆಕರ್ಷಕ ಟ್ರೋಫಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ: 9620004686, 9538462968 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜು.6, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆ

ಮೈಸೂರು, ಜು.3– ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಗೃಹಜ್ಯೋತಿ ಯೋಜನೆಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳೊಂದಿಗೆ ಜು.6 ರಂದು ಮಧ್ಯಾಹ್ನ 3 ಗಂಟೆಗೆ ಮೈಸೂರು ಮಹಾನಗರ ಪಾಲಿಕೆಯ ಮುಖ್ಯ ಕಛೇರಿಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಉಪ ಆಯುಕ್ತರು ಹಾಗೂ ಮಹಾನಗರ ಪಾಲಿಕೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

PUBLIC NOTICE

Notice is hereby given that M/s. **IPSOL PARENTERALS PRIVATE LIMITED**, is desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at **DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002,** within 07 (Seven) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Item No. 1: Commercial Property No. 4435341830, Ward No. 27, Assessment No. 9/17/122/131, measuring 5,058.11 Square Meters (formerly converted land bearing Survey No. 196/2, measuring 1 Acre 10 Guntas, out of which 1 Acre is converted for commercial purpose and 10 Guntas for residential house construction, presently bearing Survey No. 196/4, measuring 1 Acre 7.08 Guntas, bounded on East by: Survey No. 169, West by: Survey No. 196/5 and Survey. No. 196/2, North by: Road and South by: Survey No. 196/5 and Survey. No. 252. And further for Survey No. 196/3, measuring 2.08 Guntas, bounded on East by: Survey No. 196/6, West by: Survey No. 196/1, North by: Road and South by: Survey No. 196/6, both measuring 1 Acre 10 Guntas), situated at Kallahalli Industrial Area, Nanjangud (Formerly Kallahalli Village, Kasaba Hobli, Nanjangud Taluk), having built area of 111.4836 Square Meters of residential house, constructed with AC Sheet roof and red oxide flooring and boundaries as per Khatha are East by: Kabini Paper Mills compound, West by: Balance land of Survey No. 196/2, North by: Road and South by: Kabini Paper Mills compound.

Item No. 2: Agriculture lands having following Survey Numbers, Extents and Boundaries, situated at Kallahalli Village, Kasaba Hobli, Nanjangud Taluk.

Survey No.	Extent		Boundary			
	A	G	East	West	North	South
196/6	0	02	Sy.No. 196/2 Nala	Sy.No. 196/3	Road	Sy. No. 196/2 Nala
196/5	1	06	Sy.No. 196/4	Sy.No. 196/1	Sy.No. 196/2 & Sy.No. 196/4	Sy.No. 252 & Sy. No. 169
Total	1	08				

Sd/- Dhirendra Kumar R. Mehta, Advocate,
KEY-ANS LAW SOLUTIONS

Date: 03.07.2026, Place: Mysuru

ಮೈಸೂರು ಮಿತ್ರ

ಸಿಎಂ ಆಗಿ ಒಂದು ತಿಂಗಳು: ಸಿದ್ದರಾಮಯ್ಯ ಭೇಟಿಯಾದ ಡಿ.ಕೆ.ಶಿವಕುಮಾರ್



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪತ್ನಿ ಶ್ರೀಮತಿ ಉಷಾ ಅವರು ಮಾಜಿ ಸಿಎಂ ಸಿದ್ದರಾಮಯ್ಯರನ್ನು ಅಭಿನಂದಿಸಿದರು.

ಬೆಂಗಳೂರು, ಜು.3– ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು (ಶುಕ್ರವಾರ) ಸಿದ್ದರಾಮಯ್ಯ ಅವರ ಮನೆಗೆ ಭೇಟಿ ನೀಡಿ ಮಾತುಕತೆ ನಡೆಸಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲ ತಾಣ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಸಿದ್ದರಾಮಯ್ಯ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇಂದು ತಮ್ಮ ಪತ್ನಿ ಉಷಾ ಹಾಗೂ ಸಹೋದರ ಡಿ.ಕೆ ಸುರೇಶ್ ಅವರ ಜೊತೆ ನನ್ನ ಮನೆಗೆ ಆಗಮಿಸಿ, ಉಪಾಹಾರ ಸೇವಿಸುತ್ತಾ ಮಾತುಕತೆ ನಡೆಸಿದರು' ಎಂದು ಬರೆದುಕೊಂಡಿದ್ದಾರೆ.

ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ಇಂದಿಗೆ (ಜುಲೈ 3) ಒಂದು ತಿಂಗಳು ಪೂರೈಸಿದೆ. ಈ ಹಿನ್ನೆಲೆಯಲ್ಲಿ ಅವರು ಸಿದ್ದರಾಮಯ್ಯ ಅವರ ಮನೆಗೆ ಭೇಟಿ ನೀಡಿ ಮಾತುಕತೆ ನಡೆಸಿದ್ದಾರೆ.

ಕರ್ನಾಟಕದ ಮುಖ್ಯಮಂತ್ರಿಯಾಗಿ ಒಂದು ತಿಂಗಳ ಸೇವೆಯನ್ನು ಪೂರ್ಣಗೊಳಿಸಿದ ಅಂಗವಾಗಿ ಇಂದು ಕುಟುಂಬದೊಂದಿಗೆ ಸಿದ್ದರಾಮಯ್ಯ ಅವರನ್ನು, ಅವರ ಅಧಿಕೃತ ನಿವಾಸ ಕಾವೇರಿಯಲ್ಲಿ ಭೇಟಿ ಮಾಡಿ ಆಶೀರ್ವಾದವನ್ನು ಪಡೆದುಕೊಳ್ಳಲಾಯಿತು. ಸಿದ್ದರಾಮಯ್ಯನವರ ದೂರದೃಷ್ಟಿಯ ನಾಯಕತ್ವ, ಅಪಾರ ಆಡಳಿತ ಅನುಭವ ಹಾಗೂ ನಾಡಿನ ಜನರ ಅಭಿವೃದ್ಧಿಯತ್ತ ಅವರ ಅಚಲ ಬದ್ಧತೆ ನಮ್ಮ ರಾಜ್ಯದ ಪ್ರಗತಿಯ ಪಯಣಕ್ಕೆ ಸದಾ ಬಲ ತುಂಬಲಿದೆ. ರಾಜ್ಯದ ಸಮಗ್ರ ಅಭಿವೃದ್ಧಿ, ಜನಕಲ್ಯಾಣ ಮತ್ತು ಸುಭದ್ರ ಭವಿಷ್ಯ ನಿರ್ಮಾಣಕ್ಕೆ ಸಿದ್ದರಾಮಯ್ಯನವರ ಮಾರ್ಗದರ್ಶನ ಮತ್ತು ಆಶೀರ್ವಾದವು ಸದಾ ಪ್ರೇರಣೆಯಾಗಿದೆ' ಎಂದು ಡಿ.ಕೆ. ಶಿವಕುಮಾರ್ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

ವೈದ್ಯಕೀಯ ಕ್ಷೇತ್ರದಲ್ಲಿ ಪೆಥಾಲಜಿಸ್ಟ್‌ಗಳು ತೆರೆ ಮರೆಯ ವೀರರು!

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಮ ಕುಲಾಧಿಪತಿ ಡಾ.ಬಿ.ಸುರೇಶ್ ಪ್ರಶಂಸೆ



ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಸುರೇಶ್ ಹನಗವಾಡಿ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು

ಮೈಸೂರು, ಜು.3(ವಿವಿಹೆಚ್)– ವೈದ್ಯಕೀಯ ಕ್ಷೇತ್ರದಲ್ಲಿ ಪೆಥಾಲಜಿಸ್ಟ್‌ಗಳು ತೆರೆ ಮರೆಯ ವೀರರು ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಸಮ ಕುಲಾಧಿಪತಿ ಡಾ.ಬಿ.ಸುರೇಶ್ ಪ್ರಶಂಸೆ ವ್ಯಕ್ತಪಡಿಸಿದರು.

ಮೈಸೂರಿನ ಶಿವರಾತ್ರೀಶ್ವರ ನಗರದಲ್ಲಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಜೆಎಸ್‌ಎಸ್ ವೈದ್ಯಕೀಯ ಮಹಾ ವಿದ್ಯಾಲಯದ ಪೆಥಾಲಜಿ ವಿಭಾಗದ ವತಿಯಿಂದ ಆಯೋಜಿಸಿರುವ ಮೂರು ದಿನಗಳ ವೈದ್ಯಕೀಯ ಸಮ್ಮೇಳನ 'ಕಾಪ್‌ಕಾನ್–2026'ರ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವೈದ್ಯಕೀಯ ಕ್ಷೇತ್ರದಲ್ಲಿ ಪೆಥಾಲಜಿಸ್ಟ್‌ಗಳ ಪಾತ್ರ ಅತ್ಯಂತ ಮಹತ್ವವಾದದ್ದು. ಯಕೃತ್ತು ಅಥವಾ ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಗಳ ಯಶಸ್ಸಿನ ಪ್ರಶಂಸೆ ಶಸ್ತ್ರಚಿಕಿತ್ಸಕರಿಗೆ ಸಿಗುತ್ತದೆ. ಆದರೆ, ಪ್ರಯೋಗಾಲಯದಲ್ಲಿ ಸೂಕ್ಷ್ಮದರ್ಶಕದ ಮುಂದೆ ಕುಳಿತು ನಿಖರ ವರದಿ ನೀಡುವ ಪೆಥಾಲಜಿಸ್ಟ್‌ಗಳ ಶ್ರಮ ತೆರೆಯ ಮರೆಯಲ್ಲೇ ಉಳಿದುಬಿಡುತ್ತದೆ ಎಂದು ನೆನೆದರು.

ಯಾವುದೇ ಆಸ್ಪತ್ರೆ ಇರಲಿ ರೋಗಿಗಳ ಆರೈಕೆಯಲ್ಲಿ ತೀವ್ರ ನಿಗಾ ಘಟಕದ ವೈದ್ಯರು ತೆಗೆದುಕೊಳ್ಳುವ ಪ್ರತಿಯೊಂದು ನಿರ್ಧಾರವೂ ಪೆಥಾಲಜಿಸ್ಟ್ ನೀಡುವ ವರದಿಯ ಮೇಲೆಯೇ ಅವಲಂಬಿತವಾಗಿರುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಭಾರತದ ಆರೋಗ್ಯ ವೃತ್ತಿಪರರನ್ನು ಜಾಗತಿಕ ಮಟ್ಟದ ತಂತ್ರಜ್ಞಾನಕ್ಕೆ ಸಜ್ಜುಗೊಳಿಸುವ ನಿಟ್ಟಿನಲ್ಲಿ ರೂಪಿಸಲಾಗಿರುವ ಎಐ ಫಾರ್ ಹೆಲ್ತ್ ಪ್ರೊಫೇಷನಲ್ಸ್ ಎಂಬ ವಿಶೇಷ 18 ದಿನಗಳ ಆನ್‌ಲೈನ್ ಕಾರ್ಯಕ್ರಮಕ್ಕೆ ಇತ್ತೀಚೆಗಷ್ಟೇ ಅಧಿಕೃತ ಚಾಲನೆ ದೊರೆತಿದೆ. ಪಾಶ್ಚಾತ್ಯ ದೇಶಗಳ ವೈದ್ಯಕೀಯ ಮಾದರಿಗಳನ್ನು ಭಾರತೀಯ ಆರೋಗ್ಯ ವ್ಯವಸ್ಥೆಗೆ ಅಳವಡಿಸುವಾಗ ಎದುರಾಗುವ ಪ್ರಾಯೋಗಿಕ ಅಂತರವನ್ನು ಕಡಿಮೆ ಮಾಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಮಾಹಿತಿ ನೀಡಿದರು.

ವೈದ್ಯಕೀಯ ರಂಗ ಬೆಳೆದುಬಂದ ಹಾದಿಯನ್ನು ವಿವರಿಸಿದ ಅವರು, ಮೊದಲ ಹಂತ ಸಂಪೂರ್ಣವಾಗಿ ವೈದ್ಯರ ಕ್ಲಿನಿಕಲ್ ಜ್ಞಾನ ಮತ್ತು ರೋಗಲಕ್ಷಣಗಳ ಅವಲೋಕನದ ಮೇಲಿದ್ದ ಆಧಾರ. ಎರಡನೆಯದು ಎಂಆರ್‌ಐ ಮತ್ತು ಸಿಟಿ ಸ್ಕ್ಯಾನ್‌ಗಳಂತಹ ವೈದ್ಯಕೀಯ ಚಿತ್ರಣ ತಂತ್ರಜ್ಞಾನಗಳ ಆಗಮನ. ಮೂರನೇ ಹಂತದಲ್ಲಿ ಪ್ರಸ್ತುತ ನಾವು ಕೃತಕ ಬುದ್ಧಿಮತ್ತೆ (ಎಐ) ಮತ್ತು ನಿಖರ ವೈದ್ಯಕೀಯ ಯುಗಕ್ಕೆ ಕಾಲಿಟ್ಟಿದ್ದು, ಇದು ರೋಗನಿರ್ಣಯವನ್ನು ಇನ್ನಷ್ಟು ವೇಗ ಹಾಗೂ ನಿಖರಗೊಳಿಸಲಿದೆ ಆ ಮೂಲಕ ಖಾಯಿಲೆಗಳಿಗೆ ಬೇಗ ಚಿಕಿತ್ಸೆಯೂ ದೊರೆಯಲಿದೆ ಎಂದರು.

ಕರ್ನಾಟಕದಲ್ಲೇ ಯುವ ಪೆಥಾಲಜಿಸ್ಟ್‌ಗಳು ಅಂಗಾಂಶ ಮಾದರಿಗಳನ್ನು ಬಳಸಿಕೊಂಡು ಭವಿಷ್ಯದ ವೈದ್ಯಕೀಯ ಸಂಶೋಧನೆಗಳಲ್ಲಿ ತೊಡಗಿಸಿಕೊಳ್ಳಲು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನೂತನವಾಗಿ ಸ್ಥಾಪಿಸಲಾಗಿರುವ ಅತ್ಯಾಧುನಿಕ ಟಿಷ್ಯೂ ಬ್ಯಾಂಕ್ ದೊಡ್ಡ ವೇದಿಕೆಯಾಗಲಿದೆ. ಇಂತಹ ಸೌಲಭ್ಯ ಹೊಂದಿರುವ ಕೇಂದ್ರವೂ ಇದಾಗಿದೆ ಎಂದು ಮಾಹಿತಿ ನೀಡಿದರು.

ಬಳಿಕ ಸಮ್ಮೇಳನದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ.ಸುರೇಶ್ ಹನಗವಾಡಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಕುಲಪತಿ ಡಾ.ಎಚ್.ಬಸವನಗೌಡಪ್ಪ, ಪ್ರಾಂಶುಪಾಲ ಡಾ.ಡಿ.ನಾರಾಯಣಪ್ಪ, ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ.ಮಧು, ಕೆಸಿಐಎಪಿಎಂ ಅಧ್ಯಕ್ಷ ಕೆ.ವಿ.ಸಂತೋಷ್, ಕಾರ್ಯದರ್ಶಿ ಡಾ.ಆದಿತ್ಯ ಅಗ್ನಿಹೋತ್ರಿ, ಖಜಾಂಚಿ ಡಾ.ತೇಜಸ್ವಿ ಕೃಷ್ಣ, ಡಾ.ವಿಜಯಶಂಕರ, ಡಾ.ಆಶಾ, ಡಾ.ಸುಚಿತ್ರಾ, ಡಾ.ರಾಜಲಕ್ಷ್ಮಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗುಲ್ಬರ್ಗಾ ಮಿಸ್ಟಿಕ್ಸ್ ಮಣಿಸಿದ ಮೈಸೂರು ವಾರಿಯರ್ಸ್



ಮೈಸೂರು ವಾರಿಯರ್ಸ್ ತಂಡದ ರಿತೇಶ್ ಭಟ್ಕಳ್.

ಹುಬ್ಬಳ್ಳಿ, ಜು.3(ವಿವಿಹೆಚ್)– ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯಲ್ಲಿ ಶುಕ್ರವಾರ ನಡೆದ ರೋಚಕ ಪಂದ್ಯದಲ್ಲಿ ರಿತೇಶ್ ಭಟ್ಕಳ್ (42 ಎಸೆತಗಳಲ್ಲಿ ಅಜೇಯ 75) ಅವರ ಅದ್ಭುತ ಬ್ಯಾಟಿಂಗ್ ನೆರವಿನಿಂದ ಮೈಸೂರು ವಾರಿಯರ್ಸ್ ತಂಡ, ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ ಮೂರು ವಿಕೆಟ್‌ಗಳ ಜಯ ಸಾಧಿಸಿತು.

197 ರನ್‌ಗಳ ಗುರಿ ಬೆನ್ನತ್ತಿದ ಮೈಸೂರು ತಂಡ ಆರಂಭದಲ್ಲೇ 39 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೀಡಾಗಿತ್ತು. ಆದರೆ 33 ವರ್ಷದ ರಿತೇಶ್ ಭಟ್ಕಳ್ ನಾಲ್ಕು ಬೌಂಡರಿ ಹಾಗೂ ಐದು ಸಿಕ್ಸರ್‌ಗಳ ನೆರವಿನಿಂದ ಅಜೇಯ 75 ರನ್‌ಗಳ ಅಮೂಲ್ಯ ಇನ್ನಿಂಗ್ಸ್ ಆಡಿದರು. ಮನೋಜ್ ಭಂಡಗೆ (15 ಎಸೆತಗಳಲ್ಲಿ 24) ಅವರೊಂದಿಗೆ ಮೂರನೇ ಹಂತದಲ್ಲಿ 23 ಎಸೆತಗಳಲ್ಲಿ 37 ರನ್‌ಗಳ ಜೊತೆಯಾಟ ನಡೆಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಗುಲ್ಬರ್ಗಾ ಪರ ನಾಥನ್ ಡಿ'ಮೆಲ್ಲೊ (3/38), ಪರಾಸ್ ಗುರ್ಬಾಕ್ಸ್ ಆರ್ಯ (2/24) ಹಾಗೂ ರೋನಿತ್ ಮೋರೆ (2/41) ಪರಿಣಾಮಕಾರಿ ಬೌಲಿಂಗ್ ಪ್ರದರ್ಶಿಸಿದರೂ ತಂಡವನ್ನು ಗೆಲುವಿನತ್ತ ಕೊಂಡೊಯ್ಯಲು ಸಾಧ್ಯವಾಗಲಿಲ್ಲ.

ಎಂಟು ಪಂದ್ಯಗಳಲ್ಲಿ ಮೂರನೇ ಗೆಲುವು ದಾಖಲಿಸಿದ ಮೈಸೂರು ವಾರಿಯರ್ಸ್ ಏಳು ಅಂಕಗಳೊಂದಿಗೆ ನಾಲ್ಕನೇ ಸ್ಥಾನಕ್ಕೇರಿತು. ಮತ್ತೊಂದೆಡೆ, ಐದನೇ ಸೋಲು ಕಂಡ ಗುಲ್ಬರ್ಗಾ ಮಿಸ್ಟಿಕ್ಸ್ ಆರು ಅಂಕಗಳೊಂದಿಗೆ ಐದನೇ ಸ್ಥಾನಕ್ಕೆ ಕುಸಿಯಿತು.

ಮೊದಲು ಬ್ಯಾಟಿಂಗ್ ಮಾಡಿದ ಗುಲ್ಬರ್ಗಾ ಮಿಸ್ಟಿಕ್ಸ್ ಆರಂಭದಲ್ಲೇ 2.4 ಓವರ್‌ಗಳಲ್ಲಿ 24 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿತು. ಬಳಿಕ ಧ್ರುವ್ ಪ್ರಭಾಕರ್ ಹಾಗೂ ತಿಪ್ಪಾ ರೆಡ್ಡಿ ಜವಾಬ್ದಾರಿಯುತ ಬ್ಯಾಟಿಂಗ್ ಮೂಲಕ ಇನ್ನಿಂಗ್ಸ್‌ಗೆ ಚೈತನ್ಯ ತುಂಬಿದರು. ನಾಲ್ಕನೇ ವಿಕೆಟ್‌ಗೆ ಕೇವಲ 29 ಎಸೆತಗಳಲ್ಲಿ 56 ರನ್‌ಗಳ ಜೊತೆಯಾಟ ನಡೆಸಿದ ಈ ಜೋಡಿ ತಂಡವನ್ನು 16 ಓವರ್‌ಗಳಲ್ಲಿ 147/5 ಸ್ಥಿತಿಗೆ ಕೊಂಡೊಯ್ದಿತು. ಅಂತಿಮ ಹಂತದಲ್ಲಿ ಮನೀಷ್ ಪಾಂಡೆ ಕೇವಲ 19 ಎಸೆತಗಳಲ್ಲಿ ಆರು ಬೌಂಡರಿ ಹಾಗೂ ಒಂದು ಸಿಕ್ಸರ್ ನೆರವಿನಿಂದ 41 ರನ್‌ಗಳ ಸ್ಫೋಟಕ ಇನ್ನಿಂಗ್ಸ್ ಆಡಿದರು.

ತಿಪ್ಪಾ ರೆಡ್ಡಿ 26 ಎಸೆತಗಳಲ್ಲಿ ಐದು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳೊಂದಿಗೆ ಸತತ ಎರಡನೇ ಅರ್ಧಶತಕ (51) ದಾಖಲಿಸಿದರು. ಧ್ರುವ್ ಪ್ರಭಾಕರ್ ಕೂಡ ನಾಲ್ಕನೇ ಕ್ರಮಾಂಕದಲ್ಲಿ ಅವಕಾಶವನ್ನು ಸದುಪಯೋಗಪಡಿಸಿಕೊಂಡು 35 ಎಸೆತಗಳಲ್ಲಿ ಆರು ಬೌಂಡರಿ ಹಾಗೂ ಒಂದು ಸಿಕ್ಸರ್ ಸಹಿತ 51 ರನ್ ಗಳಿಸಿದರು. ಮೈಸೂರು ವಾರಿಯರ್ಸ್ ಪರ ಅರ್ಜುನ್ ಹೊಯ್ಸಳ (3/31) ಮತ್ತು ಲವೀಶ್ ಕೌಶಲ್ (3/25) ತಲಾ ಮೂರು ವಿಕೆಟ್ ಪಡೆದು ಮಿಂಚಿದರು.

ಪ್ಲೇ–ಆಫ್‌ಗೆ ಲಗ್ಗೆಯಿಟ್ಟ ಬೆಂಗಳೂರು ಬ್ಲಾಸ್ಟರ್ಸ್

ಹುಬ್ಬಳ್ಳಿ, ಜು.3(ವಿವಿಹೆಚ್)– ಪ್ರವೀಣ್ ದುಬೆ ಹಾಗೂ ನಾಯಕ ಶುಭಾಂಗ್ ಹೆಗ್ಡೆ ಅವರ ಆಲ್‌ರೌಂಡರ್ ಪ್ರದರ್ಶನದ ನೆರವಿನಿಂದ ಅತಿಥೇಯ ಹುಬ್ಬಳ್ಳಿ ಟೈಗರ್ಸ್ ತಂಡವನ್ನು ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ 3 ವಿಕೆಟ್‌ಗಳಿಂದ ಮಣಿಸಿತು.

8 ಪಂದ್ಯಗಳಲ್ಲಿ 7 ಗೆಲುವು ದಾಖಲಿಸುವ ಮೂಲಕ 14 ಅಂಕಗಳೊಂದಿಗೆ ಬೆಂಗಳೂರು ಅಂಕಪಟ್ಟಿಯಲ್ಲಿ ಅಗ್ರಸ್ಥಾನವನ್ನು ಉಳಿಸಿಕೊಳ್ಳುವ ಜೊತೆಗೆ ಪ್ಲೇ–ಆಫ್ ಹಂತಕ್ಕೆ ಮೊದಲ ತಂಡವಾಗಿ ಅರ್ಹತೆ ಗಿಟ್ಟಿಸಿಕೊಂಡಿತು.


ಟೂರ್ನಿಯ 24ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ಟೈಗರ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 197ರನ್ ಕಲೆಹಾಕಿತು. ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಬೆಂಗಳೂರು 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 200 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ಪಡೆದ ಹುಬ್ಬಳ್ಳಿ ತಂಡ ಕಾರ್ತಿಕ್ ಕೃಷ್ಣ 34(27) ಹಾಗೂ ಮೊಹಮ್ಮದ್ ತಾಹ 11(14) ಬ್ಯಾಟಿಂಗ್ ನೆರವಿನಿಂದ ಮೊದಲ ವಿಕೆಟ್‌ಗೆ 41ರನ್‌ಗಳ ಜೊತೆಯಾಟವಾಡಿತು. ರೋಹನ್ ಯರೇಶ್ವಿ 1(3) ಪೆವಿಲಿಯನ್ ತಲುಪಿದರು. ಮಧ್ಯಮ ಕ್ರಮಾಂಕದಲ್ಲಿ ಅನೀಶ್ವರ್ ಗೌತಮ್ 31(18), ಅಭಿನವ್ ಮನೋಹರ್ 35(18) ತಂಡಕ್ಕೆ ಉತ್ತಮ ಅಡಿಪಾಯ ಹಾಕಿಕೊಟ್ಟರು. ನಂತರ ಬಂದ ಹಾರ್ದಿಕ್ ರಾಜ್ 1(3) ಸುಸ್ತಾದರೆ, ಶಿವಕುಮಾರ್ ರಕ್ಷಿತ್ 28 ಎಸೆತಗಳಲ್ಲಿ ಅಜೇಯ 50ರನ್ ಬಾರಿಸಿ ತಂಡದ ಮೊತ್ತವನ್ನು ಹೆಚ್ಚಿಸಿದರು. ಮನ್ವಂತ್ ಕುಮಾರ್ ಅಜೇಯ 28(11)ರನ್ ಗಳಿಸಿ ಸಾಥ್ ನೀಡಿದರು. ಬೆಂಗಳೂರು ಪರ ನಾಯಕ ಶುಭಾಂಗ್ ಹೆಗ್ಡೆ 2 ವಿಕೆಟ್ ಪಡೆದರು.

198ರನ್‌ಗಳ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಬೆಂಗಳೂರು ತಂಡಕ್ಕೆ ಆರಂಭಿಕ ಆಘಾತ ಎದುರಾಯಿತು. ಭುವನ್ ಮೋಹನ್ ರಾಜು 15(7), ರೋಹನ್ ಪಾಟೀಲ್ 11(8), ಕೆ.ಶ್ರೀಜಿತ್ 25(13) ಹಾಗೂ ಸೂರಜ್ ಅಹೂಜಾ 2(5) ಪ್ರವುಖ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು.

ಈ ವೇಳೆ ನಾಯಕ ಶುಭಾಂಗ್ ಹೆಗ್ಡೆ ಜೊತೆಗೂಡಿದ ವಾಹಿದ್ ಫೈಜಾನ್ ಖಾನ್ 40ರನ್‌ಗಳ ಜೊತೆಯಾಟವಾಡಿದರು. ಇತ್ತ ಆಲ್‌ರೌಂಡರ್ ಪ್ರವೀಣ್ ದುಬೆ 32 ಎಸೆತಗಳಲ್ಲಿ 6 ಬೌಂಡರಿ, 3 ಸಿಕ್ಸರ್ ಸಹಿತ ಅಜೇಯ 64ರನ್ ಚಚ್ಚಿ ತಂಡಕ್ಕೆ ಗೆಲುವು ತಂದುಕೊಟ್ಟರು. ಉಳಿದಂತೆ ಶಿವರಾಜ್ 1(3) ಹಾಗೂ ರೋಹನ್ ನವೀನ್ ಅಜೇಯ 8(4) ರನ್ ಬಾರಿಸಿದರು.

ಆಷಾಢ ದರ್ಶನಕ್ಕೆ 2 ಸಾವಿರದ ಟಿಕೆಟ್ ಅವಶ್ಯಕತೆ ಇರಲಿಲ್ಲ!



ಮೈಸೂರು, ಜು.3(ಎಸ್‌ಪಿಎನ್)– ಆಷಾಢ ಶುಕ್ರವಾರ ಪ್ರಯುಕ್ತ ಚಾಮುಂಡೇಶ್ವರಿ ದೇವಿ ವಿಶೇಷ ದರ್ಶನಕ್ಕೆ ಜಿಲ್ಲಾಡಳಿತ 2 ಸಾವಿರ ಟಿಕೆಟ್ ನಿಗಧಿಪಡಿಸುವ ಅವಶ್ಯಕತೆ ಇರಲಿಲ್ಲ ಎಂಬ ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರ ಹೇಳಿಕೆ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ.

ಮೈಸೂರಿನಲ್ಲಿ ಕೆಲ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಅವರು, ಎರಡು ಸಾವಿರ ಟಿಕೆಟ್ ನಿಗದಿ ಪಡಿಸುವ ವಿಚಾರದಲ್ಲಿ ಸಭೆ ನಡೆಸಿ ಸೂಕ್ತ ತೀರ್ಮಾನ ಮಾಡಬೇಕಿತ್ತು. ಇದನ್ನು ಯಾವ ಆಧಾರದಲ್ಲಿ ನಿರ್ಧಾರ ಮಾಡಿದ್ದಾರೋ ತಿಳಿಯದು. ನನಗಿರುವ ಮಾಹಿತಿಯಂತೆ ಅಧಿಕಾರಿಗಳ ಮಟ್ಟದಲ್ಲಿ ಯಾವುದೇ ಸಭೆ ಆಗಿಲ್ಲ. ಏಕಾಏಕಿ ನಿರ್ಧರಿಸಿದ್ದಾರೆ. ಜನಸಾಮಾನ್ಯರ ದೃಷ್ಟಿಯಿಂದ ನೋಡಿದರೆ ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಬೇಸರ ಹೊರಹಾಕಿದ್ದಾರೆ.

ಅಲ್ಲದೆ, ಎರಡು ಸಾವಿರ ಟಿಕೆಟ್ ಪಡೆದು ವಿಶೇಷ ದರ್ಶನಕ್ಕೆ ಆನ್‌ಲೈನ್ ಮೂಲಕ ಬುಕ್ ಮಾಡಬೇಕಾ ಇಲ್ಲವೇ ದೇವಸ್ಥಾನಕ್ಕೆ ತೆರಳಿದಾಗ ಖರೀದಿಸಬೇಕಾ ಎಂಬುದನ್ನು ಪ್ರಾಧಿಕಾರ ಸ್ಪಷ್ಟಪಡಿಸಿಲ್ಲ. ಈಗಾಗಲೇ ದೇವಾಲಯ ವಿಚಾರವಾಗಿ ನ್ಯಾಯಾಲಯದಲ್ಲಿ ಪ್ರಕರಣ ಇದೆ. ನಮ್ಮ ಕಡೆಯಿಂದ ಯಾರಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯೆ ನೀಡಬೇಕೆಂದು ತಲುಪಿಸುತ್ತೇವೆ. ವಿಶೇಷ ದರ್ಶನಕ್ಕೆ ಎಂದು ಸಾವಿರ ಟಿಕೆಟ್ ಮಾಡಿರುವವರಿಗೆ ಆ ದೇವಿಯೇ ಒಳ್ಳೆಯ ಬುದ್ಧಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ ಎಂದಿದ್ದಾರೆ.

ರಸ್ತೆಯ ಹಳ್ಳಕ್ಕೆ ತಗಡಿನ ಡ್ರಮ್ ಇಟ್ಟು ಕೈತೊಳೆದುಕೊಂಡ ಪಾಲಿಕೆ ಅಧಿಕಾರಿಗಳು!



ಮೈಸೂರು, ಜು.3(ಬಿಎಲ್‌ಯು)– ರಸ್ತೆ ಮಧ್ಯೆ ಇರುವ ಹಳ್ಳಗಳಿಂದ ವಾಹನ ಸವಾರರು ಅಪಘಾತಕ್ಕೀಡಾಗಬಾರದು ಎಂದು ಇಷ್ಟು ದಿನ ಬ್ಯಾರಿಕೇಡ್ ನಿಲ್ಲಿಸಲಾಗುತ್ತಿತ್ತು. ಆದರೆ ಈಗ ರಸ್ತೆ ಮಧ್ಯೆ ಹಳ್ಳದಿಂದ ವಾಹನ ಸವಾರರು ಅಪಘಾತದಿಂದ ಪಾರಾಗಲೆಂದು ತಗಡಿನ ಡ್ರಂ ಇಟ್ಟು ಅಪಾಯದ ಎಚ್ಚರಿಕೆ ನೀಡಲಾಗಿದೆ.

ಮೈಸೂರು ನಗರ ಪಾಲಿಕೆಯು ಹಳ್ಳ–ಕೊಳ್ಳ ಬಿದ್ದ ರಸ್ತೆಗೆ ಹೊಸದಾಗಿ ಡಾಂಬರೀಕರಣ ಮಾಡುವುದಿರಲಿ, ತೀರಾ ದೊಡ್ಡ ಗಾತ್ರದ ಗುಂಡಿಗೆ ಮಣ್ಣು ಸುರಿದು ಮುಚ್ಚುವ ಸಣ್ಣ ಕೆಲಸ ಕೂಡ ಮಾಡುತ್ತಿಲ್ಲ.


ಮೈಸೂರಿನ ನಂಜನಗೂಡು ರಸ್ತೆಯ ಚಾಮುಂಡಿಬೆಟ್ಟದ ಪಾದಕ್ಕೆ ಹೋಗುವ ರಸ್ತೆಯಲ್ಲಿ ದೊಡ್ಡ ಹಳ್ಳವೊಂದು ಬಿದ್ದಿದೆ. ಜೆಎಸ್‌ಎಸ್ ಕಾಲೇಜಿನ ಪಕ್ಕದ ಈ ರಸ್ತೆ ಈಗ ಅಪಘಾತ ವಲಯವಾಗಿದೆ.

ಸಾಮಾನ್ಯವಾಗಿ ಎಲ್ಲಾದರೂ ಹಳ್ಳ ಇದ್ದರೆ ವಾಹನ ಸವಾರರು ಅಪಘಾತಕ್ಕೀಡಾಗಬಾರದು ಎಂದು ಪೊಲೀಸ್ ಬ್ಯಾರಿಕೇಡ್ ನಿಲ್ಲಿಸಲಾಗುತ್ತಿತ್ತು. ಆದರೆ ಬಾಯ್ತೆರೆದಿರುವ ಹಳ್ಳದ ಮಧ್ಯೆ ತಗಡಿನ ಡ್ರಂವೊಂದನ್ನು ಇಡಲಾಗಿದೆ.

ಡ್ರಂ ಇಟ್ಟಿರುವ ಪಕ್ಕದ ಸ್ಥಳವು ಕೂಡ ಹಳ್ಳವಾಗಿದೆ. ಯಾರಾದರೂ ಡ್ರಂ ಇಟ್ಟಿರುವ ಸ್ಥಳ ಬಿಟ್ಟು ಪಕ್ಕದಲ್ಲಿ ಹಾದು ಹೋದರೆ ಕೆಳಗೆ ಬೀಳುವುದಂತೂ ಗ್ಯಾರಂಟಿ.

ಹಳ್ಳ ಬಿದ್ದ ಸ್ಥಳದ ಸನಿಹದಲ್ಲಿ ಸ್ಮಶಾನವಿದ್ದು, ಪ್ರತಿ ದಿನ ಶವಸಂಸ್ಕಾರಕ್ಕೆ ಇಲ್ಲಿಯೇ ಹಾದು ಹೋಗುತ್ತಾರೆ. ಈ ಸಂದರ್ಭದಲ್ಲಿ ಆಯ ತಪ್ಪಿ ಯಾರಾದರೂ ಬಿದ್ದರೆ ಎಂಬ ಆತಂಕ ಎದುರಾಗಿದೆ. ಈ ರಸ್ತೆ ಹಳ್ಳ ಬಿದ್ದು ಎಷ್ಟೋ ದಿನಗಳಾಗಿದೆ. ಆದರೆ ನಗರ ಪಾಲಿಕೆಯ ಅಧಿಕಾರಿಗಳು ಡಾಂಬರೀಕರಣ ಮಾಡುವುದಿರಲಿ ಕನಿಷ್ಠ ಮಣ್ಣು ಸುರಿದು ಸಮತಟ್ಟು ಮಾಡುವ ಕೆಲಸ ಕೂಡ ಮಾಡಿಲ್ಲ.

ಡಾ.ಯೋಗಣ್ಣನವರ 'ಆರೋಗ್ಯ ವಿಶ್ವಕೋಶ'ಕ್ಕೆ ಶ್ರೇಷ್ಠ ವಿಜ್ಞಾನ ಪುಸ್ತಕ ಪ್ರಶಸ್ತಿ



ಮೈಸೂರು, ಜು.3– ಕರ್ನಾಟಕ ಸರ್ಕಾರದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು 2025–26ನೇ ಸಾಲಿನ ಶ್ರೇಷ್ಠ ವಿಜ್ಞಾನ ಪುಸ್ತಕ ಪ್ರಶಸ್ತಿಗೆ ಡಾ.ಎಸ್.ಪಿ.ಯೋಗಣ್ಣ ಅವರ 'ಆರೋಗ್ಯ ವಿಶ್ವಕೋಶ' ಕೃತಿಯನ್ನು ಆಯ್ಕೆ ಮಾಡಿದೆ. 'ಆರೋಗ್ಯ ವಿಶ್ವಕೋಶ' ಕೃತಿಯಲ್ಲಿ ವೈದ್ಯಕೀಯ ವಿಷಯಗಳಿಗೆ ಸಂಬಂಧಿಸಿದ ಸುಮಾರು 3 ಸಾವಿರ ಪ್ರಮುಖ ಶೀರ್ಷಿಕೆಗಳು ಹಾಗೂ 2 ಸಾವಿರ ಉಪಶೀರ್ಷಿಕೆಗಳು ಒಳಗೊಂಡಿವೆ. ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ, ಅದರಲ್ಲೂ ಕನ್ನಡದಲ್ಲಿ ಪ್ರಕಟವಾದ ಮೊದಲ ಸಮಗ್ರ ಆರೋಗ್ಯ ವಿಶ್ವಕೋಶ ಎಂಬ ಹೆಗ್ಗಳಿಕೆಗೆ ಈ ಕೃತಿ ಪಾತ್ರವಾಗಿದೆ.

ಡಾ. ಎಸ್.ಪಿ. ಯೋಗಣ್ಣ ಅವರು ಇದುವರೆಗೆ 60ಕ್ಕೂ ಹೆಚ್ಚು ವೈದ್ಯಕೀಯ ಕೃತಿಗಳನ್ನು ರಚಿಸಿದ್ದಾರೆ. ಅವರ 'ಆಧ್ಯಾತ್ಮಿಕ ಆರೋಗ್ಯ ದರ್ಶನ' ಕೃತಿಗೆ 2020ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದ್ದು, 'ಆರೋಗ್ಯ ಎಂದರೇನು?' ಕೃತಿಗೆ 2019ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿ ಪ್ರಶಸ್ತಿ ದೊರೆತಿದೆ. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಈ ಪ್ರಶಸ್ತಿಯು ವೈದ್ಯಕೀಯ ಜ್ಞಾನವನ್ನು ಕನ್ನಡದಲ್ಲಿ ಸಮಗ್ರವಾಗಿ ದಾಖಲಿಸಿರುವ ಕೃತಿಗೆ ದೊರೆತ ಮತ್ತೊಂದು ಮಹತ್ವದ ಗೌರವವಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

04.07.2026 ಶನಿವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಡಯಾಬಿಟಿಕ್ ನ್ಯೂರೋಪತಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ.

■ **ಮೈಸೂರು ವಿಶ್ವವಿದ್ಯಾನಿಲಯ, ಶಾಲೆಗಳಲ್ಲಿ ವಿಜ್ಞಾನ ಶಿಕ್ಷಣ ಕೇಂದ್ರ :** ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ವಿಜ್ಞಾನ ಮತ್ತು ಗಣಿತ ಸಂವಾದ ಕಾರ್ಯಕ್ರಮ, ಸ್ಥಳ: ಐನ್‌ಸ್ಟೈನ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 9.30 ರಿಂದ.

■ **ಅನ್ನಪೂರ್ಣ ನೇತ್ರ ಆಸ್ಪತ್ರೆ :** ರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ ಸಾರ್ವಜನಿಕರಿಗಾಗಿ ಉಚಿತ ನೇತ್ರ ತಪಾಸಣಾ ಶಿಬಿರ, ಸ್ಥಳ: ಅನ್ನಪೂರ್ಣ ನೇತ್ರ ಆಸ್ಪತ್ರೆ, ಶಾರದಾದೇವಿನಗರ, ಬೆಳಗ್ಗೆ 10 ರಿಂದ.

■ **ದೀಪಾ ಶಿಕ್ಷಣ ಮತ್ತು ಸೇವಾ ಟ್ರಸ್ಟ್ :** ವಿದ್ಯಾರ್ಥಿ ಸಂಘ ಮತ್ತು ದೀಪಾ ಹಸಿರು ಪಡೆ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಬೋಗಾದಿ ಪ.ಪಂ. ಸಿಇಓ ಎಸ್.ಎಂ. ಸುಜಯ್ ಕುಮಾರ್, ದೀಪಾ ಹಸಿರು ಪಡೆ ಉದ್ಘಾಟನೆ : ಪರಿಸರ ತಜ್ಞ ಮ್ಯಾನ್ ಮನು, ಅಧ್ಯಕ್ಷತೆ : ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ ಉಪಾಧ್ಯಕ್ಷ ಸದಾಶಿವ ಪೂಜಾರಿ, ಸ್ಥಳ: ಸ್ವಾಮಿ ವಿವೇಕಾನಂದ ಸಭಾಂಗಣ, ರೂಪಾನಗರ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ಗುಜರಾತ್ ಕರಕುಶಲ ಉತ್ಸವ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಎಟಿಎಂಇಸಿಇ ಸಂಸ್ಥೆ :** ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು : ಬೆಳಗಾವಿ ವಿಟಿಯು ಮಾಜಿ ಉಪಕುಲಪತಿ ಡಾ. ಕರಿಸಿದ್ದಪ್ಪ, ಗೌರವ ಅತಿಥಿಗಳು : ಉಪ ವ್ಯವಸ್ಥಾಪಕ ವಿನಯ್ ರಮೇಶ್, ಅಧ್ಯಕ್ಷತೆ : ಎಟಿಎಂಇಸಿಎ ಅಧ್ಯಕ್ಷ ಎಲ್. ಅರುಣ್ ಕುಮಾರ್, ಸ್ಥಳ: ಎಟಿಎಂಇಸಿಇ ಸಿವಿಲ್ ಸಭಾಂಗಣ, ಬೆಳಗ್ಗೆ 10 ರಿಂದ.

■ **ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗ :** ವಚನ ಪಿತಾಮಹ ಡಾ.ಫ.ಗು. ಹಳಕಟ್ಟಿ ಅವರ ಜನುಮ ದಿನಾಚರಣೆ, ಅಧ್ಯಕ್ಷತೆ : ವಿಶ್ರಾಂತ ಮುಖ್ಯ ಶಿಕ್ಷಕ ಸಂಪತ್ತು, ಉದ್ಘಾಟನೆ : ಕಾವೇರಿ ಬಳಗದ ಅಧ್ಯಕ್ಷೆ ಶ್ರೀಮತಿ ಎನ್.ಕೆ. ಕಾವೇರಿಯಮ್ಮ, ಪ್ರಧಾನ ಭಾಷಣ : ಪತ್ರಕರ್ತ ರಾಜಣ್ಣ ದೊಡ್ಡನಹುಂಡಿ, ಬಹುಮಾನ ವಿತರಣೆ : ಹಿರಿಗಾಮಿ ಕಲಾವಿದ ಹೆಚ್.ವಿ. ಮುರಳೀಧರ್, ಪ್ರಾಸ್ತಾವಿಕ ಮಾತು : ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಶ್ರೀ ಗೌರಿಶಂಕರ ಹಿರಿಯ ಪ್ರಾಥಮಿಕ ಶಾಲೆ, ಗೌರಿಶಂಕರ ನಗರ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಿ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ :** ಒಂದು ದಿನದ ರಾಜ್ಯ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಅಧ್ಯಕ್ಷತೆ : ಶಾಸಕ ಜಿ.ಡಿ. ಹರೀಶ್‌ಗೌಡ, ವಿಶೇಷ ಆಹ್ವಾನಿತರು : ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ, ಮುಖ್ಯ ಅತಿಥಿಗಳು : ನಿರ್ದೇಶಕರಾದ ಬಿ.ಸಿ. ಲೋಕಪ್ಪಗೌಡ, ಬಿ. ಜಯಕರಶೆಟ್ಟಿ ಇಂದ್ರಾಳಿ, ಡಾ. ಹೆಚ್.ವಿ. ರಾಜೀವ್, ಬಿ.ಎನ್. ಸದಾನಂದ, ಕೆ.ಎಸ್. ನವೀನ್, ಪ್ರಸಾದರೆಡ್ಡಿ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

■ **ಮೈಸೂರು ಲಿಟರರಿ ಫೋರಂ ಮತ್ತು ಚಾರಿಟಬಲ್ ಟ್ರಸ್ಟ್, ಮೈಸೂರು ಬುಕ್ ಕ್ಲಬ್ ಚಾರಿಟಬಲ್ ಟ್ರಸ್ಟ್ :** ಮೈಸೂರು ಸಾಹಿತ್ಯ ಸಂಭ್ರಮ, ಉದ್ಘಾಟನೆ : ರಾಜಮಾತೆ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಗೌರವ ಅತಿಥಿಗಳು : ಅಮಿಶ್ ತ್ರಿಪಾಠಿ, ಲೇಖಕ ಅರೂನ್ ರಾಮನ್, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10 ರಿಂದ.

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು :** ಪೂಜ್ಯಶ್ರೀ ಗುರಿಕಾರ್ ಮರಿಮಲ್ಲಪ್ಪನವರ ಸಂಸ್ಮರಣೋತ್ಸವ–2026, ಪದವಿಪೂರ್ವ ಪ್ರಶಸ್ತಿ ಮತ್ತು ಸ್ವರ್ಣ ಪದಕ ಪ್ರದಾನ ಸಮಾರಂಭ, ಅಧ್ಯಕ್ಷತೆ : ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಪ್ರಶಸ್ತಿ ಪ್ರದಾನ : ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಉಪಕುಲಪತಿ ಪ್ರೊ. ಎ.ಎನ್. ಸಂತೋಷ್‌ಕುಮಾರ್, ಮುಖ್ಯ ಅತಿಥಿಗಳು : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ನಾಗಮ್ಮ, ಉಪಸ್ಥಿತರು : ಮರಿಮಲ್ಲಪ್ಪ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಶ್ರೀಮತಿ ಹೆಚ್.ಬಿ. ಆಶಾ, ಸ್ಥಳ: ಕಾಲೇಜು ಆವರಣ, ಮರಿಮಲ್ಲಪ್ಪ ವಿದ್ಯಾಸಂಸ್ಥೆ, ಬೆಳಗ್ಗೆ 10.30ಕ್ಕೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು :** ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ. ಗೋಪಿನಾಥ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಕೆ.ಎಂ. ರಾಜಶೇಖರ್, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ಹಿಮೋಫಿಲಿಯಾ ಮತ್ತ ಥಲಸ್ಸೆಮಿಯಾ : ಸವಾಲುಗಳು ಆರೈಕೆ ಮತ್ತು ಭರವಸೆ ಕುರಿತು ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ದಾವಣಗೆರೆಯ ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯ ಸಂಸ್ಥಾಪಕರಾದ ಪದ್ಮಶ್ರೀ ಡಾ. ಸುರೇಶ್ ಹನಗವಾಡಿ, ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ಆರ್. ದಿನೇಶ್, ಸಕ್ಷಮ ಮೈಸೂರಿನ ಅಧ್ಯಕ್ಷ ಜಯರಾಮ್ ಬಿ.ಎನ್., ಆದಿತ್ಯ ಅಧಿಕಾರಿ ಆಸ್ಪತ್ರೆ ಮುಖ್ಯಸ್ಥ ಡಾ. ಚಂದ್ರಶೇಖರ್, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಚಾರ್ ಜೋಶಿ, ಸ್ಥಳ: ಪ್ರೊ. ಎಸ್. ಚಿನ್ನಸ್ವಾಮಿ ಶೆಟ್ಟಿ ಸಮ್ಮೇಳನ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಪತ್ರಿಕಾ ದಿನಾಚರಣೆ ಪ್ರಯುಕ್ತ ಡಾ. ಕೆ.ಬಿ. ಗಣಪತಿ ಹಾಗೂ ರಾಜಶೇಖರ ಕೋಟಿ ಒಂದು ನೆನಪು ಮತ್ತು ಹಿರಿಯ ಪತ್ರಕರ್ತರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ : ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್, ಪುಷ್ಪಾರ್ಚನೆ : ಮಾಜಿ ಉಪ ಮೇಯರ್ ಓಂಕಾರ್ ಪ್ರಸಾದ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಧಾನ ನುಡಿ : ವಿಶೇಷ ಅಧಿಕಾರಿ ಡಾ. ಎಸ್. ಶಿವರಾಜಪ್ಪ, ಮುಖ್ಯ ಅತಿಥಿಗಳು : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ವಕೀಲರಾದ ಶ್ರೀಮತಿ ತನುಜ ಮಹೇಶ್, ಲಯನ್ ಗೋಲ್ಡನ್ ಟಿ. ಸುರೇಶ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಲಿವಿಂಗ್ ಅಟ್ ದಿ ಸೋರ್ಸ್ ಯೋಗಾ ಟೀಚಿಂಗ್ಸ್ ಆಫ್ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ, ವಿದುಷಿ ಜಿ. ಉಷಾ ಸೋಮಶೇಖರ್ ಅವರಿಂದ ಗಾಯನ, ವಿದ್ವಾನ್ ತಾಂಡವಮೂರ್ತಿ–ಪಿಟೀಲು, ವಿದ್ವಾನ್ ಪಿ. ನಟರಾಜ್–ಮೃದಂಗ, ವಿದ್ವಾನ್ ಎಂ.ಆರ್. ಮೋಹನ್–ಮೋರ್ಚಿಂಗ್, ಸ್ಥಳ: ಶ್ರೀ ಗಾಯತ್ರಿ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಎಸ್‌ಬಿಎಂ ಕಾಲೋನಿ, ಶ್ರೀರಾಂಪುರ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ 'ಹರಿತ್ತೆ ಜಗತ್ತು–ಸಸ್ಯ ವೈದ್ಯರ ಕಿವಿಮಾತು', ಪ್ರಸ್ತುತಿ : ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು : ಗ್ರೀನ್ ಲೈಫ್ ಕ್ರಾಪ್ ಟೆಕ್, ಮೈಸೂರು, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು' ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಮತ್ತು ಸಂಜೆ 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ), 6.30 ವಿಜ್ಞಾನದ ಮುನ್ನಡೆ, 6.50 ಕೃಷಿರಂಗ :ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆ ಈ ಕುರಿತು ಬೆಂಗಳೂರಿನ ವೈಲ್ಡ್ ಲೈಫ್ ಫಸ್ಟ್ ಸಂಸ್ಥೆಯ ಟ್ರಸ್ಟಿ ಪ್ರವೀಣ್ ಭಾರ್ಗವ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವ ಮೂರ್ತಿ, 8.00 ನಾಟಕ 'ಕರಡಿಯ ಕುಣಿಸುತ', ರಚನೆ–ಎನ್. ವಿ. ವಾಸುದೇವ ಶರ್ಮ, ನಿರ್ದೇಶನ ಮತ್ತು ನಿರ್ಮಾಣ–ಜಿ. ಶಾಂತಕುಮಾರ್, ನಿರ್ಮಾಣ ಸಹಕಾರ–ಕಾರ್ತಿಕ್ ಎಂ. ಎಸ್., 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂಡಿತ್ ಅರ್ನಾಬ್ ಚಟ್ಟೋಪಾಧ್ಯಾಯ–ಖಯಾಲ್ ಹಾಡುಗಾರಿಕೆ

ಸಾಮಾಜಿಕ ಜಾಲ ತಾಣಗಳಲ್ಲಿ ಸುಳ್ಳು ಸುದ್ದಿ ಹರಡುವವರಿಗೆ ಪೊಲೀಸರ ಕಡಿವಾಣ

- ಅಕ್ರಮ ವಲಸಿಗರೆಂಬ ವಿಡಿಯೋ ವೈರಲ್ ಹಿನ್ನೆಲೆ
- ಫೇಸ್‌ಬುಕ್, ಇನ್‌ಸ್ಟಾ ಪೇಜ್‌ಗಳ ಮೇಲೆ ನಿಗಾ
- ದಾರಿ ತಪ್ಪಿಸುವವರಿಗೆ ಕಠಿಣ ಕ್ರಮದ ಎಚ್ಚರಿಕೆ

ಮೈಸೂರು, ಜು.3(ಎಂಟಿವೈ)– ಫೇಸ್‌ಬುಕ್, ಇನ್ಸ್ ಸ್ಟಾಗ್ರಾಂ ಸೇರಿದಂತೆ ಸಾಮಾಜಿಕ ಜಾಲ ತಾಣಗಳಲ್ಲಿ ಸತ್ಯಾಸತ್ಯತೆ ಪರಿಶೀಲಿಸದೆ ಸುಳ್ಳು ಸುದ್ದಿ ಹಾಗೂ ವದಂತಿ ಹಬ್ಬಿಸುವವರಿಗೆ ಶಾಕ್ ನೀಡಲು ಮುಂದಾಗಿರುವ ಪೊಲೀಸರು ಸಾಮಾಜಿಕ ಜಾಲ ತಾಣಗಳ ಮೇಲೆ ಹದ್ದಿನ ಕಣ್ಣಿಟ್ಟಿದ್ದಾರೆ.

ಇತ್ತೀಚೆಗೆ ಮೈಸೂರು ಸೇರಿದಂತೆ ವಿವಿಧೆಡೆ ಯೂಟ್ಯೂಬರ್, ವಿವಿಧ ಪೇಜ್ ಹಾಗೂ ಸಾಮಾಜಿಕ ಜಾಲ ತಾಣಗಳ ನೈಜ ಮಾಹಿತಿ ಬದಿಗೊತ್ತಿ, ವದಂತಿ ಹಬ್ಬಿಸುವ ಪ್ರಯತ್ನ ನಡೆಯುತ್ತಿರುವುದಾಗಿ ಸಾರ್ವಜನಿಕ ವಲಯದಿಂದ ಅಸಮಾಧಾನ ವ್ಯಕ್ತವಾದ ಹಿನ್ನೆಲೆಯಲ್ಲಿ ಇದೀಗ ಪೊಲೀಸರು ಸಾಮಾಜಿಕ ಜಾಲತಾಣ ಹಾಗೂ ಯೂಟ್ಯೂಬ್‌ಗಳನ್ನು ಜಾಲಾಡಲು ಮುಂದಾಗಿದ್ದಾರೆ.

ಇತ್ತೀಚೆಗೆ ಮೈಸೂರಿಗೆ ವಲಸಿಗರು ಆಗಮಿಸುತ್ತಿದ್ದಾರೆ ಎಂದು ರೈಲ್ವೆ ನಿಲ್ದಾಣದಿಂದ ಹೊರಗೆ ಬರುತ್ತಿದ್ದ ಪ್ರಯಾಣಿಕರ ವಿಡಿಯೋ ಚಿತ್ರಣದೊಂದಿಗೆ ತಪ್ಪು ಸಂದೇಶ ಸಾರುವಂತೆ ಮಾಹಿತಿ ಬಿತ್ತರಿಸಲಾಗುತ್ತಿದೆ ಎಂಬ ಆರೋಪ ಹಾಗೂ ಸಾರ್ವಜನಿಕ ವಲಯದಲ್ಲಿ ಭಯದ ವಾತಾವರಣ ಮೂಡಿಸುವ ಪ್ರಯತ್ನ ನಡೆಸಲಾಗುತ್ತಿದೆ ಎಂಬ ಶಂಕೆ ಮೇರೆಗೆ ವಿಡಿಯೋ

> ಯಾವುದೇ ಪುರಾವೆ ಇಲ್ಲದೆ, ಸಾರ್ವಜನಿಕರಲ್ಲಿ ಆತಂಕ ಉಂಟು ಮಾಡುವ ಸುಳ್ಳು ಸುದ್ದಿ ಹಬ್ಬಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಈಗಾಗಲೇ ಕೆಲವರನ್ನು ಕರೆದು ಮಾಹಿತಿ ಪಡೆದು ಎಚ್ಚರಿಕೆ ನೀಡಲಾಗಿದೆ
>
> – ಡಾ.ಹರ್ಷ ಪ್ರಿಯಂವದ, ಡಿಸಿಪಿ



ಪೋಸ್ಟ್ ಮಾಡಿದ್ದ ಕೆಲವರನ್ನು ಠಾಣೆಗೆ ಕರೆಸಿ, ಮಾಹಿತಿ ಪಡೆಯಲಾಗಿದೆ.

ಪೋಸ್ಟ್ ಮಾಡಿರುವ ವಿಡಿಯೋದಲ್ಲಿ ನೀಡಿರುವ ಮಾಹಿತಿ ಖಚಿತಪಡಿಸುವ ಯಾವುದಾದರೂ ದಾಖಲೆಗಳಿವೆಯಾ ಎಂದು ಪ್ರಶ್ನಿಸಿದ್ದಾರೆ. ಆದರೆ, ಯೂಟ್ಯೂಬರ್ ಹಾಗೂ ವಿವಿಧಪೇಜ್‌ಗಳ ಅಡ್ಮಿನ್‌ಗಳು ಯಾವುದೇ ದಾಖಲೆ ನೀಡಲು ವಿಫಲರಾಗಿದ್ದಾರೆ. ಇದರಿಂದ ವದಂತಿ ಹಬ್ಬಿಸುವ ವಿಡಿಯೋ ಫುಟೇಜ್ ಡಿಲೀಟ್ ಮಾಡಿದ್ದಾರೆ. ಅಲ್ಲದೆ, ಇಂತಹ ವರ್ತನೆ ಪುನರಾವರ್ತನೆಯಾದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿ ಕಳುಹಿಸಲಾಗಿದೆ. ಅಲ್ಲದೆ, ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ಇಡಲು ಕೆಲ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಅಕ್ರಮ ಎಸ್‌ಐಆರ್ ಪ್ರಕ್ರಿಯೆ

ಬಿಎಲ್‌ಓಗಳ ಜೊತೆ ಬಿಎಲ್‌ಎಗಳು ಗೂಂಡಾಗಿರಿ : ಸಂದೇಶಸ್ವಾಮಿ





ನರಸಿಂಹರಾಜ ಕ್ಷೇತ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆ ಅಕ್ರಮವಾಗಿ ನಡೆಯುತ್ತಿರುವ ಬಗ್ಗೆ ಜಿಲ್ಲಾಧಿಕಾರಿಗಳ ಕಚೇರಿಗೆ ಮನವಿ ಸಲ್ಲಿಸಿದರು. ಬಲಚಿತ್ರದಲ್ಲಿ ಬಿಎಲ್‌ಓಗಳು ಖಾಸಗಿ ಶಾಲೆಯಲ್ಲಿ ಕುಳಿತು ಅರ್ಜಿ ವಿತರಿಸುತ್ತಿರುವುದನ್ನು ಕಾಣಬಹುದು

ಮೈಸೂರು, ಜು.3(ಜಿಎ)–ನರಸಿಂಹರಾಜ ಕ್ಷೇತ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆ ಅಕ್ರಮವಾಗಿ ನಡೆಯುತ್ತಿದ್ದು, ಬಿಎಲ್‌ಓಗಳ ಜೊತೆ ಬಿಎಲ್‌ಎಗಳು ಗೂಂಡಾಗಳಂತೆ ವರ್ತಿಸಿ, ಎನ್ಯುಮರೇಷನ್ ಅರ್ಜಿಗಳನ್ನು ಕಸಿದು ಸಿಕ್ಕ ಸಿಕ್ಕವರಿಂದ ಭರ್ತಿ ಮಾಡಿಸುತ್ತಿದ್ದಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನರಸಿಂಹರಾಜ ಕ್ಷೇತ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸುತ್ತಿರುವ ಅಧಿಕಾರಿಗಳನ್ನು ಒಂದೆಡೆ ಶೆಡ್‌ಗಳಲ್ಲಿ ಕೂಡಿ ಹಾಕಿ ಬಂಧಿಸುವ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಅಧಿಕಾರಿಗಳು ಆತಂಕಕ್ಕೊಳಗಾಗಿದ್ದು, ಇವರಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದರು.

2002 ರಿಂದ ಇದುವರೆಗೆ ಸುಮಾರು ಒಂದು ಲಕ್ಷ ಮತಗಳು ಹೆಚ್ಚಾಗಿವೆ. ಇದು ಹೇಗೆ ಸಾಧ್ಯ, ಅಲ್ಲಿ ಹೊಸ ಬಡಾವಣೆ ಆಗಿಲ್ಲ.

ಮತದಾರರ ಬದಲು ಏಜೆಂಟ್‌ಗಳಿಂದಲೇ ಅರ್ಜಿ ಭರ್ತಿ

ನರಸಿಂಹರಾಜ ಕ್ಷೇತ್ರದಲ್ಲಿ ಈ ರೀತಿ ಬಿಎಲ್‌ಎಗಳು ಎನ್ಯುಮರೇಷನ್ ಅರ್ಜಿಗಳನ್ನು ಮತದಾರರ ಬದಲು ತಾವೇ ಭರ್ತಿ ಮಾಡುತ್ತಿರುವ ಆರೋಪ ಕೇಳಿ ಬಂದಿದೆ. ಆದರೆ, ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಎಲ್‌ಓಗಳು ಯಾವುದೇ ಮನೆಗಳಿಗೆ ತೆರಳದೇ ಖಾಸಗಿ ಶಾಲೆಯ ರಂಗಮಂದಿರದಲ್ಲಿ ಎನ್ಯುಮರೇಷನ್ ಅರ್ಜಿಗಳಗಳನ್ನು ಹಿಡಿದುಕೊಂಡು ಮತದಾರರೇ ಇಲ್ಲಿಗೆ ಬಂದು ಅರ್ಜಿ ಪಡೆದುಕೊಳ್ಳುವಂತೆ ಹೇಳಿದ್ದಾರೆ.

ಈ ಬಗ್ಗೆ ಬಿಎಲ್‌ಓಗಳನ್ನು ಪ್ರಶ್ನಿಸಿದಾಗ 'ನಾವು ಬೇರೆ ಊರಿನವರು ನಮಗೆ ಇಲ್ಲಿನ ರಸ್ತೆಗಳು, ಸ್ಥಳೀಯ ಜನರ ಪರಿಚಯವಿಲ್ಲ. ಮತ್ತೊಂದೆಡೆ ಮನೆಗಳ ಸಂಖ್ಯೆ ಕ್ರಮಬದ್ಧವಾಗಿಲ್ಲ. ಜೊತೆಗೆ ನಮ್ಮ ಸಹಾಯಕ್ಕೆ ಬರಬೇಕಾದ ಬಿಎಲ್‌ಎಗಳು ಯಾರು ಬಾರದ ಹಿನ್ನೆಲೆಯಲ್ಲಿ ನಾವು ಇಲ್ಲಿ ಇರುವ ವಿಷಯವನ್ನು ತಿಳಿದುಕೊಂಡು ಕೆಲವರು ಅರ್ಜಿ ಪಡೆದುಕೊಳ್ಳುತ್ತಿದ್ದಾರೆ. ಅರ್ಜಿ ಪಡೆದುಕೊಂಡವರ ಮೊಬೈಲ್ ನಂಬರ್ ನಾವು ಪಡೆದುಕೊಂಡು ನಂತರ ಅವರ ಮನೆಗೆ ಭೇಟಿ ನೀಡಿ, ಅರ್ಜಿ ಪಡೆದುಕೊಂಡು ಮನೆಗಳಿಗೆ ಸ್ಟಿಕರ್ ಅಳವಡಿಸುತ್ತಿದ್ದೇವೆ ಎಂದು' ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೈಸೂರಿನ ಎಲ್ಲಾ ಮತಗಟ್ಟೆಗಳಲ್ಲಿ ಬಿಎಲ್‌ಓಗಳು ಇದೇ ರೀತಿ ಮಾಡುತ್ತಿರುವುದರಿಂದ ಮತದಾರರು ಬಿಎಲ್‌ಓಗಳು ಮನೆ ಬಳಿಗೆ ಬರುತ್ತಾರೆ ಎಂದು ಕಾದು ಕುಳಿತಿದ್ದಾರೆ. ಅವರ ಮನೆ ಬಳಿಗೆ ಯಾವುದೇ ಬಿಎಲ್‌ಓ ಭೇಟಿ ನೀಡುತ್ತಿಲ್ಲ. ಸಮುದಾಯ ಭವನ, ಶಾಲೆಗಳು ಸೇರಿದಂತೆ ಇತರೆ ಸ್ಥಳಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ಮಾಡುತ್ತಿದ್ದಾರೆ ಎಂದು ಸಾರ್ವಜನಿಕರ ವಲಯದಲ್ಲಿ ಚರ್ಚೆಯಾಗುತ್ತಿದೆ.

ಜೊತೆಗೆ ಮನೆಗಳೂ ಹೆಚ್ಚಾಗಿಲ್ಲ. ಇರುವಷ್ಟೇ ಇವೆ. ಇದಕ್ಕೆ ಕಾರಣ ಏನು ಎಂಬುದನ್ನು ಪತ್ತೆ ಹಚ್ಚಬೇಕು. ಇಡೀ ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ಒಂದು ರೀತಿ ಇದ್ದರೆ ಇಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ. ಅಧಿಕಾರಿಗಳಿಗೆ ರಕ್ಷಣೆ ಇಲ್ಲ. ಓರ್ವ ಅಧಿಕಾರಿ ಬೆದರಿಕೆ ಕಾರಣ ತಮ್ಮಿಂದ ಇಲ್ಲಿ ಕೆಲಸ ಮಾಡಲು ಸಾಧ್ಯವಾಗದೆಂದು ಹೆದರಿ ವಾಪಸ್ಸಾದ ಘಟನೆ ನಡೆದಿದೆ. ಈ ಕುರಿತ ಹಲವಾರು ಅಕ್ರಮಗಳಿಗೆ ಸಂಬಂಧಿಸಿದ ಮಾಹಿತಿ ತಮ್ಮ ಬಳಿ ಇದ್ದು, ಡಿಸಿಗೆ ದೂರು ನೀಡುತ್ತಿರುವುದಾಗಿ ಅವರು ತಿಳಿಸಿದರು.

ಕ್ಷೇತ್ರದಲ್ಲಿ ಅನಕ್ಷರಸ್ಥರು ಹೆಚ್ಚಾಗಿದ್ದಾರೆ. ಬಹಳಷ್ಟು ಮಂದಿ ಬಡವರು. ಎಲ್ಲ ಧರ್ಮದವರೂ ಇಲ್ಲಿದ್ದಾರೆ. ಆದರೆ ಬಿಎಲ್‌ಎಗಳು ಗೂಂಡಾಗಳ ರೀತಿ ವರ್ತಿಸುತ್ತಿರುವುದರಿಂದ ಮನೆಯಿಂದ ಹೊರ ಬಂದು ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮುಕ್ತವಾಗಿ ಪಾಲ್ಗೊಳ್ಳಲು ಸಾಧ್ಯವಾಗದಂತಾಗಿದೆ. ಅಧಿಕಾರಿಗಳಿಂದ ಅರ್ಜಿಗಳನ್ನು ಬಲವಂತವಾಗಿ ಪಡೆದು ಎಲ್ಲೋ ಭರ್ತಿ ಮಾಡಿಕೊಂಡು ಬಂದು ವಾಪಸ್ ನೀಡುತ್ತಿದ್ದಾರೆ ಎಂದು ಅವರು ಆರೋಪಿಸಿದರು.

ರಾಜ್ಯ ಸರ್ಕಾರದ ಗ್ಯಾರಂಟಿ ಸವಲತ್ತು ಪಡೆಯಲು ಎಸ್‌ಐಆರ್ ಭರ್ತಿ ಮಾಡಬೇಕು ಎಂದು ನಂಬಿಕೆ ಮೂಡಿಸಿರುವ ಕಾರಣ ಹಲವರು ಅಕ್ರಮಗಳಲ್ಲಿ ಹೆಚ್ಚಾಗಿ ತೊಡಗಿದ್ದಾರೆ. ಮತದಾರರ ವಾಸಸ್ಥಳ ದೃಢೀಕರಣಕ್ಕಾಗಿ ಮನೆಗಳಿಗೆ ಅಧಿಕಾರಿಗಳು ಭೇಟಿ ನೀಡಬೇಕು. ಇದರಿಂದಾಗಿ ಅವರು ನಿಜವಾದ ಮತದಾರರೇ ಎಂಬುದು ದೃಢಪಡುತ್ತದೆ. ಆದರೆ ಈ ಕ್ಷೇತ್ರದಲ್ಲಿ ಯಾರು ಯಾರೋ ಅರ್ಜಿ ಪಡೆದು ಭರ್ತಿ ಮಾಡುವ ಮೂಲಕ ವಂಚನೆಯಲ್ಲಿ ತೊಡಗಿದ್ದಾರೆ. ಹೀಗಾಗಿ ಜಿಲ್ಲಾಧಿಕಾರಿ ಈ ಬಗ್ಗೆ ಗಮನ ಹರಿಸಿ ಅಕ್ರಮಗಳಿಗೆ ತಡೆ ಹಾಕಬೇಕೆಂದು ಆಗ್ರಹಿಸಿದರು.

ನಂತರ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ನರಸಿಂಹರಾಜ ಕ್ಷೇತ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆ ಅಕ್ರಮವಾಗಿ ನಡೆಯುತ್ತಿರುವ ಬಗ್ಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಹೆಚ್.ಜಿ.ಗಿರಿಧರ್, ಕಾರ್ತಿಕ್ ಮರಿಯಪ್ಪ, ರಮೇಶ್ ಉಪಸ್ಥಿತರಿದ್ದರು.

ರೈತ ಸಮುದಾಯದಲ್ಲಿ ಆತಂಕ ಮೂಡಿಸಿರುವ ಹುಲಿ ಸೆರೆಗೆ ಕಾರ್ಯಾಚರಣೆ

ಮೈಸೂರು, ಜು.3(ಎಂಟಿವೈ)– ಸರಗೂರು ತಾಲೂಕಿನ ಮುಳ್ಳೂರು, ಬೆಣ್ಣೆಗೆರೆ ಬಳಿ ರೈತ ಹಾಗೂ ಅರಣ್ಯ ಸಿಬ್ಬಂದಿ ಮೇಲೆ ದಾಳಿ ನಡೆಸಿ ಗಾಯಗೊಳಿಸಿದ್ದ ಹುಲಿ ಸೆರೆಗೆ ಅರಣ್ಯ ಇಲಾಖೆ ಕೂಂಬಿಂಗ್ ನಡೆಸುತ್ತಿದೆ.



ಹುಲಿ ದಾಳಿ ಪುನರಾವರ್ತನೆಯಾಗದಂತೆ ಬಂಡೀಪುರ ಹುಲಿ ಸಂರಕ್ಷಿತ ವಲಯದ ಅಧಿಕಾರಿಗಳ ತಂಡ ಉಪಟಳ ನೀಡುತ್ತಿರುವ ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದರೂ, ಹುಲಿ ಸುಳಿವಿಲ್ಲ. ದಸರಾ ಗಜಪಡೆ ನಾಯಕ ಕ್ಯಾಪ್ಟನ್ ಅಭಿಮನ್ಯು, ಮಹೇಂದ್ರ, ಹಿರಣ್ಯ ಸೇರಿದಂತೆ ನಾಲ್ಕು ಆನೆಗಳನ್ನು ಕೂಂಬಿಂಗ್‌ಗೆ ಬಳಸಲಾಗುತ್ತಿದೆ. ಅಲ್ಲದೆ, ಡ್ರೋನ್ ತಂಡವು ಹುಲಿ ಜಾಡು ಪತ್ತೆಗೆ ಪ್ರಯತ್ನಿಸುತ್ತಿದ್ದರೂ ಹುಲಿ ಮಾತ್ರ ಅರಣ್ಯ ಸಿಬ್ಬಂದಿಗೆ ತಲೆನೋವಾಗಿ ಪರಿಣಮಿಸುತ್ತಿದೆ.

ಪೊದೆಯಲ್ಲಿ ಅಡಗಿ ಕುಳಿತ ಹುಲಿ: ಕೂಂಬಿಂಗ್ ಕಾರ್ಯಾಚರಣೆ ವೇಳೆ ಒಂದೆರಡು ಬಾರಿ ಡ್ರೋನ್‌ಗೆ ಹುಲಿ ಸಂಚರಿಸುತ್ತಿರುವ ದೃಶ್ಯ ಸೆರೆ ಸಿಕ್ಕಿದೆ. ಅದು ಹಳ್ಳದ ಪೊದೆ ಬಳಿಯೇ ಬೀಡು ಬಿಟ್ಟಿದೆ. ಆದರೆ, ಆ ಜಾಗದಲ್ಲಿ ತೇವಾಂಶ ಹೆಚ್ಚಾಗಿರುವುದರಿಂದ(ವಸ್ತಿ) ಆನೆಗಳ ಪಾದ ಕೆಸರಿನಲ್ಲಿ ಹೂತುಕೊಳ್ಳುತ್ತಿರುವುದರಿಂದ ಹುಲಿ ಇರುವ ಸ್ಥಳದತ್ತ ಹೋಗಲು ಆನೆಗಳು ಹಿಂದೇಟು ಹಾಕುತ್ತಿವೆ. ಇದರಿಂದ ತೇವಾಂಶ ಹೆಚ್ಚಾಗಿರುವ ಹಳ್ಳದಲ್ಲಿಯೇ ಹುಲಿ ನೆಲೆ ಕಂಡುಕೊಂಡಿರುವುದರಿಂದ ಕಾರ್ಯಾಚರಣೆಗೆ ಹಿನ್ನೆಡೆಯಾಗುತ್ತಿದೆ.


8 ವರ್ಷದ ಹೆಣ್ಣು ಹುಲಿಯಾಗಿದ್ದು, ಅದರ ಮರಿಗಳಿರುವ ಶಂಕೆ ವ್ಯಕ್ತವಾಗಿದೆ. ಅವುಗಳ ರಕ್ಷಣೆಗೆಂದು ಕಾಡಿನಿಂದ ಹೊರಗೆ ಬಂದು ಹಳ್ಳದಲ್ಲಿ ಸುರಕ್ಷಿತ ನೆಲೆ ಕಂಡುಕೊಂಡಿರುವ ಸಾಧ್ಯತೆ ಹೆಚ್ಚಾಗಿರುವುದರಿಂದ ಇದೀಗ ಅರಣ್ಯ ಇಲಾಖೆಗೆ ಸವಾಲಾಗಿ ಪರಿಣಮಿಸಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.3– ಮೈಸೂರಿನ ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿರುವ ಯಶಸ್ವಿನಿ ಮಹಿಳಾ ಸಂಘದ ವತಿಯಿಂದ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ, ಪದವಿ, ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ ಬಬ್ಬೂರ ಕಮ್ಮೆ ಜನಾಂಗದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಶೈಕ್ಷಣಿಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಜು.15 ಕೊನೆಯ ದಿನ. ಹೆಚ್ಚಿನ ವಿವರಗಳಿಗೆ ಮೊ: 9886636806, 9945623658, 9481830473 ಮೂಲಕ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ 4229 ಕತ್ತಲೆ ಪ್ರದೇಶಗಳು; ಇಲ್ಲಿಯೂ ದೀಪದ ವ್ಯವಸ್ಥೆ ಮಾಡಲು ನಿರ್ಧಾರ

ಮೈಸೂರು, ಜು.3(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ವಿದ್ಯುತ್ ದೀಪಗಳಿಲ್ಲದ 4229ಕ್ಕೂ ಹೆಚ್ಚು ಕತ್ತಲೆ ಪ್ರದೇಶಗಳನ್ನು ಗುರ್ತಿಸಲಾಗಿದೆ.



ನಗರಪಾಲಿಕೆ ವಿದ್ಯುತ್ ವಿಭಾಗದ ವತಿಯಿಂದ ವಿದ್ಯುತ್ ದೀಪಗಳಿಲ್ಲದ ಪ್ರದೇಶಗಳನ್ನು ಗುರ್ತಿಸಲಾಗಿದ್ದು, ಕತ್ತಲು ಆವರಿಸಿರುವ ಸ್ಥಳಗಳಲ್ಲಿ ಹೊಸದಾಗಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಯೋಜನೆ ರೂಪಿಸಲಾಗುತ್ತಿದೆ.

ವಿದ್ಯುತ್ ಉಳಿತಾಯದ ಜೊತೆಗೆ ಎಲ್ಲೆಡೆ ಬೆಳಕು ಹರಿಸುವ ಉದ್ದೇಶದಿಂದ ಈಗಾಗಲೇ ನಗರದಾದ್ಯಂತ ಹಳೆ ಬಲ್ಬ್‌ಗಳನ್ನು ತೆರವುಗೊಳಿಸಿ 73 ಸಾವಿರ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲಾಗಿದ್ದು, ಹೆಚ್ಚುವರಿಯಾಗಿ ಇನ್ನೂ ಐದು ಸಾವಿರ ಸ್ಥಳಗಳಲ್ಲಿ ಬೆಳಕಿನ ವ್ಯವಸ್ಥೆ ಮಾಡಲು ಪಾಲಿಕೆ ನಿರ್ಧರಿಸಿದೆ.

ಎರಡು ವಿದ್ಯುತ್ ಕಂಬಗಳ ನಡುವೆ ಉಂಟಾಗುವ ಕತ್ತಲಿ(ಅಂತರ ಹೆಚ್ಚಾಗಿರುವಲ್ಲಿ)ನ ಸ್ಥಳದಲ್ಲಿ ಹೊಸದಾಗಿ ವಿದ್ಯುತ್ ಕಂಬ ನೆಟ್ಟು ಎಲ್‌ಇಡಿ ಬಲ್ಬ್ ಅಳವಡಿಸುವುದು. ಪಾರ್ಕ್‌ಗಳಲ್ಲಿ ಹಾಗೂ ಪ್ರಮುಖ ವೃತ್ತ ಮತ್ತು ಬಡಾವಣೆಗಳಲ್ಲಿನ ಕತ್ತಲ ಪ್ರದೇಶಗಳಲ್ಲಿ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸುವ ಮೂಲಕ ಕತ್ತಲು ಮುಕ್ತ ಮೈಸೂರನ್ನಾಗಿಸಲು ಯೋಜನೆ ರೂಪಿಸಲಾಗುತ್ತಿದೆ.

ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಮೈಸೂರು ನಗರದೆಲ್ಲೆಡೆ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲಾಗಿದೆ. ಅದರ ನಡುವೆಯೂ ಕತ್ತಲಲ್ಲಿರುವ ಸ್ಥಳಗಳನ್ನು ಗುರ್ತಿಸಿ ಅಲ್ಲಿಯೂ ಹೊಸದಾಗಿ ಬಲ್ಬ್‌ಗಳನ್ನು ಅಳವಡಿಸಲಾಗುವುದು ಎಂದು ನಗರಪಾಲಿಕೆ ವಿದ್ಯುತ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ದೀಪಕ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.


ನಗರಪಾಲಿಕೆಯ ಎಲ್ಲಾ 9 ವಲಯ ಕಚೇರಿ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸಿ, 4229ಕ್ಕೂ ಹೆಚ್ಚು ಕತ್ತಲೆ ಪ್ರದೇಶ(ಡಾರ್ಕ್ ಸ್ಪಾಟ್)ಗಳನ್ನು ಗುರ್ತಿಸಿದ್ದು, ಅಲ್ಲೆಲ್ಲವೂ ಹೊಸದಾಗಿ ಎಲ್‌ಇಡಿ ಬಲ್ಬ್‌ಗಳ ಅಳವಡಿಸಲಾಗುವುದು. ಎಲ್‌ಇಡಿ ಬಲ್ಬ್‌ಗಳ ಅಳವಡಿಕೆಗೆ ಯಾವುದೇ ವೆಚ್ಚವಾಗುವುದಿಲ್ಲ. ಆದರೆ 1583ಕ್ಕೂ ಹೆಚ್ಚು ವಿದ್ಯುತ್ ಕಂಬಗಳನ್ನು ಹೊಸದಾಗಿ ಖರೀದಿಸಬೇಕಾಗಿರುವುದರಿಂದ ಅಂದಾಜು ಖರ್ಚು–ವೆಚ್ಚದ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗುತ್ತಿದೆ ಎಂದು ತಿಳಿಸಿದರು.

ವಿದ್ಯುತ್ ಉಳಿತಾಯಕ್ಕೆ ಆದ್ಯತೆ: ಮೈಸೂರು ನಗರ ಬೀದಿ ದೀಪಗಳ ಹಾಗೂ ನಗರಪಾಲಿಕೆ ಎಲ್ಲಾ ವಲಯ ಕಚೇರಿಗಳಲ್ಲಿ ಎಲ್‌ಇಡಿ ಬಲ್ಬ್‌ಗಳ ಬಳಕೆ ಮಾಡುವ ಮೂಲಕ ವಿದ್ಯುತ್ ಉಳಿತಾಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಎಲ್‌ಇಡಿ ಅಳವಡಿಕೆಗೂ ಮುನ್ನ ಬಳಕೆಯಾಗುತ್ತಿದ್ದ ವಿದ್ಯುತ್ ಪ್ರಮಾಣದಲ್ಲಿ ಈಗ ಶೇ.30 ರಷ್ಟು ವಿದ್ಯುತ್ ಬಳಕೆ ಕಡಿಮೆಯಾಗಿದೆ ಎಂದು ಮಾಹಿತಿ ನೀಡಿದರು.

ಕೇರಳದಲ್ಲಿ ನಾಪತ್ತೆಯಾಗಿದ್ದ ಎಎಸ್‌ಐ ಮೈಸೂರು ಲಾಡ್ಜ್‌ನಲ್ಲಿ ಪತ್ತೆ!

ಸುರಕ್ಷಿತವಾಗಿ ಕರೆದೊಯ್ದ ಅಲ್ಲಿನ ಪೊಲೀಸರು

ಮೈಸೂರು, ಜು.3(ಜಿಎ)–ಕರ್ತವ್ಯಕ್ಕೆ ತೆರಳುವುದಾಗಿ ಮನೆಯಿಂದ ಹೊರಟು ನಾಪತ್ತೆಯಾಗಿದ್ದ ಕೇರಳ ಪೊಲೀಸ್ ಇಲಾಖೆಯ ಸಹಾಯಕ ಉಪನಿರೀಕ್ಷಕ (ಎಎಸ್‌ಐ) ಮೈಸೂರಿನ ಲಾಡ್ಜ್‌ನಲ್ಲಿ ಪತ್ತೆಯಾಗಿದ್ದು, ಕೇರಳ ಪೊಲೀಸರು ಅವರನ್ನು ವಾಪಸ್ ತಮ್ಮ ರಾಜ್ಯಕ್ಕೆ ಕರೆದೊಯ್ದಿದ್ದಾರೆ.



ಅಬ್ದುಲ್ ರಶೀದ್

ಪತ್ತೆಯಾದ ಅಧಿಕಾರಿಯನ್ನು ಅಬ್ದುಲ್ ರಶೀದ್ ಎಂದು ಗುರುತಿಸಲಾಗಿದ್ದು, ಅವರು ಕೇರಳದ ಮುಕ್ಕಂ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಬಾಲುಸ್ಸೇರಿ ನಿವಾಸಿಯಾಗಿದ್ದಾರೆ.


ಪೊಲೀಸರ ಮಾಹಿತಿ ಪ್ರಕಾರ, ಬುಧವಾರ ಬೆಳಗ್ಗೆ ಸುಮಾರು 6.30ಕ್ಕೆ ರಶೀದ್ ಅವರು ತಮ್ಮ ಮಗಳೊಂದಿಗೆ ಬೈಕ್‌ನಲ್ಲಿ ಮನೆಯಿಂದ ಹೊರಟಿದ್ದರು. ಬಾಲುಸ್ಸೇರಿ ಬಸ್ ನಿಲ್ದಾಣದಲ್ಲಿ ಮಗಳನ್ನು ಇಳಿಸಿದ ಬಳಿಕ ಅವರು ಕರ್ತವ್ಯಕ್ಕೆ ಹಾಜರಾಗದೇ, ಮನೆಗೂ ವಾಪಸ್ ತೆರಳಿರಲಿಲ್ಲ. ಇದರಿಂದ ಆತಂಕಗೊಂಡ ಕುಟುಂಬದವರು ಪೊಲೀಸರಿಗೆ ದೂರು ನೀಡಿದ್ದರು.

ದೂರಿನ ಆಧಾರದ ಮೇಲೆ ಬಾಲುಸ್ಸೇರಿ ಪೊಲೀಸರು ನಾಪತ್ತೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದರು. ತನಿಖೆ ವೇಳೆ ರಶೀದ್ ಅವರ ಮೊಬೈಲ್ ಫೋನ್ ಸ್ಥಳವನ್ನು ಪತ್ತೆಹಚ್ಚಿದಾಗ, ಅವರ ಫೋನ್ ಮೈಸೂರಿನಲ್ಲಿ ಸಕ್ರಿಯವಾಗಿರುವುದರ ಬಗ್ಗೆ ಮಾಹಿತಿ ದೊರೆಯಿತು.

ಫೋನ್ ಲೋಕೇಶನ್ ಆಧಾರದ ಮೇಲೆ ಬಾಲುಸ್ಸೇರಿಯಿಂದ ಆಗಮಿಸಿದ ಪೊಲೀಸ್ ತಂಡ ಗುರುವಾರ ಬೆಳಿಗ್ಗೆ ಸುಮಾರು 11.30ರ ವೇಳೆಗೆ ಮೈಸೂರಿನ ಸಂಗಂ ಥಿಯೇಟರ್ ರಸ್ತೆಯಲ್ಲಿರುವ ಲಾಡ್ಜ್‌ವೊಂದಕ್ಕೆ ತೆರಳಿ ಪರಿಶೀಲನೆ ನಡೆಸಿತು. ಲಾಡ್ಜ್ ಸಿಬ್ಬಂದಿಯನ್ನು ವಿಚಾರಿಸಿದಾಗ, ಜು.1ರಂದು ಮಧ್ಯಾಹ್ನ 3 ಗಂಟೆಗೆ ರಶೀದ್ ಅವರು ಕೊಠಡಿ ಪಡೆದು ಅಲ್ಲಿಯೇ ತಂಗಿರುವುದಾಗಿ ತಿಳಿಸಿದರು.

ಬಳಿಕ ಪೊಲೀಸರು ಲಾಡ್ಜ್‌ನ ಕೊಠಡಿಯಲ್ಲಿ ರಶೀದ್ ಅವರನ್ನು ಪತ್ತೆಹಚ್ಚಿ, ಸುರಕ್ಷಿತವಾಗಿ ಕೇರಳಕ್ಕೆ ಕರೆದೊಯ್ದರು. ಕುಟುಂಬದವರು ಹಾಗೂ ಸಹೋದ್ಯೋಗಿಗಳಿಗೆ ಯಾವುದೇ ಮಾಹಿತಿ ನೀಡದೆ ರಶೀದ್ ಅವರು ಮೈಸೂರಿಗೆ ಏಕೆ ಬಂದಿದ್ದರು ಎಂಬುದರ ಕುರಿತು ಇನ್ನೂ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಈ ಸಂಬಂಧ ಕೇರಳ ಪೊಲೀಸರು ಹೆಚ್ಚಿನ ತನಿಖೆ ಮುಂದುವರಿಸಿದ್ದಾರೆ.

ಕೋಟೆಹುಂಡಿ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮತದಾನ ಮಾಹಿತಿ



ಮೈಸೂರು ತಾಲೂಕಿನ ಕೋಟೆಹುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಾರ್ವತ್ರಿಕ ಚುನಾವಣೆ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು, ಜು.3(ಎಂಟಿವೈ)– ಹೈಟೆಕ್ ಶಾಲೆಯಾಗಿ ಪರಿವರ್ತನೆಯಾಗುತ್ತಿರುವ ಕೋಟೆಹುಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಸಾರ್ವತ್ರಿಕ ಚುನಾವಣೆ ಹಾಗೂ ಪ್ರಜಾಪ್ರಭುತ್ವದ ಅರಿವು ಮೂಡಿಸಲು ನಿಯಮಾನುಸಾರ ಪೊಲೀಸ್ ಹಾಗೂ ಅಧಿಕಾರಿಗಳ ಉಪಸ್ಥಿತಿಯಲ್ಲಿ ಚುನಾವಣೆ ನಡೆಸಿ ವಿದ್ಯಾರ್ಥಿಗಳಿಗೆ ಮತದಾನದ ಬಗ್ಗೆ ಮಾಹಿತಿ ನೀಡಲಾಯಿತು.

ಮೈಸೂರು ತಾಲೂಕಿನ ಕೋಟೆಹುಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ರಮ್ಯ ಜಗತ್ ಎಂಬುವರು ದತ್ತು ಪಡೆದು, ಶಾಲೆಯನ್ನು ಹೈಟೆಕ್ ಸರ್ಕಾರಿ ಶಾಲೆಯನ್ನಾಗಿ ಪರಿವರ್ತಿಸಿ ಅಭಿವೃದ್ಧಿಪಡಿಸುತ್ತಿದ್ದಾರೆ. ಶಾಲಾ ಅಭಿವೃದ್ಧಿ ಹಿನ್ನೆಲೆಯಲ್ಲಿ ಶಾಲೆಯಲ್ಲಿ ಶಾಲಾ ಮಂತ್ರಿ ಮಂಡಲ ರಚನೆ ಚುನಾವಣೆಯನ್ನು ನಡೆಸಲಾಯಿತು.

2026–27ನೇ ಸಾಲಿನ ಶಾಲಾ ಮಂತ್ರಿ ಮಂಡಲಕ್ಕೆ ಮಕ್ಕಳಿಗೆ ಚುನಾವಣೆಯ ಮಹತ್ವದ ಅರಿವು ಮೂಡಿಸಲು ಸಾರ್ವತ್ರಿಕ ಚುನಾವಣೆಯಂತೆ ಶಾಲಾ ಚುನಾವಣೆ ನಡೆಸಲಾಯಿತು. ವಿದ್ಯಾರ್ಥಿಗಳು ಅಭ್ಯರ್ಥಿಗಳಾಗಿ ಉಮೇದುವಾರಿಕೆ ಸಲ್ಲಿಕೆ, ಪ್ರಚಾರ ನಡೆಸುವ ಬಗೆ, ಮತಯಾಚನೆ, ಮತದಾನ, ಮತಪೆಟ್ಟಿಗೆ, ಬ್ಯಾಲೆಟ್ ಪೇಪರ್, ಮತಯಂತ್ರದ ಬಗ್ಗೆ ಅರಿವು ಮೂಡಿಸಲಾಯಿತು. ಅಲ್ಲದೆ, ಮತಗಟ್ಟೆಗೆ ಪೊಲೀಸ್ ಬಂದೋಬಸ್ತ್ ಹೇಗಿರುತ್ತದೆ ಎಂದು ತೋರಿಸುವ ನಿಟ್ಟಿನಲ್ಲಿ ಜಯಪುರ ಠಾಣೆಯ ಪೊಲೀಸ್ ಸಿಬ್ಬಂದಿ ಹಾಜರಿದ್ದರು.

ಇದೇ ವೇಳೆ ಜಯಪುರ ಠಾಣೆಯ ಪೊಲೀಸ್ ಸಿಬ್ಬಂದಿಗಳಾದ ಬಚ್ಚೇಗೌಡ ಹಾಗೂ ರಶ್ಮಿ ಚುನಾವಣೆಗೆ ಭದ್ರತೆ ಕಾರ್ಯವೈಖರಿ, ಪೊಲೀಸರ ಕರ್ತವ್ಯ ವಿವರಿಸಿ, ಕೆಟ್ಟ ಅಭ್ಯಾಸಗಳಿಂದ ದೂರವಿದ್ದು ಒಳ್ಳೆಯ ಪ್ರಜೆಗಳಾಗುವಂತೆ ಮಾರ್ಗದರ್ಶನ ನೀಡಿ ಅರಿವು ಮೂಡಿಸಿದರು.

ಈ ಸಂದರ್ಭದಲ್ಲಿ ಶಾಲೆ ಮುಖ್ಯ ಶಿಕ್ಷಕರಾದ ರೇಖಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರೆ, ಶಿಕ್ಷಣ ಇಲಾಖೆಯ ಸಿಆರ್‌ಪಿ ಜ್ಯೋತಿ, ಶಾಲೆಯ ಸಹ ಶಿಕ್ಷಕರುಗಳಾದ ಗೀತಾ, ಅಂಬುಜ, ಮಂಜುನಾಥ್, ರಾಘವೇಂದ್ರ, ಗೋವಿಂದರಾಜು ಅವರು ಹಾಜರಿದ್ದರು.

ರಾಜ್ಯದಲ್ಲಿ ಬರಗಾಲ ಘೋಷಿಸಿ, ಬಿಡದಿ ಭೂಸ್ವಾಧೀನ ಕೈಬಿಡಿ

ಮೈಸೂರಲ್ಲಿ ರೈತ ಸಂಘಟನೆ, ಒಕ್ಕೂಟದಿಂದ ಪ್ರತಿಭಟನೆ

ಮೈಸೂರು, ಜು.3(ಜಿಎ)–ರಾಜ್ಯದಲ್ಲಿ ಬರಗಾಲ ಘೋಷಿಸಬೇಕು ಹಾಗೂ ಬಿಡದಿ ಭೂ ಸ್ವಾಧೀನ ಪ್ರಕ್ರಿಯೆ ಬಿಡಬೇಕು ಎಂದು ಆಗ್ರಹಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಮೈಸೂರಿನ ಗಾಂಧಿ ವೃತ್ತದಲ್ಲಿ ನಡೆಸಲಾಯಿತು.

ಈ ವೇಳೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಬಿಡದಿಯ 7,500 ಎಕರೆಗೂ ಹೆಚ್ಚು ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳಲು ಹಠ ಹಿಡಿದಿದೆ. ಇದು ಸರಿಯಾದ ಕ್ರಮ ಅಲ್ಲ. ರೈತರ ಭೂಮಿಯನ್ನು ಕಿತ್ತುಕೊಂಡು ದೊಡ್ಡ ಕಂಪನಿಗಳಿಗೆ ಸ್ಮಾರ್ಟ್ ಸಿಟಿ ಮಾಡಲು ನೀಡಿ, ರೈತರನ್ನು ಬೀದಿ ಪಾಲು ಮಾಡುವ ಕೆಲಸ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ತಮ್ಮ ಹಠವನ್ನು ಬಿಟ್ಟು ಈ ಪ್ರಕ್ರಿಯೆಯನ್ನು ನಿಲ್ಲಿಸಬೇಕು. ರಾಜ್ಯ ಸರ್ಕಾರ ಇದಕ್ಕೆ ಎಚ್ಚೆತ್ತುಕೊಳ್ಳದಿದ್ದರೆ, ರಾಜ್ಯಾದ್ಯಂತ ಚಳುವಳಿ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ರಾಜಕೀಯ ವಿಚಾರಕ್ಕೆ ಪ್ರತಿಕ್ರಿಯಿಸಿ, ಕಾಂಗ್ರೆಸ್, ಜನತಾದಳ, ಬಿಜೆಪಿ ಯಾವುದೇ ಇರಲಿ ಅವರ ರಾಜಕಾರಣಕ್ಕೆ ರೈತರು ಬಲಿಯಾಗಬೇಡಿ. ನೀವು ರಾಜಕಾರಣಿಗಳ ಗುಲಾಮರಾಗಬೇಡಿ. ರಾಜಕಾರಣಿಗಳನ್ನು ಗುಲಾಮರಾಗಿ ಮಾಡಿಕೊಳ್ಳಿ. ಸ್ವಾಭಿಮಾನದಿಂದ ಇರಿ ಎಂದು ಅವರು ರೈತರಿಗೆ ಕರೆಕೊಟ್ಟರು.

ಬರಗಾಲ ಸಂಬಂಧ ಮಾತನಾಡಿದ ಅವರು, ಇಡೀ ರಾಜ್ಯದಲ್ಲಿ ಮಳೆ ಇಲ್ಲದೇ ಬರಗಾಲ ಬಂದಿದೆ. ಜನ ಜಾನುವಾರುಗಳಿಗೆ ಕುಡಿಯಲು ನೀರಿಲ್ಲ, ಕೆರೆ ಕಟ್ಟೆಗಳು ಒಣಗಿ ಹೋಗಿದೆ. ರೈತರು ಸಾಯುತ್ತಿದ್ದಾರೆ. ಆದರೆ, ರೈತರ ಕಷ್ಟವನ್ನು ಆಲಿಸಲು ರಾಜ್ಯದಲ್ಲಿ ಕೃಷಿ ಮಂತ್ರಿ ಇಲ್ಲ, ತೋಟಗಾರಿಕೆ ಮಂತ್ರಿ ಇಲ್ಲ. ರಾಜ್ಯದಲ್ಲಿ ಶೇ.80 ರೈತರು ಇದ್ದಾರೆ. ಈ ರೈತರ ಸಮಸ್ಯೆಯನ್ನ ಕೇಳಲು ಒಬ್ಬ ಮಂತ್ರಿ ಇಲ್ಲದಿರುವುದು ನಾಚಿಕೇಗೇಡಿನ ಸಂಗತಿ. ತಕ್ಷಣವೇ ಕೃಷಿ ಮತ್ತು ತೋಟಗಾರಿಕೆಯನ್ನು ನಿರ್ವಹಣೆ ಮಾಡಲು ಸಚಿವರನ್ನು ನೇಮಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರ ಬರಪೀಡಿತ ಪ್ರದೇಶಗಳ ಅಧ್ಯಯನ ಮಾಡಿ ವೈಜ್ಞಾನಿಕ ಸಮೀಕ್ಷೆಯ ಮೂಲಕ ನಷ್ಟ ಪರಿಹಾರವನ್ನು ತುಂಬುವಂತಹ ಕೆಲಸವನ್ನು ಮಾಡಬೇಕು. ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ, ಕೆರೆಕಟ್ಟೆಗಳು ಬತ್ತಿ ಹೋಗಿರುವುದರಿಂದ ಜಾನುವಾರುಗಳಿಗೆ ಮೇವಿನ ವ್ಯವಸ್ಥೆಯನ್ನು ಮಾಡುವಂತೆ ಕ್ರಮಗಳನ್ನು ಕೈಗೊಳ್ಳಬೇಕು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲೆಯ ಎಲ್ಲಾ ಭಾಗದಲ್ಲಿ ಪ್ರವಾಸ ಮಾಡಿ ಸಮೀಕ್ಷೆ ಮಾಡಿ ಸೂಕ್ತ ಕ್ರಮಗಳನ್ನ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬರಗಾಲದ ಮುನ್ಸೂಚನೆ ಹಿನ್ನೆಲೆಯಲ್ಲಿ ಬೆಳೆಗಳಿಗೆ ಈಗ ಜಲಾಶಯದಿಂದ ನೀರು ಬಿಡಲು ಸಾಧ್ಯವಿಲ್ಲ ಎಂಬ ಮುಖ್ಯಮಂತ್ರಿಗಳು ಹೇಳಿಕೆಯನ್ನು ನಾನು ಒಪ್ಪು ತ್ತೇನೆ. ರಾಜ್ಯದಲ್ಲಿ ಈ ಬಾರಿ ಶೇ.50ರಷ್ಟು ಮಳೆಯೇ ಆಗಿಲ್ಲ. ಇಲ್ಲಿ ತನಕ ಆಗಬೇಕಾದಂತಹ ಮಳೆ ಪ್ರಮಾಣ ಕಡಿಮೆಯಾಗಿದೆ. ಜಲಾಶಯಗಳಲ್ಲಿ ನೀರು ಖಾಲಿಯಾಗಿ ಕುಡಿಯುವ ನೀರಿಗೆ ಹಾಹಾಕಾರ ಇದೆ. ಇಂತಹ ಸಂದರ್ಭದಲ್ಲಿ ನಾವು ಬೆಳೆಗಳನ್ನು ಬೆಳೆಯುತ್ತೇವೆ ಎಂದು ಹೇಳುವುದು ಒಳ್ಳೆಯ ಬೆಳವಣಿಗೆ ಅಲ್ಲ. ಆದರೆ ಆ ರೈತರ ಸಂಕಷ್ಟವನ್ನ ನಿವಾರಣೆ ಮಾಡಲು ಬರಗಾಲ ಪೀಡಿತ ಪ್ರದೇಶದ ರೈತರ ಸಾಲಮನ್ನಾ ಮಾಡಿ. ಸಾಲ ವಸೂಲಾತಿಯನ್ನು ನಿಲ್ಲಿಸಿ. ಈ ರೀತಿಯ ಗಂಭೀರವಾದಂತಹ ಸಮಸ್ಯೆಗಳಿಗೆ ಪರಿಹಾರವನ್ನು ಕೊಡುವಂತಹ ಕೆಲಸವನ್ನ ಮುಖ್ಯಮಂತ್ರಿಗಳು ಮಾಡಬೇಕು. ತುರ್ತಾಗಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಮೂಕ್ಕಳ್ಳಿ ಮಹದೇವಸ್ವಾಮಿ, ಮಾರ್ಬಳ್ಳಿ ನೀಲಕಂಠಪ್ಪ, ವರಕೂಡು ನಾಗೇಶ್, ಪಟೇಲ್ ಶಿವಮೂರ್ತಿ, ಸತೀಶ್, ಗುರುಸ್ವಾಮಿ, ಕುರುಬೂರು ಸಿದ್ದೇಶ್, ವಿಜಯೇಂದ್ರ, ಉಡಿಗಾಲ ರೇವಣ್ಣ, ಸುಂದರಪ್ಪ, ಕೆಂಡಗಣಪ್ಪ, ಕುರುಬೂರು ಪ್ರದೀಪ್, ಗೌರಿಶಂಕರ್, ಬಿ.ಪಿ.ಪರಶಿವಮೂರ್ತಿ, ಕೋಟೆ ಸುನೀಲ್, ಮಿಲಿಟರಿ ಕುಮಾರ್, ದೊಡ್ಡಕಾಟೂರು ಮಹದೇವಸ್ವಾಮಿ, ಕಾಟೂರು ನಾಗೇಶ್, ಸಾತಗಳ್ಳಿ ಬಸವರಾಜ, ಅಂಬಳೆ ಮಂಜುನಾಥ್, ವಾಜಮಂಗಲ ಮಹಾದೇವ, ಶಿವಣ್ಣ ಹೆಗ್ಗೊಠಾರ ಶಿವಸ್ವಾಮಿ, ಉಮೇಶ್, ನಾಗೇಂದ್ರ, ನಂಜುಂಡ, ಕೆಂಡಗಣಸ್ವಾಮಿ, ಮಂಜೇಶ್, ಶಿವಪ್ರಸಾದ್ ಮತ್ತಿತರರು ಪಾಲ್ಗೊಂಡಿದ್ದರು.



ರಾಜ್ಯದಲ್ಲಿ ಬರಗಾಲ ಘೋಷಿಸಬೇಕು, ಬಿಡದಿ ಭೂ ಸ್ವಾಧೀನ ಪ್ರಕ್ರಿಯೆ ಬಿಡಬೇಕು ಎಂದು ಆಗ್ರಹಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಮೈಸೂರಿನ ಗಾಂಧಿ ವೃತ್ತದಲ್ಲಿ ನಡೆಸಲಾಯಿತು.

ಸಾಂಪ್ರದಾಯಿಕ ದಸರಾ ಮಾಡಿ

> ಬರಗಾಲದ ನಡುವೆ ದಸರಾದಲ್ಲಿ ಕಂಬಳ ಬೇಡ. ದಸರಾಗೆ ತನ್ನದೇ ಆದಂತಹ ವಿಶೇಷತೆ ಇದೆ ಇಡೀ ರಾಷ್ಟ್ರದಲ್ಲಿ ಒಂದು ಗೌರವವಿದೆ. ಆದರೆ ನೀವು ಹೊಸ ಹೊಸದಾಗಿ ಸೃಷ್ಟಿಯನ್ನು ಮಾಡಿ ಅದನ್ನು ಹಾಳು ಮಾಡುವಂತಹ ಕೆಲಸ ಮಾಡಬೇಡಿ. ಕಂಬಳ ನಿಲ್ಲಿಸಿ ಸರಳವಾದಂತಹ ಸಾಂಪ್ರದಾಯಿಕ ದಸರಾವನ್ನು ಆಚರಣೆ ಮಾಡಿ.
>
> –ಕುರುಬೂರು ಶಾಂತಕುಮಾರ್, ರಾಜ್ಯಾಧ್ಯಕ್ಷ, ರಾಜ್ಯ ಕಬ್ಬು ಬೆಳೆಗಾರರ ಸಂಘ

ರಾಜ್ಯದಲ್ಲಿಯೇ ಮಡಿಕೇರಿ ನಗರಸಭೆ ಅಧ್ವಾನ

ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ತೀವ್ರ ಅಸಮಾಧಾನ

ಮಡಿಕೇರಿ, ಜು.3–ಇಡೀ ರಾಜ್ಯದಲ್ಲಿಯೇ ಮಡಿಕೇರಿ ನಗರ ಸಭೆ ಅಧ್ವಾನದಿಂದ ಕೂಡಿದೆ. ತ್ಯಾಜ್ಯ ವಿಲೇವಾರಿಯಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಅಸಮರ್ಪಕತೆ ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಕುಂದುಕೊರತೆ ಕಂಡು ಬಂದಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಮೋಟೋ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುವುದಾಗಿ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ನಗರಸಭೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ಸಂತೆ ಮಾರುಕಟ್ಟೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಕಸ ವಿಲೇವಾರಿ ಮಾಡುವ ಪ್ರದೇಶಗಳಿಗೆ ತೆರಳಿ ಪರಿಶೀಲನೆ ನಡೆಸಿದರು. ತ್ಯಾಜ್ಯ ವಿಲೇವಾರಿ ಸ್ಥಳಕ್ಕೆ ತೆರಳಿದ ಉಪಲೋಕಾಯುಕ್ತರು ಅಲ್ಲಿನ ಕಸದ ಗುಡ್ಡೆಯನ್ನು ಕಂಡು ಆಶ್ಚರ್ಯಚಕಿತರಾದರು. ಬೆಟ್ಟದ ಮೇಲೆ ಇಡೀ ನಗರದ ಕಸವನ್ನು ಅವೈಜ್ಞಾನಿಕವಾಗಿ ಸುರಿಯಲಾಗಿದೆ. ಒಣ ಕಸ, ಹಸಿ ಕಸವನ್ನು ವಿಂಗಡಿಸಲು ಯಾವುದೇ ಕ್ರಮ ಕೈಗೊಂಡಿಲ್ಲ. ಕಸದ ತ್ಯಾಜ್ಯ ನೀರು ಕೆಳಭಾಗಕ್ಕೆ ಹರಿದರೆ ಅಲ್ಲಿರುವ ವಸತಿ ನಿವಾಸಿಗಳಿಗೆ, ಭವಿಷ್ಯದಲ್ಲಿ ಸೊಳ್ಳೆ, ನೊಣ ಸಹಿತ ನಾಯಿಗಳ ಕಾಟ ಕಾಡುತ್ತದೆ. ಕಸ ವೈಜ್ಞಾನಿಕ ವಿಲೇವಾರಿಗೆ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿದ್ದೀರಿ ಎಂದು ಪೌರಾಯುಕ್ತ ರಮೇಶ್‌ರನ್ನು ತರಾಟೆಗೆ ತೆಗೆದುಕೊಂಡರು. ಸರಕಾರದ ಅನುದಾನ ಬಳಸಿಕೊಂಡು ತ್ಯಾಜ್ಯ ವಿಲೇವಾರಿಗೆ ಕ್ರಮ ಕೈಗೊಳ್ಳುವುದಾಗಿ ಪೌರಾಯುಕ್ತರು ಸಮಜಾಯಿಷಿ ನೀಡಿದರಾದರೂ ಇದಕ್ಕೂ ಉಪ ಲೋಕಾಯುಕ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಮಾರುಕಟ್ಟೆ ಆವರಣಕ್ಕೆ ತೆರಳಿ ಅಲ್ಲಿ ನಡೆಸಲಾಗುತ್ತಿದ್ದ ಸಂತೆ ವ್ಯಾಪಾರವನ್ನು ವೀಕ್ಷಿಸಿ, ವರ್ತಕರ ಬಳಿ ಅಲ್ಲಿನ ವ್ಯವಸ್ಥೆಗಳ ಬಗ್ಗೆ ಖುದ್ದಾಗಿ ಮಾಹಿತಿ ಪಡೆದರು. ಮಾರುಕಟ್ಟೆ ನೆಲ ಮಹಡಿಯಲ್ಲಿ ವ್ಯಾಪಾರ ನಡೆಸಲು ಮಳೆ ನೀರು ಅಡ್ಡಿಯಾಗುತ್ತಿದೆ. ಸೂಕ್ತ ಚರಂಡಿ ವ್ಯವಸ್ಥೆ ಇಲ್ಲದೆ ತೊಂದರೆಯಾಗುತ್ತಿದ್ದು, ಬೆಳಕಿನ ವ್ಯವಸ್ಥೆ ಇಲ್ಲದಿರುವ ಬಗ್ಗೆಯೂ ವರ್ತಕರು ಲೋಕಾಯುಕ್ತರ ಗಮನ ಸೆಳೆದರು. ಇದಕ್ಕೆ ಪ್ರತಿಕ್ರಿಯಿಸಿದ ಉಪ ಲೋಕಾಯುಕ್ತರು, ತಕ್ಷಣವೇ ಬೆಳಕಿನ ವ್ಯವಸ್ಥೆ ಮತ್ತು ಚರಂಡಿ ಸ್ವಚ್ಛತೆಗೆ ಕ್ರಮ ಕೈಗೊಳ್ಳಬೇಕು. ಮಳೆ ನೀರು ಸಂತೆ ಕಟ್ಟಡದ ಒಳಗೆ ಬಾರದಂತೆ ತಡೆಯಲು ವೈಜ್ಞಾನಿಕ ಕ್ರಮ ಕೈಗೊಳ್ಳಬೇಕು. ಈ ಕುರಿತು ಸೂಕ್ತ ವರದಿಯನ್ನೂ ತಯಾರಿಸಿ ನೀಡಬೇಕೆಂದು ಸೂಚನೆ ನೀಡಿದರು.



ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ಅವರು ಕಸ ವಿಲೇವಾರಿ ಪ್ರದೇಶಗಳಲ್ಲಿ ಪರಿಶೀಲನೆ ನಡೆಸಿದರು.

> ನಗರಸಭೆ ಇಡೀ ರಾಜ್ಯದಲ್ಲಿಯೇ ಕಳಪೆ ಮಟ್ಟದ ತ್ಯಾಜ್ಯ ನಿರ್ವಹಣೆ ಮಾಡಿರುವುದು ಕಂಡು ಬಂದಿದ್ದು, ಅಧಿಕಾರಿಗಳ ನಿರ್ಲಕ್ಷ್ಯ ಕಂಡು ಬಂದಿದೆ. ಮೇಲ್ನೋಟಕ್ಕೆ ನಗರಸಭೆ ಸತ್ತಿರುವಂತೆ ಭಾಸವಾಗುತ್ತಿದೆ. ಪರಿಶೀಲನೆ ವೇಳೆ ಎಲ್ಲೆಲ್ಲಿ ಅಧ್ವಾನಗಳು ಕಂಡು ಬಂದಿದೆಯೋ ಅಂತಹ ವಿಚಾರಗಳಲ್ಲಿ ಸುಮೋಟೋ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತದೆ. ಅಧಿಕಾರಿಗಳು ವರದಿ ನೀಡುವವರೆಗೂ ಸುಮೋಟೋ ಪ್ರಕರಣ ಮುಕ್ತಾಯವಾಗುವುದಿಲ್ಲ.
>
> –ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ

ದೂರು ಸಲ್ಲಿಸಿದರೆ ಕ್ರಮ: ನಗರದಲ್ಲಿ ಬೀದಿ ನಾಯಿ ಹಾವಳಿ ಕುರಿತ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಉಪ ಲೋಕಾಯುಕ್ತ ಫಣೀಂದ್ರ, ಬೀದಿ ನಾಯಿ ಹಾವಳಿ ಕುರಿತು ಸುಪ್ರೀಂಕೋರ್ಟ್ ಕೂಡ ಸೂಕ್ತ ನಿರ್ದೇಶನಗಳನ್ನು ನೀಡಿದೆ. ಇದರ ಉಲ್ಲಂಘನೆ ಮಾಡಿರುವ ಕುರಿತು ಲೋಕಾಯುಕ್ತ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸಾರ್ವಜನಿಕರು ಫಾರಂ ನಂ.1ರ ಮೂಲಕ ದೂರು ದಾಖಲಿಸಲು ಅವಕಾಶವಿದೆ. ದೂರು ಸಲ್ಲಿಕೆಯಾದಲ್ಲಿ ಈ ಕುರಿತು ಸೂಕ್ತ ಕ್ರಮ ಜರುಗಿಸಲಾಗುತ್ತದೆ ಎಂದು ಉತ್ತರಿಸಿದರು. ಉಪ ಲೋಕಾಯುಕ್ತರ ಆಪ್ತ ಕಾರ್ಯದರ್ಶಿ ಕಿರಣ್ ಪಾಟೀಲ, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿಪಂ ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಎಸ್‌ಪಿ ಆರ್.ಎನ್.ಬಿಂದುಮಣಿ, ಉಪ ಅರಣ್ಯ ಸಂರಕ್ಷಣಾಧಿ ಕಾರಿ ಅಭಿಷೇಕ್, ಹೆಚ್ಚುವರಿ ಜಿಲ್ಲಾಧಿಕಾರಿ ಸಹನಾ ಎಸ್. ಹಾದಿಮನಿ, ಲೋಕಾಯುಕ್ತ ಎಸ್ಪಿ ಉದೇಶ್, ಡಿವೈಎಸ್‌ಪಿ ದಿನಕರ್ ಶೆಟ್ಟಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶುಭ, ಎಸಿ ನಿತಿನ್ ಚಕ್ಕಿ, ತಹಶೀಲ್ದಾರ್ ಶ್ರೀಧರ, ಯೋಜನಾ ನಿರ್ದೇಶಕ ಮಂಜುನಾಥ ರಾಮಣ್ಣ, ಪರಿಸರ ಅಧಿಕಾರಿ ಮಹೇಶ್ವರಿ ಸಿಂಗ್ ಇತರರು ಇದ್ದರು.

ಹೆಚ್ಚು ಗುರುತಿನ ಚೀಟಿ ಹೊಂದಿರುವವರ ವಿರುದ್ಧ ಕ್ರಮಕ್ಕೆ ಸಿಎನ್‌ಸಿ ಆಗ್ರಹ

ಮಡಿಕೇರಿ: ಒಂದಕ್ಕಿಂತ ಹೆಚ್ಚು ಮತದಾರರ ಗುರುತಿನ ಚೀಟಿ ಹೊಂದುವ ಮೂಲಕ ಮತದಾನದ ಹಕ್ಕನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು.ನಾಚಪ್ಪ ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ, ಕೇಂದ್ರ ಚುನಾವಣಾ ಆಯೋಗ ಹಾಗೂ ಕೇಂದ್ರ ಸರಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಮತದಾರರ ಗುರುತಿನ ಚೀಟಿ ವಿಶೇಷ ತೀವ್ರ ಪರಿಷ್ಕರಣೆ ಸಂದರ್ಭ ಕೊಡವ ಮತದಾರರನ್ನು ರಕ್ಷಿಸಲು ಮತ್ತು ಕೊಡವ ಲ್ಯಾಂಡ್‌ನಲ್ಲಿ ಹೊರಗಿನವರು ಹೊಂದಿರುವ ಒಂದಕ್ಕಿಂತ ಹೆಚ್ಚು ವೋಟರ್ ಐಡಿಗಳನ್ನು ರದ್ದುಗೊಳಿಸಲು ತುರ್ತು ಹಸ್ತಕ್ಷೇಪ ಮಾಡಬೇಕೆಂದು ಕೋರಿದ್ದಾರೆ. ಒಂದಕ್ಕಿಂತ ಹೆಚ್ಚು ವೋಟರ್ ಐಡಿ ಹೊಂದಿರುವವರ ಕಾರ್ಡ್‌ಗಳನ್ನು ಕಟ್ಟುನಿಟ್ಟಾಗಿ ರದ್ದುಗೊಳಿಸಬೇಕು ಅಂತಹ ಅಪರಾಧಿಗಳ ವಿರುದ್ಧ ಕಠಿಣ ದಂಡನಾತ್ಮಕ ಕ್ರಮವನ್ನು ಕೈಗೊಳ್ಳಬೇಕು ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಕೊಡಗಿನ ಕಾನೂನುಬದ್ಧ ಮತದಾರರಾಗಿರುವ ಕೊಡವರನ್ನು ಮತದಾರರ ಪಟ್ಟಿಗೆ ಸೇರಿಸಲು ವಿಶೇಷ ಕಾಳಜಿ ವಹಿಸಬೇಕು. ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಎಲ್ಲಾ ಕೊಡವರು ಕಡ್ಡಾಯವಾಗಿ ತಮ್ಮ ಹೆಸರನ್ನು ನೋಂದಾಯಿಸಿ ಮತ್ತು ಗುರುತನ್ನು ಪರಿಶೀಲಿಸಿಕೊಳ್ಳಲು ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ಹಾಗೂ ಜಿಲ್ಲಾ ಚುನಾವಣಾ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ಒತ್ತಾಯಿಸಿದ್ದಾರೆ.

ನಿಯಮ ಮೀರಿ ಗಣಿಗಾರಿಕೆ ನಡೆಸಿದರೆ ಪರವಾನಗಿ ರದ್ದು



ಗ್ರಾಮಸ್ಥರ ಸಭೆಯಲ್ಲಿ ಭಾಗವಹಿಸಿದ್ದವರು ಆಕ್ರೋಶ ವ್ಯಕ್ತಪಡಿಸುತ್ತಿರುವುದು.

ವಿರಾಜಪೇಟೆ: ಗಣಿಗಾರಿಕೆ ನಿಯಮಗಳನ್ನು ಉಲ್ಲಂಘಿಸಿ ನಿಯಮಬಾಹಿರವಾಗಿ ಉಪಗುತ್ತಿಗೆ ನೀಡಿದ್ದೀರಿ. ಇದನ್ನು ಇದು ಸರಿಪಡಿಸಿಕೊಳ್ಳದಿದ್ದರೆ ಪರವಾನಗಿಯನ್ನು ರದ್ದುಪಡಿಸಬೇಕಾಗುತ್ತದೆ ಎಂದು ಹಿರಿಯ ಭೂ ವಿಜ್ಞಾನಿ ಸಂದೀಪ್ ಗಣಿಗಾರಿಕೆ ಗುತ್ತಿಗೆದಾರನಿಗೆ ಎಚ್ಚರಿಕೆ ನೀಡಿದ್ದಾರೆ

ಅರಮೇರಿ ಹಾಗೂ ಕಡಂಗಮೂರುರು ವ್ಯಾಪ್ತಿಯಲ್ಲಿ ಗಣಿಗಾರಿಕೆಯ ವಿವಾದದ ಬಗ್ಗೆ ಸಭೆ ನಡೆಸುವಂತೆ ಜಿಲ್ಲಾಧಿಕಾರಿಗಳ ಆದೇಶದ ಹಿನ್ನೆಲೆಯಲ್ಲಿ ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ದಿಢೀರನೆ ಗ್ರಾಮಸ್ಥರ ಸಭೆಯನ್ನು ಕಡಂಗಮೂರುರು ಗ್ರಾಮದ ಮಹಿಳಾ ಸಮಾಜದ ಸಭಾಂಗಣದಲ್ಲಿ ನಡೆಸಿತು. ಹಿರಿಯ ಭೂ ವಿಜ್ಞಾನಿ ಸಂದೀಪ್, ಪರವಾನಿಗೆ ದೊರೆತರೂ ಅಧಿಕೃತವಾಗಿ ಗಣಿಗಾರಿಕೆ ಅರಂಭಿಸಲು ಇರುವ ಮಾನದಂಡಗಳ ಬಗ್ಗೆ ಪರಿಶೀಲನೆ ನಡೆಸಿ ಗಣಿಗಾರಿಕೆ ನಡೆಸಲು ಸೂಚಿಸಿದ್ದರೂ ನಿಯಮ ಮೀರಿ ನಡೆಸಿದ್ದೀರಿ. ಉಪ ಗುತ್ತಿಗೆ ನೀಡಿರುವುದು ನಿಯಮ ಬಾಹಿರ. ನಿಮ್ಮ ಪರವಾನಿಗೆ ರದ್ದುಪಡಿಸಬೇಕಾಗುತ್ತದೆ ಎಂದು ಎಚ್ಚರಿಸಿ ಉಪ ಗುತ್ತಿಗೆ ಮಾಡುವುದು ಸೂಕ್ತವಲ್ಲ ಎಂದು ಸಭೆಯಲ್ಲಿದ್ದ ಗುತ್ತಿಗೆದಾರ ವೇಣುಗೋಪಾಲ್‌ಗೆ ಕಟ್ಟೆಚ್ಚರ ನೀಡಿದರು.

ಅರಮೇರಿ, ಕಡಂಗಮೂರುರು ಗ್ರಾಮದಂಚಿನ ಭಾಗದ 200ಮೀ ವ್ಯಾಪ್ತಿಯಲ್ಲಿರುವ ವಸತಿ, ಗದ್ದೆ, ಕಾಫಿ ತೋಟಗಳ ಮರು ಸರ್ವೆ ನಡೆಸಿ ವರದಿ ಬಂದ ಬಳಿಕ ಗಣಿಗಾರಿಕೆ ಮುಂದುವರಿಕೆ ಅಥವಾ ನಿಲುಗಡೆ ವಿಚಾರದಲ್ಲಿ ಅಂತಿಮ ನಿರ್ಧಾರಕ್ಕೆ ಬರಲಾಗುತ್ತದೆ. ಅಲ್ಲಿವರೆಗೆ ಗಣಿಗಾರಿಕೆ ನಡೆಸದಂತೆ ಗುತ್ತಿಗೆದಾರನಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಗ್ರಾಮಸ್ಥರು ಗಣಿಗಾರಿಕೆದಾರನ ಕಡೆಯಿಂದ ಉಪ ಗುತ್ತಿಗೆ ಪಡೆದವರ ನಡುವೆ ಮಾತಿನ ಚಕಮಕಿ ಮತ್ತು ವಾಗ್ವಾದ ನಡೆಯಿತು. ಆರೋಪ ಪ್ರತ್ಯಾರೋಪದಿಂದ ಸಭೆಯಲ್ಲಿ ಬಿಗುವಿನ ವಾತಾವರಣ ಉಂಟಾದಾಗ ಪೊಲೀಸರು ಮಧ್ಯೆ ಪ್ರವೇಶ ಮಾಡಿದರು. ಈ ಗೊಂದಲಗಳ ನಡುವೆ ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಸಭೆಯಿಂದ ನಿರ್ಗಮಿಸಿದಾಗ ಮತ್ತೆ ಗ್ರಾಮಸ್ಥರು ಅವರನ್ನು ಕರೆತಂದು ಈ ಕುರಿತು ಸ್ಪಷ್ಟ ನಿಲುವು ತಿಳಿಸುವಂತೆ ಆಗ್ರಹಿಸಿದರು.

ಗ್ರಾಮ ನಿವಾಸಿ ನಿವೃತ್ತ ಶಿಕ್ಷಕ ಗೋವಿಂದರಾಜು ಮಾತನಾಡಿದರು. ಸಭೆಯಲ್ಲಿ ಕಂದಾಯ ಪರಿವೀಕ್ಷಕ ಹರೀಶ್, ಹೆಚ್ಚುವರಿ ತಹಶೀಲ್ದಾರ್ ಪ್ರದೀಪ್ ಕುಮಾರ್, ಅರಮೇರಿ ಗ್ರಾಪಂ ಪಿಡಿಓ ಮಂಜುಳ, ಸಹಾಯಕ ಭೂ ವಿಜ್ಞಾನ ಅಧಿಕಾರಿ ರಾಹುಲ್, ಬಲಟಿಕಾಳಂಡ ಮುದ್ದಣ್ಣ ಮತ್ತು ಮಾದಪ್ಪ, ಪೋಳಂಡ ಮಾಚಯ್ಯ ಮತ್ತು ಪೂಣಚ್ಚ, ಮಂಜುಳಾ ಅಯ್ಯಪ್ಪ, ಬಲ್ಯಂಡ ಉದಯ, ಸಾಕಷ್ಟು ಸಂಖ್ಯೆಯಲ್ಲಿ ಗ್ರಾಮಸ್ಥರು ಸೇರಿದ್ದರು.

ಕೆಆರ್‌ಎಸ್‌ನಿಂದ ನಾಲೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ ರೈತರ ಧರಣಿ



ಕೆ.ಎಸ್.ನಂಜುಂಡೇಗೌಡ, ಬಿ.ಸಿ.ಕೃಷ್ಣೇಗೌಡ ನೇತೃತ್ವದಲ್ಲಿ ಧರಣಿ ನಡೆಸಲಾಯಿತು.

ಶ್ರೀರಂಗಪಟ್ಟಣ, ಜು.3– ಬೆಳೆದು ನಿಂತಿರುವ ಬೆಳೆಗಳಿಗೆ ನೀರಿನ ಕೊರತೆಯಿಂದ ಒಣಗುತ್ತಿದ್ದು, ಈ ಕುರಿತು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ರಾಜ್ಯ ಸರ್ಕಾರ ಮೌನ ವಹಿಸಿದೆ. ಬೆಳೆಗಳ ರಕ್ಷಣೆಗೆ ತಕ್ಷಣವೇ ಕೆ.ಆರ್.ಸಾಗರ ಅಣೆಕಟ್ಟೆಯಿಂದ ನಾಲೆಗಳಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿ ಭೂಮಿ ತಾಯಿ ಹೋರಾಟ ಸಮಿತಿಯ ವತಿಯಿಂದ ಶುಕ್ರವಾರ ಕೆ.ಆರ್.ಸಾಗರದ ಕಾವೇರಿ ನೀರಾವರಿ ನಿಗಮದ ಮುಖ್ಯ ಕಚೇರಿ ಮುಂಭಾಗದಲ್ಲಿ ರೈತಪರ ಹಿರಿಯ ಮುಖಂಡರಾದ ಕೆ.ಎಸ್. ನಂಜುಂಡೇಗೌಡ ಹಾಗೂ ಬಿ.ಸಿ.ಕೃಷ್ಣೇಗೌಡ ನೇತೃತ್ವದಲ್ಲಿ ಧರಣಿ ನಡೆಸಲಾಯಿತು. ಬಳಿಕ ಧರಣಿ ನಿರತ ರೈತರನ್ನು ಪೊಲೀಸರು ಬಂಧಿಸಿ ಬಿಡುಗಡೆಗೊಳಿಸಿದರು.

ಬೆಳೆದು ನಿಂತಿರುವ ಕಬ್ಬಿಗೆ ನೀರಿಲ್ಲದೆ ಒಣಗುತ್ತಿರುವ ಹಿನ್ನೆಲೆಯಲ್ಲಿ ಅಣೆಕಟ್ಟೆಯಿಂದ ನಾಲೆಗಳಿಗೆ ನೀರು ಹರಿಸಬೇಕು ಎಂದು ಆಗ್ರಹಿಸಿದ ರೈತರು, ಒಣಗಿದ ಕಬ್ಬಿನ ಗಿಡಗಳೊಂದಿಗೆ ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರರ ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು. ಈ ವೇಳೆ ಜಿಲ್ಲೆಯ ಜನಪ್ರತಿನಿಧಿಗಳು, ಸಂಸದರು ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡ ಕೆ.ಎಸ್.ನಂಜುಂಡೇಗೌಡ, ಜಿಲ್ಲೆಯ ಯಾವೊಬ್ಬ ಜನಪ್ರತಿನಿಧಿಯೂ ರೈತರ ಹಿತ ಕಾಪಾಡುವಲ್ಲಿ ವಿಫಲರಾಗಿದ್ದಾರೆ. ಎಲ್ಲರೂ ರಾಜ್ಯ ಸರ್ಕಾರದ ಅಡಿಯಾಳಾಗಿ ವರ್ತಿಸುತ್ತಿದ್ದಾರೆ. ಈ ಹಿಂದೆ ಮಂಡ್ಯದ ರೈತರ ಧ್ವನಿಗೆ ಸರ್ಕಾರವೇ ಸ್ಪಂದಿಸುತ್ತಿತ್ತು. ಆದರೆ ಈಗಿನ ಪರಿಸ್ಥಿತಿಯಲ್ಲಿ ಶಾಸಕರು ರೈತರಿಗೆ ನಾಲೆಗಳಿಗೆ ನೀರು ಹರಿಸುವ ಬದಲು ಬೆಂಗಳೂರಿಗೆ ನೀರು ಸರಬರಾಜು ಮಾಡುವುದರಲ್ಲೇ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ ಎಂದು ಆರೋಪಿಸಿದರು.

ಮುಖ್ಯಮಂತ್ರಿಯವರು ಅಣೆಕಟ್ಟೆ ನೀರನ್ನು ಅವಲಂಬಿಸಿ ರೈತರು ಬೆಳೆ ಬೆಳೆಯಬಾರದು ಎಂಬ ರೀತಿಯ ಹೇಳಿಕೆ ನೀಡಿರುವುದು ರೈತ ವಿರೋಧಿ ಧೋರಣೆಯಾಗಿದೆ. ಇಂತಹ ಆಡಳಿತದಲ್ಲಿ ರೈತರ ಹಿತ ಸಾಧ್ಯವೇ ಎಂಬ ಪ್ರಶ್ನೆ ಉದ್ಭವಿಸಿದೆ ಎಂದು ಅವರು ಹೇಳಿದರು.

ನಂತರ ಸ್ಥಳಕ್ಕೆ ಆಗಮಿಸಿದ ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರ ಫಾರೂಕ್ ಭೇಟಿ ನೀಡಿ ರೈತರೊಂದಿಗೆ ಮಾತುಕತೆ ನಡೆಸಿ ಪ್ರಸ್ತುತ ಬೆಳೆ ಹಾಗೂ ಅಣೆಕಟ್ಟೆಯ ನೀರಿನ ಸ್ಥಿತಿಗತಿಗಳ ಬಗ್ಗೆ ಹಿರಿಯ ಅಧಿಕಾರಿಗಳು ಮತ್ತು ರಾಜ್ಯ ಸರ್ಕಾರದೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿ ಧರಣಿ ಕೈಬಿಡುವಂತೆ ಮನವಿ ಮಾಡಿದರು.

ಆದರೆ ಇದಕ್ಕೆ ಒಪ್ಪದ ರೈತರು, ನಾಲೆಗಳಿಗೆ ನೀರು ಹರಿಸುವವರೆಗೆ ಕಚೇರಿ ಮುಂಭಾಗದಲ್ಲೇ ಅಹೋರಾತ್ರಿ ಧರಣಿ ನಡೆಸುವುದಾಗಿ ತಿಳಿಸಿ, ತಮ್ಮನ್ನು ಬಂಧಿಸುವಂತೆ ಪೊಲೀಸರಿಗೆ ಹೇಳಿದರು. ಇದಕ್ಕೆ ಸ್ಥಳದಲ್ಲಿದ್ದ ಕೆ.ಆರ್.ಸಾಗರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ವಿವೇಕಾನಂದ ಧರಣಿ ನಿರತರನ್ನು ವಶಕ್ಕೆ ಪಡೆದು ಬಳಿಕ ಬಿಡುಗಡೆಗೊಳಿಸಿದರು.

ಧರಣಿಯಲ್ಲಿ ಭೂಮಿ ತಾಯಿ ಹೋರಾಟ ಸಮಿತಿಯ ಬಿ.ಸಿ.ಕೃಷ್ಣೇಗೌಡ, ಕೆ.ಆರ್.ಎಸ್. ಮಹದೇವ, ಶಿವಣ್ಣ ವಿಷಕಂಠ, ಮೇಳಾಪುರ ಜಯರಾಂ, ಹೆಮ್ಮಿಗೆ ಕೃಷ್ಣ, ಸಿದ್ದೇಗೌಡ, ನಾಗೇಂದ್ರ ಸೇರಿದಂತೆ ನೂರಕ್ಕೂ ಹೆಚ್ಚು ರೈತರು ಭಾಗವಹಿಸಿದ್ದರು.

ಕಲಾವಿದರಿಂದ ಅರ್ಜಿ ಆಹ್ವಾನ

ಮಂಡ್ಯ: ಮಂಡ್ಯ ಬಾಲ ಭವನದಲ್ಲಿರುವ 8 ವರ್ಷದಿಂದ 14 ವರ್ಷದ ಮಕ್ಕಳಿಗೆ ವಾರಾಂತ್ಯದಲ್ಲಿ ಉಚಿತವಾಗಿ ಜನಪದ, ಸುಗಮ ಸಂಗೀತ ಗಾಯನ ಕಲಾ ತರಬೇತಿ ನೀಡಲು ಆಸಕ್ತ ಕಲಾವಿದರು ಮಂಡ್ಯ ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ

ಬರ: ರೈತರಿಗೆ ಪರ್ಯಾಯ ಬೆಳೆಗಳನ್ನು ಬೆಳೆಯುವ ಬಗ್ಗೆ ಅರಿವು ಮೂಡಿಸಿ

> ಮಂಡ್ಯ ಜಿಲ್ಲೆಯ ರೈತರ ಜೀವನಾಡಿಯಾದ ಕೃಷ್ಣರಾಜಸಾಗರ (ಕೆ.ಆರ್.ಎಸ್) ಅಣೆಕಟ್ಟೆಯಲ್ಲಿ ನೀರಿನ ಮಟ್ಟ 81 ಅಡಿಗೆ ಇಳಿಕೆಯಾಗಿದೆ. ಹಿಂದಿನ ವರ್ಷ ಮುಂಗಾರು ಮಳೆ ಉತ್ತಮವಾಗಿ ಸುರಿದಿತ್ತು. ಅಣೆಕಟ್ಟೆಯಲ್ಲಿ ಸಾಕಷ್ಟು ನೀರು ಇಲ್ಲದ ಕಾರಣ ಕೃಷಿ ಬೆಳೆಗಳಿಗೆ ನೀರು ಹರಿಸಲು ಸಾಧ್ಯವಾಗುತ್ತಿಲ್ಲ. ಈಗ ಲಭ್ಯವಿರುವ ನೀರನ್ನು ಕುಡಿಯಲು ಮಾತ್ರ ಬಳಸಲಾಗುತ್ತಿದೆ. ಈ ಪರಿಸ್ಥಿತಿಯನ್ನು ನಿಭಾಯಿಸಲು ಕೃಷಿ ಇಲಾಖೆಯಿಂದ ಪರ್ಯಾಯ ಬೆಳೆಗಳನ್ನು ಬೆಳೆಯಲು ರೈತರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ – ಡಾ.ಕುಮಾರ್, ಜಿಲ್ಲಾಧಿಕಾರಿ



ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ ಮಾತನಾಡಿದರು.

ಮಂಡ್ಯ, ಜು.3– ಮುಂಗಾರು ವಿಳಂಬ ಮತ್ತು ಬರ ಪರಿಸ್ಥಿತಿಯನ್ನು ನಿರ್ವಹಿಸಲು ಜಿಲ್ಲೆಯಲ್ಲಿ ಪರ್ಯಾಯ ಬೆಳೆ ಯೋಜನೆ, ಬಿತ್ತನೆ ಸಲಹೆ, ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಬೆಳೆ ವಿಮೆ, ಪೌತಿ ಖಾತೆ ಆಂದೋಲನ ಹಾಗೂ ಇತರೆ ವಿಷಯಗಳ ಬಗ್ಗೆ ಕಂದಾಯ ಇಲಾಖೆಯ ಕಾರ್ಯದರ್ಶಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕಂದಾಯ ಇಲಾಖೆ, ಮುಂಗಾರು ಪರಿಸ್ಥಿತಿ ಹಾಗೂ ಇತರೆ ಪ್ರಮುಖ ವಿಷಯಗಳ ಕುರಿತು ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅರ್ಹ ರೈತರು ಬೆಳೆ ವಿಮೆಯನ್ನು ಕಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು ಮತ್ತು ಸರ್ಕಾರದ ಪ್ರಮುಖ ರೈತರ ಯೋಜನೆಯ ಪ್ರಯೋಜನ ಪಡೆಯುವಂತೆ ನೋಡಿಕೊಳ್ಳಲು ಕೃಷಿ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರು.

ಪೌತಿ ಖಾತೆ ಆಂದೋಲನ ಪ್ರಕ್ರಿಯೆಯನ್ನು ಯಾವುದೇ ವಿಳಂಬವಿಲ್ಲದೆ, ಸಮರ್ಪಕವಾಗಿ ಮತ್ತು ಪಾರದರ್ಶಕವಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸಬೇಕು ಎಂದು ಅವರು ತಿಳಿಸಿದರು.

ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯು ಜೂನ್ 30 ರಿಂದ ಆರಂಭವಾಗಿದ್ದು, ಜುಲೈ 29ರವರೆಗೆ ನಡೆಯಲಿದೆ. ಮನೆ-ಮನೆಗೆ ಭೇಟಿ ನೀಡುವ ಬೂತ್ ಮಟ್ಟದ ಅಧಿಕಾರಿಗಳಿಗೆ ಸಾರ್ವಜನಿಕರು ಅಗತ್ಯ ದಾಖಲೆಗಳನ್ನು ಒದಗಿಸಿ, ಎನುಮರೇಷನ್ (Enumeration) ಅರ್ಜಿಗಳನ್ನು ಭರ್ತಿ ಮಾಡಿಕೊಡುವಂತೆ ತಿಳಿಸಲು ಅರಿವು ಮೂಡಿಸಲು ಅಗತ್ಯ ಕ್ರಮವಹಿಸುವಂತೆ ತಿಳಿಸಿದರು.

ಮಂಡ್ಯ ಜಿಲ್ಲೆಯಲ್ಲಿ 15 ಲಕ್ಷ ಮತದಾರರು ಇದ್ದು ಮತದಾರರು ಆನ್‌ಲೈನ್ ಮೂಲಕ ಎಸ್‌ಐಆರ್ ಫಾರ್ಮ್ ಅನ್ನು ಭರ್ತಿ ಮಾಡಬಹುದಾಗಿದೆ ಎಂದು ಸಭೆಯಲ್ಲಿ ಅವರು ತಿಳಿಸಿದರು. ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಒ ಕೆ.ಆರ್.ನಂದಿನಿ ಮಾತನಾಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಸರ್ಕಾರಿ ಶಾಲೆ, ಕಾಲೇಜು ಉಳಿದರೆ ಮಾತ್ರ ಸಮಾಜದ ಉಳಿಗಾಲ

ಕಿಕ್ಕೇರಿ: ಸಮಗ್ರ ಪರಿಕರ, ಕೌಶಲತೆ ಇರುವ ಸರ್ಕಾರಿ ಶಾಲೆ, ಕಾಲೇಜು ಉಳಿದರೆ ಮಾತ್ರ ಭವಿಷ್ಯದ ಕಾಲ ಸುಂದರವಾಗಲಿದೆ ಎಂದು ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಅಧ್ಯಕ್ಷ ಗಾಯಕ ಡಾ.ಕಿಕ್ಕೇರಿ ಕೃಷ್ಣಮೂರ್ತಿ ಹೇಳಿದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಆದರ್ಶ ಸುಗಮ ಸಂಗೀತ ಅಕಾಡೆಮಿ ಟ್ರಸ್ಟ್, ಸ್ಪಂದನಾ ಫೌಂಡೇಷನ್, ಎನ್‌ಎಸ್‌ಎಸ್ ಘಟಕ ಹಮ್ಮಿಕೊಂಡಿದ್ದ 'ಪರಿಸರ ಸ್ನೇಹಿ ಯರ್' ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ಶಿಕ್ಷಣ, ಆರೋಗ್ಯ, ಆಸ್ಪತ್ರೆ ಖಾಸಗೀಕರಣವಾದರೆ ವ್ಯಾಪಾರೀಕರಣದ ಬಲೆಯಿಂದ ಬಡವರು ಬದುಕುಳಿಯಲಾರರು ಎಂದು ಆತಂಕ ವ್ಯಕ್ತಪಡಿಸಿದರು. ಮಕ್ಕಳು ಮನದಲ್ಲಿ ತನ್ನ ಪರಿಸರ, ಇತಿಹಾಸ ಕುರುಹು, ತಂದೆ, ತಾಯಿ, ಗುರುಗಳನ್ನು ಗೌರವಿಸಿ, ಪೂಜಿಸಿ, ಸತ್ಕಾರಗೊಳಿಸುವ ಸಂಸ್ಕಾರ ಕಲಿಸುವ ಪಾಠ ಮೊದಲು ಆಗಬೇಕಿದೆ ಎಂದರು.



ಬೆಂಗಳೂರಿನ ರೋಟರಿ ಗಂಧದಗುಡಿ ಸಂಸ್ಥೆ ನಿರ್ದೇಶಕ ವಿಜಯರಾಜ್ ಮಾತನಾಡಿ, ಖಾಸಗಿ ಶಾಲೆ ವ್ಯಾಮೋಹ ಬಿಡಿ. ಭವಿಷ್ಯದ ಮಕ್ಕಳಿಗೆ ಬೆಳಕಾಗಲು ಗಿಡ ನೆಟ್ಟು ನೀರೆರೆಯಲು ತಾವು ಬದ್ಧರಾಗಿದ್ದೇವೆ ಎಂದು ಆತ್ಮವಿಶ್ವಾಸ ತುಂಬಿದರು. ಅಮೀಬಾ ಗ್ರೂಪ್‌ನ ಸಿಇಒ ಸುರೇಶ್, ಬೃಹತ್ ಇನ್‌ಫೋಕಾಂ ಸಿಇಒ ಅಚ್ಯುತ್, ಬೆಂಗಳೂರಿನ ರೋಟರಿ ಗಂಧದ ಗುಡಿ ಸಂಸ್ಥೆ ನಿರ್ದೇಶಕರಾದ ಅರುಣ್, ಸಂದೀಪ್, ಕಿಶೋರ್ ಇದ್ದರು.

ಸರ್ಕಾರಿ ಶಾಲೆಗಳಿಗೆ ಮೂಲ ಸೌಲಭ್ಯ ಕಲ್ಪಿಸಿ ಶಿಕ್ಷಣಕ್ಕೆ ಆದ್ಯತೆ



ವಿದ್ಯಾರ್ಥಿಗಳಿಗೆ ಶಾಸಕ ಪುಟ್ಟರಂಗಶೆಟ್ಟಿ ನೋಟ್ ಬುಕ್ ವಿತರಿಸಿದರು.

ಚಾಮರಾಜನಗರ: ಕ್ಷೇತ್ರದ ವ್ಯಾಪ್ತಿಯ ಸರ್ಕಾರಿ ಶಾಲೆಗಳಿಗೆ ಮೂಲಸೌಲಭ್ಯಗಳನ್ನು ಕಲ್ಪಿಸಿಕೊಡುವ ಮೂಲಕ ಬಡ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ಹೇಳಿದರು.

ತಾಲೂಕಿನ ಆಲೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಪೂರ್ವ ಪ್ರಾಥಮಿಕ ಶಾಲೆಯನ್ನು (ಎಲ್‌ಕೆಜಿ, ಯುಕೆಜಿ) ಉದ್ಘಾಟಿಸಿ ಬಳಿಕ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್ ಬುಕ್ ವಿತರಿಸಿ ಮಾತನಾಡಿದರು.

ಮುಂದಿನ ಶೈಕ್ಷಣಿಕ ವರ್ಷದಿಂದ ಕರ್ನಾಟಕ ಪಬ್ಲಿಕ್ ಶಾಲೆ ಆರಂಭಿಸಲಾಗುವುದು. ಅದಕ್ಕೆ ಪೂರಕವಾಗಿ ಚಾರು ಸಾಂಸ್ಕೃತಿಕ ಟ್ರಸ್ಟ್ ಸಹಯೋಗದಲ್ಲಿ ಎಲ್‌ಕೆಜಿ, ಯುಕೆಜಿ ಆರಂಭಿಸುತ್ತಿರುವುದು ಸಂತಸವಾಗಿದೆ. ಇಂತಹ ದಾನಿಗಳು ಮುಂದೆ ಬಂದರೆ ಶಾಲೆಗಳು ಅಭಿವೃದ್ಧಿ ಹೊಂದುತ್ತವೆ. ಬಡಮಕ್ಕಳ ಶಿಕ್ಷಣಕ್ಕೆ ನೆರವಾಗುತ್ತದೆ. ಹಿಂದೆ ಬಡವರಾಗಿದ್ದರೂ ಕೂಡ ಶಾಲೆಗಳಿಗೆ ಜಮೀನು ದಾನ ಮಾಡಿರುವ ನಿರ್ದೇಶನ ಇದೆ ಎಂದರು.

ಚಾರು ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷೆ ಶೀಲಾಕುಮಾರಿ ಮಾತನಾಡಿ, ನಾನು ಓದಿದ ಶಾಲೆಗೆ ಏನಾದರೂ ಕೊಡುಗೆ ನೀಡಬೇಕೆಂಬ ಹಂಬಲವಿತ್ತು. ನನ್ನ ಪತಿ ಡಾ.ನಂಜಪ್ಪ ಅವರ ನಿಧನದ ಬಳಿಕ ಕಳೆದ 2 ವರ್ಷಗಳಿಂದಲೂ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದೇವೆ. ಈಗ ಸರ್ಕಾರಿ ಶಾಲೆಗಳಿಗೆ ಮಕ್ಕಳ ದಾಖಲಾತಿ ಕಡಿಮೆ ಆಗುತ್ತಿರುವುದನ್ನು ಗಮನಿಸಿ ಸರ್ಕಾರಿ ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿಯನ್ನು ಆರಂಭಿಸುವ ಪ್ರಸ್ತಾಪವನ್ನು ಮುಖ್ಯ ಶಿಕ್ಷಕರು ನನ್ನ ಗಮನಕ್ಕೆ ತಂದರು. ನಾನು ಇದರ ವೆಚ್ಚವನ್ನು ಭರಿಸಿ ಒಂದು ಸುಸಜ್ಜಿತ ನರ್ಸರಿ ಆರಂಭಿಸಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ಡಿಡಿಪಿಐ ಚಂದ್ರ ಪಾಟೀಲ್, ಬಿಇಓ ಹನುಮಶೆಟ್ಟಿ, ಎಪಿಎಂಸಿ ನಿರ್ದೇಶಕ ಜಿ.ಎಂ.ರವಿಶಂಕರ ಮೂರ್ತಿ, ಸಿಆರ್‌ಪಿ ನುಂಜುಂಡಸ್ವಾಮಿ ಇದ್ದರು.

ಚಾ.ನಗರ ಬಳಿ ಚಿರತೆ ದಾಳಿಗೆ ಮೇಕೆ ಬಲಿ

ಚಾಮರಾಜನಗರ, ಜು.3– ತಾಲೂಕಿನ ಮೂಕನಪಾಳ್ಯ ಗ್ರಾಮದಲ್ಲಿ ಚಿರತೆ ದಾಳಿ ನಡೆಸಿ ಮೇಕೆಯೊಂದನ್ನು ಕೊಂದುಹಾಕಿದೆ.

ಗ್ರಾಮದ ರಾಮನಾಯ್ಕ ಎಂಬುವರಿಗೆ ಸೇರಿದ ಮೇಕೆಯೊಂದನ್ನು ಏಕಾಏಕಿ ದಾಳಿ ನಡೆಸಿರುವ ಚಿರತೆ ಕೊಂದು ಪರಾರಿಯಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಪಶು ವೈದ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ, ಪರಿಹಾರ ಕೊಡಿಸುವ ಭರವಸೆ ನೀಡಿದರು.

ಗ್ರಾಮದ ಸಮೀಪದಲ್ಲೇ ಚಿರತೆ ಓಡಾಡುತ್ತಿರುವುದರಿಂದ ಗ್ರಾಮಸ್ಥರು ಭಯಭೀತರಾಗಿದ್ದಾರೆ. ಕೂಡಲೇ ಬೋನು ಇರಿಸಿ ಚಿರತೆಯನ್ನು ಸೆರೆ ಹಿಡಿಯಬೇಕೆಂದು ಗ್ರಾಮಸ್ಥರು ಆಗ್ರಹ ಮಾಡಿದ್ದಾರೆ. ಈ ಘಟನೆ ನಡೆದ ಸಮೀಪದಲ್ಲೇ ಕಳೆದ ಕೆಲ ದಿನಗಳ ಹಿಂದೆ ಎರಡು ಮೇಕೆಗಳನ್ನು ಚಿರತೆ ಕೊಂದು ಹಾಕಿತ್ತು. ಈಗ ಮತ್ತೊಂದು ಮೇಕೆಯನ್ನು ಕೊಂದು ಹಾಕಿರುವುದರಿಂದ ಗ್ರಾಮಸ್ಥರಲ್ಲಿ ಮತ್ತಷ್ಟು ಆತಂಕ ಹೆಚ್ಚಾಗಿದೆ. ಅರಣ್ಯ ಇಲಾಖೆ ಅಧಿಕಾರಿಗಳು ಬೋನು ಇರಿಸಿ ಚಿರತೆ ಸೆರೆ ಹಿಡಿಯುವುದಾಗಿ ಭರವಸೆ ನೀಡಿದ್ದಾರೆ.

ಸುರಾಪುರ ಪ್ರೌಢಶಾಲೆಗೆ ಡಿಡಿಪಿಐ ಭೇಟಿ



ಶಾಲೆಯ ಆವರಣದಲ್ಲಿ ಡಿಡಿಪಿಐ ಚಂದ್ರಪಾಟೀಲ್ ಗಿಡನೆಟ್ಟರು.

ಕೊಳ್ಳೇಗಾಲ, ಜು.3– ತಾಲೂಕಿನ ಸುರಾಪುರ ಸರ್ಕಾರಿ ಪ್ರೌಢಶಾಲೆಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಚಂದ್ರಪಾಟೀಲ್ ಅವರು ಬೇಟಿ ನೀಡಿ ಅಲ್ಲಿನ ಶೈಕ್ಷಣಿಕ ವ್ಯವಸ್ಥೆ ಪರಿಶೀಲಿಸಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಕಳೆದ ಬಾರಿಯಂತೆ ಮುಂದಿನ ಸಾಲಿನಲ್ಲೂ ಉತ್ತಮ ಫಲಿತಾಂಶ ತರುವ ನಿಟ್ಟಿನಲ್ಲಿ ಸಜ್ಜಾಗುವಂತೆ ಶಿಕ್ಷಕರಿಗೆ ಮಾರ್ಗದರ್ಶನ ನೀಡಿದರು.

ಇದಕ್ಕೂ ಮುನ್ನ ಶಾಲೆಯ ಆವರಣದಲ್ಲಿ ಗಿಡನೆಟ್ಟು ಬಳಿಕ 10ನೇ ತರಗತಿ ಮಕ್ಕಳೊಂದಿಗೆ ಕೆಲಕಾಲ ಸಂವಾದ ನಡೆಸಿದರು.

ಗುಣಾತ್ಮಕ ಫಲಿತಾಂಶಕ್ಕೆ ಶಿಕ್ಷಕರ ಜೊತೆ ವಿದ್ಯಾರ್ಥಿಗಳು ಸ್ಪಂದಿಸಬೇಕು, ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಈಗಿನಿಂದಲೇ ಸಜ್ಜಾಗಿ ಶಿಕ್ಷಕರ ಮಾರ್ಗದರ್ಶನದೊಂದಿಗೆ. ಕಳೆದ ಬಾರಿಯಂತೆ ಈ ಬಾರಿಯೂ ಶೇಕಡ ನೂರರ ಫಲಿತಾಂಶಕ್ಕೆ ಸಜ್ಜಾಗಿ ಎಂದರು. ಈ ಬಾರಿ ಉತ್ತಮ ಫಲಿತಾಂಶಕ್ಕೆ ಕಾರಣಕರ್ತರಾದ ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರನ್ನು ಇದೆ ವೇಳೆ ಉಪ ನಿರ್ದೇಶಕರು ಶ್ಲಾಘಿಸಿದರು.

ಚಾ.ನಗರದಲ್ಲಿ ಗಮನ ಸೆಳೆದ ಎಸ್‌ಐಆರ್ ಜಾಗೃತಿ ಬೈಕ್ ರ್ಯಾಲಿ



ಚಾಮರಾಜನಗರದಲ್ಲಿ ಹಮ್ಮಿಕೊಳ್ಳಲಾಗಿದ್ದ ಎಸ್‌ಐಆರ್ ಜಾಗೃತಿ ಬೈಕ್ ರ್ಯಾಲಿಗೆ ಚಾಲನೆ ನೀಡಲಾಯಿತು.

ಚಾಮರಾಜನಗರ, ಜು.3– ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಸಲುವಾಗಿ ನಗರದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಬೈಕ್ ರ್ಯಾಲಿ ಗಮನ ಸೆಳೆಯಿತು.

ನಗರದ ಜಿಲ್ಲಾಡಳಿತ ಭವನದ ಆವರಣದಿಂದ ಹೊರಟ ಬೈಕ್ ರ್ಯಾಲಿಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಸಹ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಜಿಲ್ಲಾಡಳಿತ ಭವನದಿಂದ ಆರಂಭಗೊಂಡ ಬೈಕ್ ರ್ಯಾಲಿಯು ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ರಾಮಸಮುದ್ರಕ್ಕೆ ತೆರಳಿ ಅಲ್ಲಿಂದ ನ್ಯಾಯಾಲಯ ರಸ್ತೆ, ಡಾ.ಬಿ.ಆರ್. ಅಂಬೇಡ್ಕರ್ ಭವನ, ಸತ್ತಿ ರಸ್ತೆ, ಜಿಟಿಸಿ ರೆಸಿಡೆನ್ಸಿ, ಸೋಮವಾರ ಪೇಟೆ, ಗುಂಡ್ಲುಪೇಟೆ ವೃತ್ತ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಭುವನೇಶ್ವರಿ ವೃತ್ತ (ಪಚ್ಚಪ್ಪ ವೃತ್ತ) ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನದಲ್ಲಿ ಮುಕ್ತಾಯವಾಯಿತು.

ಈ ವೇಳೆ ಮಾತನಾಡಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯವನ್ನು ಕೈಗೊಳ್ಳಲು ಅಧಿಸೂಚನೆ ಹೊರಡಿಸಿ ವೇಳಾಪಟ್ಟಿ ಪ್ರಕಟಿಸಿದೆ. ಈ ಸಂಬಂಧ ಸ್ವೀಪ್ ಜಾಗೃತಿ ಅಭಿಯಾನ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದು, ಸಾರ್ವಜನಿಕರಿಗೆ ಅರಿವು ಮೂಡಿಸುವ ಸಲುವಾಗಿ ಜಿಲ್ಲಾ, ತಾಲೂಕು ಹಾಗೂ ಗ್ರಾಮಪಂಚಾಯತಿ ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಎಸ್‌ಐಆರ್ ಪ್ರಕ್ರಿಯೆಯು ಎಲ್ಲಾ ಅರ್ಹ ನಾಗರಿಕರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವುದಾಗಿದೆ. ಈ ವಿಶೇಷ ಸಮಗ್ರ ಪರಿಷ್ಕರಣೆಯ ಅವಧಿಯಲ್ಲಿ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವ ಮೂಲಕ ಬಿಎಲ್‌ಒಗಳಿಗೆ ಅಗತ್ಯ ಸಹಕಾರ ನೀಡಬೇಕು ಎಂದು ಜಿ.ಪಂ. ಸಿಇಒ ಮೋನಾ ರೋತ್ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಪಶು ಸಂಗೋಪನಾ ಇಲಾಖೆಯ ಉಪನಿರ್ದೇಶಕ ಮಂಜುನಾಥ್, ನಗರಸಭೆ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ರೂಪ, ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ರೇಣುಕಾಸ್ವಾಮಿ ಕೊಲೆ ಪ್ರಕರಣ

ನಟ ದರ್ಶನ್‌ಗೆ ಮತ್ತೆ ಸುಪ್ರೀಂಕೋರ್ಟ್ ಶಾಕ್; ಇನ್ನೂ 1 ವರ್ಷ ಜೈಲೇ ಗತಿ!

ನವದೆಹಲಿ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್ ಅವರಿಗೆ ಸುಪ್ರೀಂಕೋರ್ಟ್ ಶುಕ್ರವಾರ ಮತ್ತೆ ಶಾಕ್ ನೀಡಿದ್ದು, ಇನ್ನೂ ಒಂದು ವರ್ಷ ಜೈಲಿನಲ್ಲೇ ಕಾಲ ಕಳೆಯುವುದು ಅನಿವಾರ್ಯವಾಗಿದೆ.



ದರ್ಶನ್ ಹಾಗೂ ಇತರ ಆರೋಪಿಗಳಿಗೆ ಜಾಮೀನು ನೀಡಿದ್ದ ಕರ್ನಾಟಕ ಹೈಕೋರ್ಟ್ ಆದೇಶವನ್ನು 2025ರ ಆಗಸ್ಟ್ 14ರಂದು ಸುಪ್ರೀಂಕೋರ್ಟ್ ರದ್ದುಗೊಳಿಸಿತ್ತು.

ನಂತರ ಕಳೆದ ಮೇ 15 ರಂದು ಒಂದು ವರ್ಷದವರೆಗೆ ಜಾಮೀನಿಗೆ ಅರ್ಜಿ ಸಲ್ಲಿಸುವಂತಿಲ್ಲ ಸುಪ್ರೀಂಕೋರ್ಟ್ ಅದೇಶ ನೀಡಿದ್ದು, ಈ ಅದೇಶ ಮರು ಪರಿಶೀಲನೆ ಮಾಡುವಂತೆ ಕೋರಿ ನಟ ದರ್ಶನ್ ಸಲ್ಲಿಸಿದ್ದ ಅರ್ಜಿ ವಜಾ ಆಗಿದೆ. ಖುದ್ದು ಸುಪ್ರೀಂಕೋರ್ಟ್‌ನ ರಿಜಿಸ್ಟರ್ ಅವರೇ ಅರ್ಜಿಯನ್ನ ತಿರಸ್ಕರಿಸಿದ್ದಾರೆ.

ತುರ್ತು ಪರಿಸ್ಥಿತಿಗಳಲ್ಲಿ ಜಾಮೀನು ಕೋರಲು ಅವಕಾಶ ನೀಡುವಂತೆ ಕೋರಿ ಆರೋಪಿ ದರ್ಶನ್ ಮನವಿ ಮಾಡಿದ್ದರು. ಆದರೆ ಇದು ಅರ್ಹವಲ್ಲದ ಅರ್ಜಿ, ವಿಚಾರಣೆಗೆ ಪಟ್ಟಿ ಮಾಡಲು ಸಾಧ್ಯವಿಲ್ಲ ಎಂದು ದರ್ಶನ್ ಪರ ವಕೀಲರಿಗೆ ಮಾಹಿತಿ ನೀಡಿ ಅರ್ಜಿ ತಿರಸ್ಕರಿಸಲಾಗಿದೆ.

ಈ ಹಿಂದೆ, ಪ್ರಕರಣದಲ್ಲಿ 273 ಸಾಕ್ಷಿಗಳ ಪೈಕಿ 15 ಸಾಕ್ಷಿಗಳ ವಿಚಾರಣೆಯಷ್ಟೇ ಮುಗಿದಿದೆ. ಸಾಕ್ಷಿಗಳ ವಿಚಾರಣೆ ವಿಳಂಬ ಆಗುತ್ತಿದೆ. ಇದೇ ರೀತಿಯಾದರೆ ವಿಚಾರಣೆ ಮುಗಿಯಲು ಹಲವು ವರ್ಷ ಬೇಕಾಗುತ್ತದೆ. ಹೀಗಾಗಿ, ಜಾಮೀನು ಮಂಜೂರು ಮಾಡಬೇಕು ಎಂದು ದರ್ಶನ್ ಮನವಿ ಮಾಡಿದ್ದರು. ಆದರೆ ಸುಪ್ರೀಂ ಕೋರ್ಟ್ ದರ್ಶನ್ ಜಾಮೀನು ಅರ್ಜಿಯನ್ನು ವಜಾಗೊಳಿಸಿತ್ತು.

ಕಳೆದ ಮೇ 15 ರಂದು ಒಂದು ವರ್ಷದೊಳಗೆ ವಿಚಾರಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಸೂಚಿಸಿದ್ದ ಸುಪ್ರೀಂ ಕೋರ್ಟ್, ಅಲ್ಲಿಯವರೆಗೆ ಜಾಮೀನು ನೀಡಲು ನಿರಾಕರಿಸಿತ್ತು. ಈ ಆದೇಶದ ಅನ್ವಯ ಮುಂದಿನ ವರ್ಷ ಮೇ 15ರವರೆಗೆ ದರ್ಶನ್ ಜೈಲಿನಲ್ಲಿರುವುದು ಅನಿವಾರ್ಯವಾಗಿದೆ.

WANTED
GRAPHIC DESIGNER CUM OPERATOR FOR CO_2 LASER CUTTING MACHINE
- Creative Designs
- Precision Cutting
- Custom Nameplates & Sign Boards
- Personalized Gifts & Corporate Products

Call : 99459 06787

MUDA SITE FOR SALE
ಜೆ.ಪಿ.ನಗರ ರಿಂಗ್ ರಸ್ತೆ ಹತ್ತಿರ "ನಂಜುಂಡೇಶ್ವರ ಲೇಔಟ್"ನಲ್ಲಿ 30x50 EAST FACE ಸೈಟ್.
Mob: 9886048471

MUDA APPROVED SITE FOR SALE
IPS SRINIVASA NAGAR (Police Layout) 40'x60' W/F Site.
Mob: 9886048471

WANTED
OFFICE ASSISTANT & TELE CALLERS FOR TRUE VENTURES, MYSORE, VIJAYANAGAR 2ND STAGE
7026901111

ಹೊಸ ಮನೆ ಮಾರಾಟಕ್ಕಿದೆ
ವಿಜಯನಗರ ನಾಲ್ಕನೇ ಹಂತದಲ್ಲಿ ಬಸ್ ಡಿಪೋ ಪಕ್ಕ ಪೂರ್ವದಿಕ್ಕು ಬಾಗಿಲು ಡ್ಯುಪ್ಲೆಕ್ಸ್ ಮನೆ
20x30
7676077678

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ, ಹೆಬ್ಬಾಳ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ಸಂಬಳ : 20500 +W/o(8 hrs) ಊಟ ತಿಂಡಿ ಸೌಲಭ್ಯವಿರುತ್ತದೆ.
9880727819
9620667819

SITE FOR SALE
50X80
ROOPANAGAR S/F 30FT ROAD, BRAHMANANDHA SAGARA W/F 60FT ROAD, KUBEERANANDHA SAGAR PHASE 1 S/W CORNER 40FT ROAD
7899723175
6362085198

ತಕ್ಷಣ ಬೇಕಾಗಿದ್ದಾರೆ
ನಂಜನಗೂಡು ಕಲ್ಲಹಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಮತ್ತು ಕಡಕೊಳ T.V.S. ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ವಯೋಮಿತಿ : 50 ವರ್ಷದ ಒಳಗೆ ಸಂಬಳ : 18500/– (26 ದಿನಗಳು 8 hours) ಊಟ ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9620667819

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ಸರಸ್ವತಿಪುರಂ, ಕೆ.ಜಿ.ಕೊಪ್ಪಲು ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ಸಂಬಳ : 23000/– ವಯೋಮಿತಿ : 50 ವರ್ಷದ ಒಳಗೆ, ಊಟ ತಿಂಡಿ ಸೌಲಭ್ಯವಿರುತ್ತದೆ.
9620777819
9620667819

ಟೀಚರ್ಸ್ ಟ್ರೈನಿಂಗ್
ನೀವೂ ಒಬ್ಬ ಟೀಚರ್ ಆಗ ಬೇಕು ಅಲ್ಲವೇ? SSLC ಪಾಸ್ PUC, Degree ಪಾಸ್/ಫೇಲ್! NURSERY TEACHERS TRAINING PRIMARY TEACHERS TRAINING ಟ್ರೈನಿಂಗ್ ನಂತರ ತಕ್ಷಣ ಕೆಲಸ, ಬನ್ನಿ, ಸೇರಿ, ಪಾಸಾಗಿ, ಸಂಪಾದಿಸಿ ನಿಮ್ಮ ವಿದ್ಯಾಭ್ಯಾಸದ ಜೊತೆಗೆ ಈ ಕೋರ್ಸ್ ಸಹಿತ ಮಾಡಬಹುದು, ವಿವರಗಳಿಗೆ watsapp
9113980741

ಬೇಕಾಗಿದ್ದಾರೆ
ಸೀಬಿ ನರಸಿಂಹ ಸ್ವಾಮಿ ಚಿಟ್ಸ್ (ಕ) ಪ್ರೈ.ಲಿ. ತುಳಸಿ ಜ್ಯುವೆಲರ್ಸ್ ಎದುರು, ಅಶೋಕ ರಸ್ತೆ, ಮೈಸೂರು ಮ್ಯಾನೇಜರ್ ಹುದ್ದೆ : 25,000/- ಸಂಬಳ+ ಕಮಿಷನ್+ ಇನ್‌ಸೆಂಟಿವ್ ಅಭಿವೃದ್ಧಿ ಅಧಿಕಾರಿ (D.O): 15,000/– ಸಂಬಳ+ ಕಮಿಷನ್+ಇನ್‌ಸೆಂಟಿವ್. ನಿರುದ್ಯೋಗಿಗಳು, ನಿವೃತ್ತರು, ಇನ್ನಿ ಏಜೆಂಟರುಗಳು, ವ್ಯಾಪಾರಿಗಳು, ಗೃಹಿಣಿಯರು, ಇನ್ಶೂರೆನ್ಸ್ ಪ್ರತಿನಿಧಿಗಳು, ಚೀಟಿ ವ್ಯವಹಾರದಲ್ಲಿ ಫೈನಾನ್ಸ್ ಹಣಕಾಸಿನ ವ್ಯವಹಾರದಲ್ಲಿ ಅನುಭವವಿರುವವರಿಗೆ ಮೊದಲ ಆದ್ಯತೆ. ಸಂದರ್ಶನ ದಿನಾಂಕ 05-07-2026 ಸಮಯ: ಬೆಳಿಗ್ಗೆ 11.30ಕ್ಕೆ
7892303484 / 9483247455

ಅಮೃತಧಾರೆ ವೃದ್ಧಾಶ್ರಮ
(ಸಸ್ಯಾಹಾರಿಗಳಿಗೆ ಮಾತ್ರ)
ವಯಸ್ಸಾದ ಹಾಸಿಗೆ ಹಿಡಿದ ಮತ್ತು ಪಾರ್ಶ್ವವಾಯು ಪೀಡಿತ ವಯೋವೃದ್ಧರನ್ನು ಸುಸಜ್ಜಿತವಾದ ಸಸ್ಯಹಾರಿ ಊಟ, ವಸತಿ, ವೈದ್ಯಕೀಯ ತಪಾಸಣೆ ಹಾಗೂ ನರ್ಸಿಂಗ್ ಸೌಲಭ್ಯಗಳೊಂದಿಗೆ ಮನೆಯಂತೆಯೇ ನೋಡಿಕೊಳ್ಳಲಾಗುವುದು. ಸಂಪರ್ಕಿಸಿ :
7892317304

WANTED
A Reputed International School in Bannur road Mysore, requires :
STAFF NURSE
FEMALE WARDEN
(FOOD AND ACCOMODATION PROVIDED)
Mail id : hr@jirsm.com
988 086 3003
937 939 9998

ಸುವರ್ಣ ಯಾತ್ರೆ
9 ದಿನಗಳು ನೇಪಾಳ ಹಾಗೂ ಅಯೋಧ್ಯ ಪ್ರವಾಸ 04/08/2026
8 ದಿನಗಳ ಗುಜರಾತ್ ಪ್ರವಾಸ 05/08/2026
3 ದಿನಗಳ ಶಿರಡಿ ಪ್ರವಾಸ 07/08/2026
3 ದಿನಗಳ ಪುರಿ ಪ್ರವಾಸ 08/08/2026
9 ದಿನಗಳ ರಾಜಸ್ಥಾನ್ ಪ್ರವಾಸ 24/08/2026
13 ದಿನಗಳ ಚಾರ್ ಧಾಮ್ ಪ್ರವಾಸ 26/08/2026
9019462508, 9008381022

30x40 ಸೈಟು ಮಾರಾಟಕ್ಕಿದೆ
ಕೆ.ಆರ್. ವೃತ್ತದಿಂದ 8 ಕಿ.ಮೀ. ದೇವೇಗೌಡ ವೃತ್ತದಿಂದ 2.5 ಕಿಮಿ. ವಿದ್ಯಾವಿಕಾಸ್ ಕಾಲೇಜಿನಿಂದ 1.5 ಕಿ.ಮೀ., ಬನ್ನೂರು ರಸ್ತೆ, ಮೈಸೂರು
9964923399

30x30 ಮತ್ತು 30x40 ಸೈಟುಗಳು ಮಾರಾಟಕ್ಕಿವೆ
ವರುಣ ಊರಿಗೆ ಹೊಂದಿಕೊಂಡಿದೆ. ರಿಂಗ್ ರಸ್ತೆಯಿಂದ 6 ಕಿ.ಮೀ. ಕೆ.ಆರ್.ವೃತ್ತದಿಂದ 12 ಕಿ.ಮೀ. ಟಿ ನರಸೀಪುರ ರಸ್ತೆ. ಮೈಸೂರು
9964923399

ಬೇಕಾಗಿದ್ದಾರೆ
ಪಿಜಿಯಲ್ಲಿ ಅಡುಗೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
Mob: 9606941327 / 8904148157 / 9880813355

ಬೇಕಾಗಿದ್ದಾರೆ
ಸೆಕ್ಯುರಿಟಿ ಗಾರ್ಡ್‌ಗಳು, Room Boys and House keeping ಬೇಕಾಗಿದ್ದಾರೆ (ಬೋಗಾದಿ, ವಿಜಯ ನಗರ, ಗೋಕುಲಂ, ನಜರ್ ಬಾದ್) ವಿಳಾಸ: ಎಸ್ ಎನ್ ಬಿ ಸೆಕ್ಯುರಿಟಿ ಸರ್ವೀಸ್, ನಜರ್ ಬಾದ್ ಮೈಸೂರು
9380090526
8971104072

ವಿವೇಕಾನಂದ ಸರ್ಕಲ್ ಹತ್ತಿರ ಮನೆ ಮಾರಾಟಕ್ಕಿದೆ
30x50, 20x30
60x40, 30x40
9008711654

Office Boy Required
For an Ayurvedic Medical Shop in Jayanagar, Mysuru. Age: 25-35 years. Qualification: SSLC / PUC / Diploma / ITI. Salary: Based on skills and experience. Contact:
Mob: 96320 20620

SITE FOR SALE
In MUDA Approved Layout. 1640 sft, North facing. Near NPS school. Very good location. Contact
73538 76555

FOR SALE
30x40 Duplex House and Sites For Sale in Srirampura
Sri Vishnu Properties
Mob: 7200172885

Working Women's PG
Only 5 members capacity in new building (Near Star Bucks) Gokulam 2nd Stage. *Contact:*
Mob: 93536 10034

WANTED
ಫರ್ನಿಷಿಂಗ್ ಅಂಗಡಿಯಲ್ಲಿ ಅಕೌಂಟೆಂಟ್ ಕೆಲಸಕ್ಕೆ 1 Year Experience ಇರುವವರು ಬೇಕಾಗಿದ್ದಾರೆ.
Near Ashoka Road.
Mob: 9916514950

WANTED
Marketing executive cum field worker and receptionist,
SLD Excellent Public School, Yalachanahalli, Yelwala
8867499510

ಇಂಡಿಪೆಂಡೆಂಟ್ ಮನೆ ಭೋಗ್ಯಕ್ಕಿದೆ
ಪೂರ್ವದಿಕ್ಕಿನ ಬಾಗಿಲು, ಉತ್ತರದಿಕ್ಕಿನ ರಸ್ತೆ, 2 ಬೆಡ್‌ರೂಂ ಉಳ್ಳ, 30x35 ಅಳತೆಯ ಸೋಲಾರ್ ಸಂಪು, ಮೋಟಾರ್, ಕಾರ್ ಪಾರ್ಕಿಂಗ್ ಉಳ್ಳ ಮನೆ, University ಲೇಔಟ್, ಸಿದ್ದರಾಮಯ್ಯ ಸರ್ಕಲ್ ಹತ್ತಿರ, ಲಿಂಗಾಂಬುಧಿ.
Call : D.D. ರಿಯಲ್ ಎಸ್ಟೇಟ್
9343361444

SITES FOR SALE
Near MIT College Near Mysore Bangalore highway Very good location.
Call 73538 76555

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು, ಟ್ಯಾಂಕ್ ಕ್ಲೀನಿಂಗ್, ಕೊರ್ ಕಟಿಂಗ್, ಸೋಲಾರ್ ಸರ್ವೀಸ್, ಸ್ಲಾಬ್ ಕಟಿಂಗ್, ಗ್ಯಾಸ್ ಲೈನ್, ಪ್ಲಮಿಂಗ್ ವರ್ಕ್
6362150462, 7795749881

NEW GURUKULA INTERNATIONAL SCHOOL
WANTED TEACHERS
PRE.KG (NST TRAINED TEACHERS), PRIMARY TEACHER, (D.ED & B.ED TEACHER) ENGLISH FLUENCY IS MUST, CONTACT NO:
9741875540
[CONTACT ONLY TEACHERS SURROUNDING VIJAYANAGARA, HEBBAL AND MAHADESHWARA BADAVANE]

ಸೈಟು ಮಾರಾಟಕ್ಕಿದೆ
ಉತ್ತರ ದಿಕ್ಕಿನ 30'x40' ಮೈಸೂರು–ಬೆಂಗಳೂರು ಔಟರ್ ರಿಂಗ್ ರೋಡ್ ಹತ್ತಿರ
8217084649

JOB OPENING FOR WOMAN
MNC, AGE GROUP 25 TO 45 YEARS EDUCATION DEGREE/ DIPLOMA, SALARY 15000 TO 18000 INCENTIVE, BONUS, ESI, PF, CONTACT
8050292837

SITE FOR SALE
30'X40' S/F (OPP. TO PARK) VIJAYANAGARA 4TH STAGE, (MANASA SERENE LAYOUT) MYSURU
Contact : 0821-4288355
9845097287 / 8105060384

ಬೇಕಾಗಿದ್ದಾರೆ
ಸೀರೆ ವ್ಯಾಪಾರಕ್ಕಾಗಿ ಮಹಿಳಾ ಸೇಲ್ಸ್ ಅಸಿಸ್ಟೆಂಟ್ ಬೇಕಾಗಿದ್ದಾರೆ (ಗೋಕುಲಂ 1ನೇ ಹಂತ) ಮನೆಯಲ್ಲಿ ಸೀರೆಗಳನ್ನು ತೋರಿಸಲು. ತಾತ್ಕಾಲಿಕ (2 ತಿಂಗಳು ಗಳಿಗೆ ಮಾತ್ರ). ಸಮಯ: ಬೆಳಗ್ಗೆ 11 ರಿಂದ ರಾತ್ರಿ 8 (ಊಟದ ವಿರಾಮವಿದೆ). ಸಂಬಳ: 10,000 – 12,000/ತಿಂಗಳಿಗೆ. ಸಂಪರ್ಕಿಸಿ:
9980309942

ಬೇಕಾಗಿದ್ದಾರೆ
ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ನಂಜನಗೂಡು, ಮೈಸೂರು ಸಿಟಿ, ಹೆಬ್ಬಾಳು ಕೈಗಾರಿಕ ನಗರ, ಮತ್ತು ಹಿನಕಲ್
Contact no: 7829393555/ 9739376831/9886200104

ಕಳೆದಿದೆ
ನಂ 33, 01ನೇ ಹಂತ, 1ನೇ ಕ್ರಾಸ್, ಕೆಸರೆ ಮೈಸೂರು ಇಲ್ಲಿ ವಾಸವಾಗಿರುವ ರತ್ನಮ್ಮ ಕೋಂ ಸಿದ್ದರಾಜು ಅವರ ಮೂಲ ಪತ್ರ ಕೊಳ್ಳೇಗಾಲದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕಳೆದುಹೋಗಿರುತ್ತದೆ. ಸಿಕ್ಕವರು ಸಂಪರ್ಕಿಸಿ :
7204312111

ವಧು ಬೇಕಾಗಿದೆ
SC (Adi Karnataka) ಮೂಲತಃ ಮೈಸೂರಿನವರಾದ 28 ವರ್ಷ ಪ್ರಾಯದ ಹೈದ್ರಾಬಾದ್‌ನಲ್ಲಿ ವಾಸವಿರುವ ಸುಂದರ ಪದವೀಧರ Software ಕೆಲಸದಲ್ಲಿರುವ ಯುವಕನಿಗೆ ಸುಂದರ ಪದವೀಧರೆ ಸುಸಂಸ್ಕೃತ ಕುಟುಂಬ ಹಿನ್ನೆಲೆ ಕೆಲಸದಲ್ಲಿರುವ ಇದೇ ಸಮುದಾಯದ ವಧು ಬೇಕಾಗಿದೆ. ಸಂಪರ್ಕಿಸಿ
9949674388
9845346039

ಅಂಗಡಿ ಮಳಿಗೆ
ಮೈಸೂರಿನ ಹಿನಕಲ್ ಮುಖ್ಯರಸ್ತೆಯಲ್ಲಿ 2 ಮಳಿಗೆಗಳು ಖಾಲಿ ಇದ್ದು ಅಂಗಡಿ ಅಥವಾ ಯಾವುದೇ ರೀತಿಯಾದ ವ್ಯವಹಾರಿಕ ವಹಿವಾಟುಗಳನ್ನು ನಡೆಸಲು ಸೂಕ್ತವಾಗಿದೆ. ಇಚ್ಛೆಯುಳ್ಳವರು ಸಂಪರ್ಕಿಸಿ:
7022077342
9686273724

ಕೈಗಾರಿಕಾ ನಿವೇಶನ ಮಾರಾಟಕ್ಕಿದೆ
ಮೈಸೂರು ವಿಶ್ವೇಶ್ವರ ನಗರ ಕೈಗಾರಿಕಾ ಬಡಾವಣೆಯಲ್ಲಿ 75X60 ಅಡಿ ಒಟ್ಟು 4500 ಚದರ ಅಡಿಯುಳ್ಳ ನಿವೇಶನ ಮಾರಾಟಕ್ಕಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9611515182

WE ARE LOOKING FOR AN EXPERIENCED CHEF TO JOIN OUR TEAM IMMEDIATELY
SKILLS REQUIRED
- SOUTH INDIAN CUISINE
- NORTH INDIAN CUISINE
- NON-VEGETARIAN DISHES
- CHINESE CUISINE
- CAFÉ SPECIALTIES: SNACKS & FAST FOOD

7019470716
9901660898

PRAKRUTHI PROPERTIES
FOR SALE
BANK LOAN UP TO 80%
Future Commercial Sites
30x40, 30x50, 50x80. With 40 ft & 50 ft Road, Opp Park @ New RT Nagar, Near Defence Apartments
95386 90359, 90359 90359

ಅನುಬಂಧ ವೃದ್ಧಾಶ್ರಮ
ಆರೋಗ್ಯ, ಆರೈಕೆಬೇಕಾದ ಹಿರಿಯ ನಾಗರೀಕರಿಗೆ ಹಾಗೂ ಹಾಸಿಗೆ ಹಿಡಿದವರಿಗೆ, ಪಾರ್ಶ್ವವಾಯು ಪೀಡಿತ ವಯೋವೃದ್ಧರನ್ನು ಸುಸಜ್ಜಿತವಾದ ಸಸ್ಯಹಾರಿ ಊಟ, ವಸತಿ, ವೈದ್ಯಕೀಯ ತಪಾಸಣೆ ಹಾಗೂ ನರ್ಸಿಂಗ್ ಸೌಲಭ್ಯಗಳೊಂದಿಗೆ ಮನೆಯಂತೆಯೇ ನೋಡಿಕೊಳ್ಳಲಾಗುವುದು. ಸಂಪರ್ಕಿಸಿ :
9880793910

PRAKRUTHI PROPERTIES
FOR SALE
Bank Loan Available
20x30 | 20x35 | 30x40 | 30x50
Near Rainbow School Bogadi Gaddige Road.
Build your Dream House with Site For Just → Duplex
45L 20x30 2BHK
60L 20x30 3BHK
62L 20x30 4BHK
95386 90359, 90359 90359

ಹೆಸರು ಬದಲಾವಣೆ
ನಂ. 823, ಶ್ರೀ ಶಿರಡಿ ಸಾಯಿಬಾಬಾ ಸರ್ಕಲ್, ರಾಮಕೃಷ್ಣನಗರ, 6ನೇ ಮೇನ್ ರೋಡ್, ಮೈಸೂರು, ಮೈಸೂರು ಜಿಲ್ಲೆ, ಮೈಸೂರು ತಾಲೂಕು ಇಲ್ಲಿ ವಾಸವಾಗಿರುವ ನಾನು ನನ್ನ ಹೆಸರನ್ನು ರಾಜಣ್ಣ ಎಂಬ ಹೆಸರಿನ ಬದಲಾಗಿ ಚಿಕ್ಕರಂಗಯ್ಯ (Chikkarangaiah) ಎಂದು ಬದಲಾಯಿಸಿಕೊಂಡಿರುತ್ತೇನೆ ಎಂದು ನೋಟರಿ ಎಸ್.ವಿ. ನಾಗೇಂದ್ರ ಅವರ ಮುಂದೆ ಪ್ರಮಾಣೀಕರಿಸಿರುತ್ತೇನೆ.
ಸಹಿ/– ಚಿಕ್ಕರಂಗಯ್ಯ



SUNZONE SOLAR SYSTEM
VM Double Road, Kuvempunagar, Mysuru
9845175443

ಸೈಟು ಮಾರಾಟಕ್ಕಿದೆ
ನಿವೇಶನ ಸಂಖ್ಯೆ 26, 30 X 50 ಪೂರ್ವ ನಿವೇಶನ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ರವರ ಸೋಮನಾಥನಗರ ಬಡಾವಣೆಯ ನಿವೇಶನ ಮಾರಾಟಕ್ಕಿದೆ.
9663661460

CCTV Camera Sales & Service & Installation
9880123633

20x30 N/W ಕಾರ್ನರ್ MUDA ಅಪ್ರೂವ್
ಸೈಟು ಮಾರಾಟಕ್ಕಿದೆ
18 ಲಕ್ಷಗಳು
Opp Park ಜಯಪುರದ ಹತ್ತಿರ, ಮೈಸೂರು
9731401898

ಹೊಸ ಮನೆ ಮಾರಾಟಕ್ಕಿದೆ
20'x30' - E/F 3 BHK- 3ft, ಲಲಿತಾದ್ರಿನಗರ(ಬಾಲಾಜಿ ಲೇಔಟ್), Interested visitors contact:
9380599261
7760065890

ಸೈಟ್ ಮಾರಾಟಕ್ಕಿದೆ
ಪೊಲೀಸ್ ಲೇಔಟ್ 2nd stage ಪಕ್ಕ 30x40 East 60 lak... 30x40 East 40, lak nag T Narasipura road
8971936090

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ನಗರದ ಸುತ್ತಮುತ್ತ ಕಾರ್ಖಾನೆಗಳಲ್ಲಿ, ಕಂಪನಿಗಳಲ್ಲಿ, ಸ್ಕೂಲ್‌ಗಳಲ್ಲಿ ಹಾಗೂ ಹಾಸ್ಪಿಟಲ್, ಹೆಬ್ಬಾಳು, ಮೇಟಗಳ್ಳಿ, ವಿದ್ಯಾರಣ್ಯಪುರಂ, ಶ್ರೀರಾಂಪುರ, ದಟ್ಟಗಳ್ಳಿ, ಸಿದ್ಧಾರ್ಥನಗರ, ಟೆರಿಷಿಯನ್ ಕಾಲೇಜ್, ಆಲನಹಳ್ಳಿ, ಶ್ರೀರಂಗಪಟ್ಟಣ ಗಂಜಾಂ ಹೋಟೆಲ್ ಸ್ಥಳಗಳಲ್ಲಿ ಕೆಲಸ ಮಾಡಲು. ಸೆಕ್ಯೂರಿಟಿ ಹೌಸ್‌ಕೀಪಿಂಗ್ ಹಾಗೂ Helperಗಳು ಆಫೀಸ್ ಅಟೆಂಡರ್, Electrical Soldring, ಅನುಭವವುಳ್ಳ ಕೆಲಸಗಾರರು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ 10000 ರಿಂದ 20000, ESI, PF ಸೌಲಭ್ಯ ಸಂಪರ್ಕಿಸಿ :
9611208553
7795367205

ಜಾಗ ಬಾಡಿಗೆಗೆ ಮತ್ತು ನಿವೇಶನ ಮಾರಾಟಕ್ಕಿದೆ
ಮೈಸೂರು ಹುಣಸೂರು ಮುಖ್ಯರಸ್ತೆಯಲ್ಲಿ ಬಿಳಿಕೆರೆ 150x150 - 20,000 Sqft ಖಾಲಿ ಜಾಗ ಬಾಡಿಗೆಗೆ ದೊರೆಯುತ್ತದೆ. ಹೋಟೆಲ್, ಶೋರೂಂ, ವ್ಯಾಪಾರಕ್ಕೆ ಸೂಕ್ತವಾದ ಜಾಗ. ಬಿಳಿಕೆರೆ ಬಸ್ ಸ್ಟ್ಯಾಂಡ್‌ಗೆ ಹತ್ತಿರ, 1700 Sqft. S/E Corner ನಿವೇಶನ ಮಾರಾಟಕ್ಕಿದೆ.
9611539340

ಬೇಕಾಗಿದ್ದಾರೆ
1) ಅನುಭವವುಳ್ಳ ಅಡುಗೆ ಸಹಾಯಕರು (ಗಂಡಸರು)–3, ಸಂಬಳ : 15,000/–
2) ಅನುಭವವುಳ್ಳ ತರಕಾರಿ ಕಟಿಂಗ್ ಮಾಸ್ಟರ್, ಸಂಬಳ : 15,000/–,
ಸ್ಥಳ : ಮೈಸೂರು.
9964242430

MUDA/DTCP ಅಪ್ರೂವ್ಡ್ ಸೈಟ್ಸ್ ಸಿಟಿಗೆ ಕೇವಲ 6-9 K.M
ತಕ್ಷಣ ಮನೆ ಕಟ್ಟಲು, ಅಭಿವೃದ್ಧಿ ಹೊಂದಿದ ನಮ್ಮ ಬಡಾವಣೆಗಳಲ್ಲಿ ಲಭ್ಯವಿದೆ.
20x30 - 32 ಲಕ್ಷ,
30x40 – 54 ರಿಂದ 64 ಲಕ್ಷ
ಸ್ಥಳ : ಟಿ.ಎನ್.ಪುರ ರಸ್ತೆ, ಬನ್ನೂರು ರಸ್ತೆ, ಬೋಗಾದಿ, ಜೆ.ಪಿ.ನಗರ, ಆರ್.ಟಿ.ನಗರ & ವಿಜಯನಗರ 4ನೇ ಹಂತ.
8123075038
Broker excuse, 0% commission

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್– (ಹಿನಕಲ್, ವಿಜಯನಗರ, ಜೆ.ಕೆ.ಟೈರ್ಸ್, ಮೇಟಗಳ್ಳಿ)
2) ಹೌಸ್‌ಕೀಪಿಂಗ್–ಹುಡುಗರು/ ಮಹಿಳೆಯರು(ಹಿನಕಲ್, ವಿಜಯನಗರ, ಬೋಗಾದಿ)
9739166772
9731663856

SITES FOR SALE
Near Vajamangala, T.Narasipura Road & Near Upkar Layout, Hunsur. Contact:
8123387555
7259348777

ಸದ್ಗುರು ಮ್ಯಾರೇಜಸ್
ಮದುವೆ ವಿಳಂಬವಾದಲ್ಲಿ ಪರಿಹಾರ ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ.
9448229184
7899625268

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ ಕ್ಯಾಲಿಬರ್ / ಜೆಎಸ್‌ಎಸ್ 3ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್ ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ, ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

FARM LAND FOR SALE
1 Acre on HD Kote Road 20 kms from Ring Road 2.25 Lk Per Gunta with Clear Document
@ ESSTATE
986762467

ವಧು ಬೇಕಾಗಿದ್ದಾರೆ
ಮಹರ್ಷಿ ವಾಲ್ಮೀಕಿ ನಾಯಕ ಜನಾಂಗದ ಉದ್ಯೋಗಸ್ಥ ವರನಿಗೆ ವಧು ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿ:
8970929190, 7019749800

100% TEAK WOOD
FACTORY FINISH DOORS & WINDOWS
@ FACTORY DEPOT RATES
10 YEARS WARRANTY*
9731591267
9901291267

ಹೊಸ ಚೀಟಿಗಳು ಪ್ರಾರಂಭ
ಸೀಬಿ ನರಸಿಂಹ ಸ್ವಾಮಿ ಚಿಟ್ಸ್ (ಕ) ಪ್ರೈ.ಲಿ.
ತುಳಸಿ ಜ್ಯುವೆಲರ್ಸ್ ಎದುರು, ಅಶೋಕ ರಸ್ತೆ, ಮೈಸೂರು

ಚೀಟಿಯ ಮೊತ್ತ	ತಿಂಗಳು	ತಿಂಗಳು ಕಂತು	3ನೇ ತಿಂಗಳಿನಿಂದ	ಪ್ರವೇಶ ಶುಲ್ಕ
100000	25	4000/–	3000/–	500/–
200000	25	8,000/–	6000/–	500/–
500000	25	20,000/–	15,000/–	500/–
1000000	25	40,000/–	30,000/–	1,000/–
2500000	25	100,000/–	75000/–	2,000/–
500000	50	10,000/–	7500/–	500/–
1000000	50	20,000/–	15,000/–	1000/–
2500000	50	50,000/–	37,500/–	2000/–
1000000	100	10,000/	7,500/–	1000/–
2500000	100	25,000/–	18,750/–	2,000/–

7892303484 / 9483247455

ಬೇಕಾಗಿದ್ದಾರೆ
ಗ್ರೀನ್ ಡಾಟ್ ಟ್ರಸ್ಟ್ ಸಂಸ್ಥೆ, ಮೈಸೂರು, "ನೆಲೆ" ವೃದ್ಧಾಶ್ರಮ ಹಾಗೂ "ಮಾನಸಧಾಮ" ಆಶ್ರಮದಲ್ಲಿ ಅಡುಗೆ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ವೇತನ: ಮಾಸಿಕ ರೂ. 12,000, ಜೊತೆಗೆ ಊಟ, ವಸತಿ ಹಾಗೂ ಪಿಎಫ್ + ಇಎಸ್‌ಐ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
ಡಾ. ಕಾಂತರಾಜು ಸಿ.ಕೆ. 9845058023
ವಿದ್ಯಾ ಕೆ. 9686190004

SITE FOR SALE
Site measuring 12.00 M x 11.55M at Chamundeshwari Nagar, Mysuru (Adjacent to Ravindranath Tagore (R.T. Nagar) Nagar Main Road, Mysore) for sale. *Contact:*
Mob: 92427 02428

WANTED
MBBS Doctor (Retd. Also below 65 years). **ANMs, Pharmacist (D. Pharma)** for Primary Health Centre, Kanoor, Ponnampet taluk, Kodagu District. Contact:
Dr. Kantharaju C.K.
Mob: 9845058023

SITE FOR SALE
30X40 S/F
30X55 N/F
40X60 N/F
Suvarnanagar, Bogadi
9742421313

WANTED TEACHING STAFF
for reputed institution (Experience Preferred) for MATHS AND SOCIAL SCIENCE, EVS
Transport facilities available. Drop your resume through WhatsApp
9980631121

ಜಮೀನು ಮಾರಾಟಕ್ಕಿದೆ
ಮೈಸೂರು–ಬಿಳಿಕೆರೆ–ಕೆ.ಆರ್ ನಗರ ಹೈವೆ ರಸ್ತೆಗೆ ಹೊಂದಿಕೊಂಡಿರುವ 1 ಎಕರೆ ಜಮೀನು ಡಾಂಬರು ರಸ್ತೆಗೆ ಹೊಂದಿಕೊಂಡಿರುವ 20 ಗುಂಟೆ ಜಮೀನು ಶ್ರೀರಾಂಪುರ ರಿಂಗ್ ರಸ್ತೆಯಿಂದ 15 ಕಿಮೀ ಅಹಲ್ಯ ಗ್ರಾಮ ನಿಮಗೆ ಮೈಸೂರಿನ ಸುತ್ತಮುತ್ತ ಜಮೀನು ಹಾಗೂ ಸೈಟು ಬೇಕಾಗಿದ್ದರೆ ಸಂಪರ್ಕಿಸಿ
7411848108

WANTED
Telecalling ಮಾಡಲು ಹುಡುಗಿಯರು ಬೇಕಾಗಿದ್ದಾರೆ
Salary + Incentive
D.D Urs Road
9945077757

ಸೈಟು ಮಾರಾಟಕ್ಕಿದೆ
30x40 S/F 85 ಲಕ್ಷ SBM ಲೇಔಟ್, ಶ್ರೀರಾಂಪುರ, ರಿಂಗ್ ರೋಡ್ ಹತ್ತಿರ,
30x40 N/F, 70ಲಕ್ಷ ವಿಜಯನಗರ 4ನೇ ಹಂತ ಪಕ್ಕ
30x40 E/F 38ಲಕ್ಷ ಸುವರ್ಣ ನಗರ ಪಕ್ಕ, ಮೈಸೂರು
9845765573

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಕೋಟೆಯಲ್ಲಿ ಶ್ರೀ ಚಾಮುಂಡೇಶ್ವರಿ ದೇವಾಲಯ ಲೋಕಾರ್ಪಣೆ

3 ದಿನಗಳ ಕಾಲ ನಡೆದ ವಿವಿಧ ಧಾರ್ಮಿಕ ವಿಧಿ ವಿಧಾನ



ಹೆಚ್.ಡಿ.ಕೋಟೆ, ಜು.3– ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯ 3 ದಿನಗಳ ಕಾಲ ನಡೆದ ವಿವಿಧ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಲೋಕಾರ್ಪಣೆಗೊಂಡಿತು.

ಸುಮಾರು 65 ಲಕ್ಷ ರೂ. ವೆಚ್ಚದಲ್ಲಿ ಪುನರ್ ನಿರ್ಮಾಣಗೊಂಡ ದೇವಾಲಯದಲ್ಲಿ ವಿಗ್ರಹ ಪುನರ್ ಪ್ರತಿಷ್ಠಾಪನೆ, ಕುಂಭಾಭಿಷೇಕ, ಅಷ್ಟಬಂಧ, ಪ್ರಾಣ ಪ್ರತಿಷ್ಠೆ ಹಾಗೂ ನೂತನ ಕಟ್ಟಡ ಲೋಕಾರ್ಪಣೆ ಕಾರ್ಯಕ್ರಮ ಜು.1ರಿಂದ 3ರವರೆಗೆ ವಿಧಿ ವಿಧಾನಗಳೊಂದಿಗೆ ಶ್ರದ್ಧಾಭಕ್ತಿಯಿಂದ ನೆರವೇರಿದವು. ಈ ವೇಳೆ ಸಾವಿರಾರು ಭಕ್ತರು ಅಮ್ಮನವರ ದರ್ಶನ ಪಡೆದು ಪುನೀತರಾದರು.

ಮೊದಲ ದಿನವಾದ ಬುಧವಾರ ಪಟ್ಟಣದ ತಾರಕ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಿಂದ ಮಂಗಳ ವಾದ್ಯಗಳೊಂದಿಗೆ ನೂರಾರು ಮಹಿಳೆಯರು ಕಳಸಗಳಲ್ಲಿ ಗಂಗಾಜಲ ತಂದು ಭವ್ಯ ಮೆರವಣಿಗೆಯ ಮೂಲಕ ದೇವಾಲಯ ಪ್ರವೇಶಿಸಿದರು.



ವೇದಿಕೆ ಕಾರ್ಯಕ್ರಮವನ್ನು ಸೋಮೇಶ್ವರನಾಥ ಸ್ವಾಮೀಜಿ ಉದ್ಘಾಟಿಸಿದರು.

ನಂತರ ಗಣಪತಿ ಹೋಮ ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳು ಆರಂಭಗೊಂಡವು.

ಮಹೋತ್ಸವದ ಪ್ರಮುಖ ದಿನವಾದ ಗುರುವಾರ ಬ್ರಹ್ಮ ಮುಹೂರ್ತದಲ್ಲಿ ಪೀಠಪೂಜೆ, ನವರತ್ನನ್ಯಾಸ, ವಿಮಾನ ಕಳಸ ಸ್ಥಾಪನೆ, ಅಮ್ಮನವರ ಪ್ರತಿಷ್ಠಾಪನೆ, ಅಷ್ಟಬಂಧ, ಪ್ರಾಣ ಪ್ರತಿಷ್ಠೆ ಸೇರಿದಂತೆ ವಿವಿಧ ಆಗಮೋಕ್ತ ವಿಧಿ ವಿಧಾನಗಳು ನೆರವೇರಿದವು. ಬಳಿಕ ಕುಂಭಾಭಿಷೇಕ, ಮಹಾಮಂಗಳಾರತಿ ಹಾಗೂ ವಿಶೇಷ ಪೂಜೆಗಳು ನಡೆದವು. ಪೂಜಾ ಕಾರ್ಯಕ್ರಮ ನಂತರ ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು.

ಶುಕ್ರವಾರ ಗೋಪುರದ ಕಳಸ ಪ್ರತಿಷ್ಠಾಪಿಸಿ ಆಶೀರ್ವಚನ ನೀಡಿ ಮಾತನಾಡಿದ ಆದಿಚುಂಚನಗಿರಿ ಮಠದ ಮೈಸೂರು ಶಾಖೆ ಸೋಮೇಶ್ವರನಾಥ ಸ್ವಾಮೀಜಿ, ದೇವಾಲಯಗಳು ಸಮಾಜದಲ್ಲಿ ಭಾವೈಕ್ಯತೆ, ಸೌಹಾರ್ದತೆ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಬೆಳೆಸುವ ಪವಿತ್ರ ಕೇಂದ್ರಗಳಾಗಿವೆ ಎಂದು ಹೇಳಿದರು.

ದೇವರು ಮನುಷ್ಯನಿಗೆ ಬದುಕಲು ಅಗತ್ಯವಾದ ಅನ್ನ, ನೀರು, ಗಾಳಿ, ಉತ್ತಮ ಪರಿಸರ ಹಾಗೂ ನೆಲೆಯೂರು ಭೂಮಿ ಕರುಣಿಸಿದ್ದಾನೆ. ಆತನ ಈ ಅಮೂಲ್ಯ ಕೊಡುಗೆಗಳಿಗೆ ಕೃತಜ್ಞತೆಯ ಸಂಕೇತವಾಗಿ ದೇವಾಲಯಗಳನ್ನು ನಿರ್ಮಿಸಿ, ಭಕ್ತಿ ಸಮರ್ಪಣೆ ಮಾಡುವುದು ಭಾರತೀಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯಾಗಿದೆ. ಈ ನೂತನ ದೇವಸ್ಥಾನ ಭಕ್ತಿ, ಸೇವೆ ಹಾಗೂ ಸಮರ್ಪಣೆಯ ಪ್ರತೀಕವಾಗಿ ಮುಂದಿನ ಪೀಳಿಗೆಗೂ ಮಾರ್ಗದರ್ಶಿಯಾಗಲಿ ಎಂದು ಆಶಿಸಿದರು.

ಸುತ್ತೂರು ಶ್ರೀವಿರಾತ್ರಿ ದೇಶಿಕೇಂದ್ರ ಸ್ವಾಮೀಜಿ ನೂತನ ದೇವಸ್ಥಾನ ಲೋಕಾರ್ಪಣೆಗೊಳಿಸಿದರು. ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಭಕ್ತಿಗೀತೆ ಗಾಯನ, ನೃತ್ಯ ರೂಪಕ ಹಾಗೂ ಪೌರಾಣಿಕ ನಾಟಕ ಪ್ರದರ್ಶನಗಳು ಭಕ್ತರ ಮೆಚ್ಚುಗೆಗೆ ಪಾತ್ರವಾದವು.

ಮಾಜಿ ಸಚಿವ ಎಂ.ಶಿವಣ್ಣ, ಮಾಜಿ ಶಾಸಕ ಚಿಕ್ಕಣ್ಣ, ಶಾಸಕ ಅನಿಲ್ ಚಿಕ್ಕಮಾದು ಪತ್ನಿ ಸೌಮ್ಯ, ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ನಟರಾಜು, ಗೌರವಾಧ್ಯಕ್ಷ ಎಂ.ಸಿ.ದೊಡ್ಡನಾಯಕ, ಖಜಾಂಚಿ ಸಿ.ಎನ್.ನಾಗಣ್ಣ, ಉಪಾಧ್ಯಕ್ಷ ಆರ್.ಪಿ.ವೀರಪ್ಪ, ನಿರ್ದೇಶಕರಾದ ಆರ್.ರಾಮಯ್ಯ, ಶ್ರೀಕಾಂತ್, ಹೆಚ್.ಕೆ.ಪ್ರಕಾಶ್, ಹೆಚ್.ಸಿ.ಮಂಜುನಾಥ್, ಲಕ್ಷ್ಮಣನಾಯಕ, ರಮೇಶ್, ನಾಗೇಗೌಡ, ಪುರಸಭೆ ಮುಖ್ಯಾಧಿಕಾರಿ ಸುರೇಶ್, ಮುಖಂಡರಾದ ಸಿ.ಎನ್.ನರಸಿಂಹೇಗೌಡ, ಕೃಷ್ಣ, ಕನ್ನಡ ಪ್ರಮೋದ, ವಿನಯ್ ಭಜರಂಗಿ, ಶಿವರಾಜಪ್ಪ ಮತ್ತಿತರರಿದ್ದರು.

ಹಾಡಹಗಲೇ ಹುಲಿ ದಾಳಿಗೆ ಹಸು ಬಲಿ



ಹುಲಿ ದಾಳಿಗೆ ಹಸು ಸಾವನ್ನಪ್ಪಿರುವುದು.

ಹನಗೋಡು, ಜು.3– ಹಾಡಹಗಲೇ ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ಶುಕ್ರವಾರ ಗುರುಪುರ ಹತ್ತಿರದ ವಾರಂಜಿ ಬಳಿ ನಡೆದಿದೆ.

ಇಲ್ಲಿನ ಹೊಲೀಸ್ ರವಿ ಅವರಿಗೆ ಸೇರಿದ ಹಸು ಬಲಿಯಾಗಿರುವುದು. ರವಿ ಅವರು ತಮ್ಮ ತೋಟದಲ್ಲಿ ರಾಸುಗಳನ್ನು ಮೇಯಲು ಕಟ್ಟಿ ಹಾಕಿದ್ದರು. ಆದರೆ ಮಧ್ಯಾಹ್ನದ ವೇಳೆಗೆ ಹುಲಿ ಹಸು ಮೇಲೆ ದಾಳಿ ನಡೆಸಿ ಕೊಂದು ಹಾಕಿ ಪಕ್ಕದ ಪ್ಲಾಂಟೇಶನ್‌ನೊಳಗೆ ಎಳೆದೊಯ್ದು ಅರೆಬರೆ ತಿಂದು ಹಾಕಿದೆ. ಈ ವೇಳೆ ಹುಲಿ ನೋಡಿ ಗಾಬರಿಗೊಂಡ ಉಳಿದ ಜಾನುವಾರುಗಳ ಕೂಗಾಟ ಕೇಳಿ ಅಕ್ಕಪಕ್ಕದ ಜಮೀನಿನಲ್ಲಿದ್ದ ರೈತರು ಸ್ಥಳಕ್ಕಾಮಿಸುತ್ತಿದ್ದಂತೆಯೇ ಹುಲಿ ಪರಾರಿಯಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪ್ರಾದೇಶಿಕ ಅರಣ್ಯ ವಿಭಾಗದ ಡಿಆರ್‌ಎಫ್ಓ ದಿವಾಕರ್, ಬೀಟ್ ಫಾರೆಸ್ಟರ್ ಮಂಜುನಾಥ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದರು. ಬಳಿಕ ಆರ್‌ಎಫ್ಓ ಸಂತೋಷ್ ಹೂಗಾರ್ ಮಾತನಾಡಿ, ಹುಲಿ ಚಲನವಲನ ಪತ್ತೆಗೆ ಸುತ್ತಮುತ್ತಲ ಪ್ರದೇಶದಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿದೆ ಎಂದು ತಿಳಿಸಿದರು.

ಅಪಘಾತದಲ್ಲಿ ಗಾಯಗೊಂಡಿದ್ದ ಮಹಿಳೆ ಸಾವು



ಹುಣಸೂರು, ಜು.3– ಇತ್ತೀಚೆಗೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಮಹಿಳೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.

ನಗರದ ದಾವಣೆ ಬೀದಿ ನಿವಾಸಿ ಸಿದ್ದಶೆಟ್ಟಿ ಅವರ ಪತ್ನಿ ಕಲಾವತಿ(56) ಸಾವನ್ನಪ್ಪಿದವರು. ಈಕೆ ಜೂ.28ರಂದು ತಮ್ಮ ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ತನ್ನ ಪತಿಯೊಂದಿಗೆ ಟಿವಿಎಸ್ ಮೊಪೆಡ್‌ನಲ್ಲಿ ಮನೆಗೆ ಬರುತ್ತಿದ್ದ ವೇಳೆ ವೇಗವಾಗಿ ಬಂದ ಟ್ರ್ಯಾಕ್ಟರ್ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಕೆಳಗೆ ಬಿದ್ದು ತೀವ್ರ ಗಾಯಗೊಂಡಿದ್ದರು. ತಕ್ಷಣ ಕಲಾವತಿ ಅವರಿಗೆ ಹುಣಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಜೆಎಸ್ಎಸ್ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.

ಕಣ್ಣು ದಾನ: ಮೃತರ ಕುಟುಂಬದವರು ಕಲಾವತಿಯವರ ಕಣ್ಣು ದಾನ ಮಾಡುವ ಮೂಲಕ ಮತ್ತೊಬ್ಬರ ಬಾಳಿಗೆ ಬೆಳಕಾಗಿದ್ದಾರೆ.

ಕಡಕೊಳ: ಸಾರ್ವಜನಿಕರ ಅಹವಾಲು ಸ್ವೀಕಾರ ಸಭೆ



ಸಭೆಯಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿದರು.

ಮೈಸೂರು, ಜು.3– ಮೈಸೂರು ತಾಲೂಕು ಸೇರಿದಂತೆ ವಿವಿಧೆಡೆ ಅಕ್ರಮ ಗಾಂಜಾ ಮಾರಾಟಕ್ಕೆ ಕಡಿವಾಣ ಹಾಕಬೇಕು. ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟ ತಡೆಯಬೇಕು. ಬಾಲ್ಯ ವಿವಾಹಕ್ಕೆ ಬ್ರೇಕ್ ಹಾಕಬೇಕು. ಮೈಸೂರು ನಗರ ಸುತ್ತಲೂ ಹಾಗೂ ಹೊರವಲಯ ರಿಂಗ್ ರಸ್ತೆ ಸರ್ಕಲ್‌ಗಳಲ್ಲಿ ಕಡಕೊಳ ಗ್ರಾಮದಲ್ಲಿ ಟ್ರಾಫಿಕ್ ಸಮಸ್ಯೆಗೆ ಮುಕ್ತಿ ನೀಡಬೇಕು ಈಗೆ ಹತ್ತು ಹಲವಾರು ದೂರುಗಳು ಸಾರ್ವಜನಿಕರಿಂದ ಕೇಳಿ ಬಂದವು.

ತಾಲೂಕಿನ ಜಯಪುರ ಹೋಬಳಿ ಕಡಕೊಳ ಗ್ರಾಮದ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರ ನೇತೃತ್ವದಲ್ಲಿ ನಡೆದ ಸಾರ್ವಜನಿಕರ ಅಹವಾಲು ಸ್ವೀಕಾರ ಸಭೆಯಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಪೊಲೀಸ್ ಅಧಿಕಾರಿಗಳ ಮುಂದೆ ಹೇಳಿಕೊಂಡು, ಸಮಸ್ಯೆ ಇತ್ಯರ್ಥಕ್ಕೆ ಮನವಿ ಮಾಡಿಕೊಂಡರು.

ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಸಾರ್ವಜನಿಕರು ನೀಡಿರುವ ಅಹವಾಲುಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲಾಗುವುದು. ಸಾರ್ವಜನಿಕರೊಂದಿಗೆ ಪೊಲೀಸರು ಜನಸ್ನೇಹಿಯಾಗಿ ಕಾರ್ಯ ನಿರ್ವಹಣೆಗೆ ಒತ್ತು ನೀಡಿದ್ದು, ಅಪರಾಧ ತಡೆಗಟ್ಟಲು ಸಾರ್ವಜನಿಕರು ಪೊಲೀಸರಿಗೆ ಅಗತ್ಯ ಮಾಹಿತಿ ನೀಡಬೇಕು. ಪೊಲೀಸರು ತಮ್ಮ ಠಾಣಾ ಸರಹದ್ದು ವ್ಯಾಪ್ತಿಯಲ್ಲಿ ಗಸ್ತು ಹೆಚ್ಚು ಮಾಡಬೇಕು. ಸಾರ್ವಜನಿಕರು ರಸ್ತೆ ಸುರಕ್ಷತಾ ನಿಯಮಗಳನ್ನು ತಪ್ಪದೇ ಪಾಲಿಸಬೇಕು. ವಾಹನ ಮಾಲೀಕರು ದಂಡಗಳನ್ನು ಪಾವತಿಸಬೇಕು. ಶೇ.50 ರಿಯಾಯಿತಿ ನೀಡಿರುವ ಉಪಯೋಗ ಪಡೆದುಕೊಳ್ಳಬೇಕು ಎಂದರು.

ಸಭೆಯಲ್ಲಿ ಡಿವೈಎಸ್ಪಿ ರಾಜಣ್ಣ, ಸಿಪಿಐ ಜಯಪ್ರಕಾಶ್, ಮೈಸೂರು ಸೌತ್ ಇನ್ಸ್‌ಪೆಕ್ಟರ್ ಸುನೀಲ್, ಜಯಪುರ ಠಾಣೆ ಎಸ್ಐ ಪ್ರಕಾಶ್ ಯತ್ತಿನಮನಿ, ವರುಣ ಠಾಣೆ ಎಸ್ಐ ಜಗದೀಶ್ ಧೂಳ್‌ಶೆಟ್ಟಿ, ಇಲವಾಲ ಠಾಣಾ ಎಸ್ಐ ಮಹೇಶ್ ಕುಮಾರ್, ಜಯಪುರ ಹೋಬಳಿ ನಾಡಕಚೇರಿ ಉಪ ತಹಸೀಲ್ದಾರ್ ಮಂಜುನಾಥ್ ಹಾಗೂ ವಿವಿಧ ಗ್ರಾಮಗಳ ಎಲ್ಲಾ ಸಮುದಾಯದ ಪ್ರಮುಖ ಮುಖಂಡರು ಹಾಜರಿದ್ದರು.

ಶ್ರೀಕಂಠೇಶ್ವರ ದೇವಾಲಯ ವ್ಯವಸ್ಥಾಪನಾ ಸಮಿತಿ ಚುನಾವಣೆ

ನೂತನ ಅಧ್ಯಕ್ಷರಾಗಿ ಬಸವೇಗೌಡ ಅವಿರೋಧ ಆಯ್ಕೆ

ನಂಜನಗೂಡು, ಜು.3– ಶ್ರೀಕಂಠೇಶ್ವರ ದೇವಾಲಯ ವ್ಯವಸ್ಥಾಪನಾ ಸಮಿತಿ ನೂತನ ಅಧ್ಯಕ್ಷರಾಗಿ ಚಿನ್ನದಗುಡಿ ಹುಂಡಿ ಬಸವೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶ್ರೀಕಂಠೇಶ್ವರ ದೇವಾಲಯದ ಆಡಳಿತ ಕಚೇರಿಯಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಸವೇಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ, ದೇವಾಲಯದ ಕಾರ್ಯ ನಿರ್ವಹಣಾಧಿಕಾರಿ ಸಿ.ಜೆ.ಕೃಷ್ಣ ಅವಿರೋಧ ಆಯ್ಕೆ ಘೋಷಿಸಿದರು.



ನೂತನ ಅಧ್ಯಕ್ಷ ಬಸವೇಗೌಡ ಅವರನ್ನು ಮುಖಂಡರು ಸನ್ಮಾನಿಸಿದರು.

ನೂತನ ಅಧ್ಯಕ್ಷ ಬಸವೇಗೌಡ ಮಾತನಾಡಿ, 'ಇಡೀ ದೇಶದಲ್ಲೇ ಅರ್ಚಕನೇ ಚಿಕಿತ್ಸೆ ನೀಡುವ ದೇವಾಲಯ ಮತ್ತು ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ಮಾತ್ರ 6 ಕಾಲದಲ್ಲಿ ಪೂಜೆಯಾಗುತ್ತದೆ. ಅದರಿಂದ ಶ್ರೀಕಂಠೇಶ್ವರ ದೇವಾಲಯ ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದಿದೆ. ಈ ದೇವಾಲಯಕ್ಕೆ ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಅನೇಕ ಭಕ್ತರು ಆಗಮಿಸುತ್ತಾರೆ. ಹೀಗಾಗಿ ದೇವಾಲಯದಲ್ಲಿ ಕೊರತೆ ಇರುವ ಮೂಲ ಸೌಕರ್ಯ ಒದಗಿಸುವ ಸಲುವಾಗಿ ದೇವಾಲಯದ ಆವರಣದಲ್ಲಿ ಹೆಚ್ಚುವರಿ ಶೌಚಾಲಯಗಳನ್ನು ನಿರ್ಮಿಸಲು ಕ್ರಮ ವಹಿಸಲಾಗುವುದು. ಜೊತೆಗೆ ಶಾಸಕ ದರ್ಶನ್ ಧ್ರುವನಾರಾಯಣ್, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್ ಅವರ ಸಹಕಾರ ಪಡೆದು ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿರುವ ದೇವಾಲಯದ ಸ್ವಾಗತ ಕಮಾನು ನಿರ್ಮಾಣ ಮತ್ತು ಅರ್ಧಕ್ಕೆ ನಿಂತಿರುವ ಬೆಳ್ಳಿರಥ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಿ ಭಕ್ತರಿಗೆ ಅನುಕೂಲ ಮಾಡಿಕೊಡಲು ಮೊದಲ ಆದ್ಯತೆ ನೀಡುತ್ತೇನೆ. ಜೊತೆಗೆ ನನ್ನ ಆಯ್ಕೆಗೆ ಸಹಕಾರ ನೀಡಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ಶಾಸಕ ದರ್ಶನ್ ಧ್ರುವನಾರಾಯಣ್ ಅವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಈ ವೇಳೆ ದೇವಾಲಯ ವ್ಯವಸ್ಥಾಪನಾ ಸಮಿತಿ ಸದಸ್ಯರಾದ ಗೋವಿಂದರಾಜು, ಶ್ರೀಧರ್, ಗೋಪಾಲಕೃಷ್ಣ, ಹೆಜ್ಜಿಗೆ ಕೃಷ್ಣ, ನಂಜಮಣಿ, ಮಾಜಿ ದೇವಾಲಯ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಇಂಧನ್ ಬಾಬು, ಮುಖಂಡರಾದ ಬುಲೆಟ್ ಮಹದೇವಪ್ಪ, ಎನ್.ಟಿ.ಗಿರೀಶ್, ಮುರುಗೇಶ್, ಶಿವಬಸಪ್ಪ, ಕುರುಬರ ಸಂಘದ ಮಾಜಿ ಅಧ್ಯಕ್ಷ ಕೆಂಪಣ್ಣ, ಕೆಂಪಿಸಿದ್ದನ ಹುಂಡಿ ಗ್ರಾಪಂ ಮಾಜಿ ಅಧ್ಯಕ್ಷ ರವಿ, ಗ್ರಾಪಂ ಮಾಜಿ ಸದಸ್ಯ ಶಿವಮೂರ್ತಿ, ಜಿಪಂ ಮಾಜಿ ಸದಸ್ಯ ಚೋಳರಾಜು, ದೇವಾಲಯದ ಸಿಬ್ಬಂದಿ ಹಲವರಿದ್ದರು.

ಮಕ್ಕಳಿಗೆ ನೋಟ್‌ಬುಕ್, ಬ್ಯಾಗ್ ವಿತರಣೆ



ಮಕ್ಕಳಿಗೆ ನೋಟ್‌ಬುಕ್, ಲೇಖನ ಸಾಮಾಗ್ರಿ ವಿತರಿಸಲಾಯಿತು.

ತಿ.ನರಸೀಪುರ, ಜು.3– ಮೊಬೈಲ್ ಮೋಹ ಮಕ್ಕಳನ್ನು ಆಕರ್ಷಿಸಿ ಹಾಳು ಮಾಡುತ್ತಿರುವುದರಿಂದ ಪೋಷಕರು ಸಾಧ್ಯವಾದಷ್ಟು ಮಕ್ಕಳನ್ನು ಮೊಬೈಲ್‌ನಿಂದ ದೂರವಿಡಬೇಕು ಎಂದು ಕರ್ನಾಟಕ ಗ್ರಾಮೀಣ ಫೌಂಡೇಶನ್ ಅಧ್ಯಕ್ಷ ಶಂಭುದೇವನಪುರ ಎನ್.ಮರಿಸ್ವಾಮಿ ತಿಳಿಸಿದರು.

ತಾಲೂಕಿನ ಶಂಭುದೇವನಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕರ್ನಾಟಕ ಗ್ರಾಮೀಣ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಶಾಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕ, ಲೇಖನಿ ಸಾಮಗ್ರಿಗಳು ಹಾಗೂ ಬ್ಯಾಗ್‌ಗಳ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳಲ್ಲಿ ದೃಷ್ಟಿ ದೋಷ, ಶ್ರವಣ ಗ್ರಹಿಕೆ ಸಾಮರ್ಥ್ಯ ಕ್ಷೀಣಿಸಿಕೆ ಹಾಗೂ ಮಾನಸಿಕ ಖಿನ್ನತೆ ಹೆಚ್ಚಾಗುವುದರಿಂದ ಮಕ್ಕಳನ್ನು ಮೊಬೈಲ್‌ನಿಂದ ದೂರವಿಡಬೇಕು ಎಂದರು.

ಖಜಾಂಚಿ ಪೂಜಿತ್ ಮೆಡಿಕಲ್ಸ್ ಕುಮಾರ್ ಮಾತನಾಡಿದರು. ಟ್ರಸ್ಟಿಗಳಾದ ಸತೀಶ್, ಉದ್ಯಮಿ ನಿಂಗರಾಜು, ಓಂ ಗುರು ಹಾರ್ಡ್‌ವೇರ್ ಶಿವಣ್ಣ ಸಿದ್ದರಾಜು, ವನಜಾಕ್ಷಿ ಮಲ್ಲು, ಮಲ್ಲಿಕಾ ಮರಿಸ್ವಾಮಿ, ಅಮೂಲ್ಯ ಆರ್ಥಿಕ ಸಾಕ್ಷರತೆ ಕೇಂದ್ರ ವ್ಯವಸ್ಥಾಪಕ ರಮೇಶ್ ರಾವ್, ಜೀವನ್, ಗ್ರಾಮದ ಶಿಕ್ಷಕ ಗುರುಸ್ವಾಮಿ, ಸಹಶಿಕ್ಷಕಿ ನಿಂಗಮಣಿ, ಅಂಗನವಾಡಿ ಶಿಕ್ಷಕಿ ಸುನಂದ ಮತ್ತು ಮಕ್ಕಳು ಇತರರಿದ್ದರು.

ಮೂರನೇ ಪುಟದಿಂದ

ಖಾಸಗಿ ವ್ಯಕ್ತಿಯಿಂದ 'ಸರ್ಕಾರಿ' ದರ್ಬಾರ್

ಶ್ರೀರಂಗಪಟ್ಟಣ ತಾಲೂಕು, ಮಹದೇವಪುರ ಗ್ರಾಮ ವ್ಯಾಪ್ತಿಯ ಸರ್ಕಾರಿ ಭೂಮಿ ಕಬಳಿಕೆಯಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆಂದು ವ್ಯಕ್ತಿಯೊಬ್ಬರು ದೂರು ಸಲ್ಲಿಸಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ನೋಟೀಸ್ ನೀಡಲಾಗಿತ್ತು. ಪರಿಶೀಲನೆ ವೇಳೆ ಅಕ್ರಮ ನಡೆಯುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದಾಗ ಶೋಧನಾ ವಾರೆಂಟ್ ಜಾರಿ ಮಾಡಿದೆ. ನಾಲ್ಕು ತಂಡ ಮಾಡಿ ತಹಶೀಲ್ದಾರ್, ಎಡಿಎಲ್ಆರ್, ಎಸಿ, ಮಹದೇವಪುರ ಗ್ರಾಮ ಪಂಚಾಯ್ತಿಯಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಯಿತು. ಎಡಿಎಲ್ಆರ್ ಕಚೇರಿಗೆ ನಮ್ಮ ಅಧಿಕಾರಿಗಳು ಹೋದಾಗ ನಿತಿನ್ ಎಂಬ ಖಾಸಗಿ ವ್ಯಕ್ತಿಯನ್ನು ಎಡಿಎಲ್ಆರ್ ಮಹಮ್ಮದ್ ಹುಸೇನ್ ನೇಮಿಸಿಕೊಂಡು ಸರ್ಕಾರಿ ದಾಖಲೆಗಳನ್ನೆಲ್ಲಾ ಅವರಿಗೆ ಕೊಟ್ಟಿರುವುದು ಕಂಡುಬಂದಿದೆ. ಅವರಿಬ್ಬರೂ ಒಂದೇ ಕಡೆ ವಾಸವಿದ್ದು, ಮನೆಯಲ್ಲಿ 1.40 ಲಕ್ಷ ಹಣ ಸಿಕ್ಕಿದೆ. ಬ್ಯಾಂಕ್‌ನಲ್ಲಿ ಲಕ್ಷಾಂತರ ರೂ. ವ್ಯವಹಾರವಾಗಿದೆ. ಬೇರೆ ತಾಲೂಕು ತಹಶೀಲ್ದಾರ್‌ಗಳ ಸೀಲ್‌ಗಳು ಸಿಕ್ಕಿವೆ. ಸ್ಥಳೀಯ ಪೊಲೀಸರಿಗೆ ದೂರು ನೀಡಿದ ಬಳಿಕ ಅವರು ಪ್ರಕರಣ ದಾಖಲಿಸಿಕೊಂಡು 9 ಮಂದಿಯನ್ನು ಬಂಧಿಸಿದ್ದು, ಎಡಿಎಲ್ಆರ್ ಮಹಮ್ಮದ್ ಹುಸೇನ್ ತಲೆಮರೆಸಿಕೊಂಡಿದ್ದಾನೆ. ಪ್ರಕರಣ ಸಂಬಂಧ ನಾಲ್ಕೂ ಕಚೇರಿಗಳಲ್ಲಿ ಶೋಧನಾ ಕಾರ್ಯ ಮುಂದುವರೆದಿದೆ. –ನ್ಯಾ.ಬಿ.ವೀರಪ್ಪ, ಉಪಲೋಕಾಯುಕ್ತರು

ಇವರಲ್ಲಿ ಎಡಿಎಲ್ಆರ್ ಮಹಮದ್ ಹುಸೇನ್ ತಲೆಮರೆಸಿಕೊಂಡಿದ್ದು, ಉಳಿದವರನ್ನು ಬಂಧಿಸಿ, ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕಚೇರಿಯೇ ನಿತಿನ್ ಕೈಯ್ಯಲ್ಲಿ: ಶ್ರೀರಂಗಪಟ್ಟಣ ಎಡಿಎಲ್ಆರ್ ಕಚೇರಿ ಕಾರ್ಯನಿರ್ವಹಣೆಯನ್ನು ಬಹುತೇಕ ಖಾಸಗಿ ವ್ಯಕ್ತಿ ನಿತಿನ್ ನಿರ್ವಹಿಸುತ್ತಿದ್ದ. ಸರ್ವೆ ಸೂಪರ್‌ವೈಸರ್ ಯೋಗರಾಜ್ ಹಾಗೂ ಈ ಏಳು ಮಂದಿ ಭೂಮಾಪಕರು ತಾವು ಬಳಸುವ ಮೋಜಿಣಿ ತಂತ್ರಾಂಶದ ಬಳಕೆದಾರರ ಐಡಿ(ಯೂಸರ್‌ನೇಮ್) ಮತ್ತು ಪಾಸ್‌ವರ್ಡ್ ಹಾಗೂ ತಮ್ಮ ಮೊಬೈಲ್‌ಗೆ ಬರುವ ಓಟಿಪಿಯನ್ನು ನಿತಿನ್‌ಗೆ ನೀಡಿ, ಆತನಿಂದಲೇ ಅನಧಿಕೃತವಾಗಿ ಆಕಾರ್‌ಬಂದ್‌ನ್ನು ಮೋಜಿಣಿ ತಂತ್ರಾಂಶದಲ್ಲಿ ಡಿಜಿಟಲೀಕರಣ ಮಾಡಿಸುತ್ತಿದ್ದರು. ಇನ್ನು ಈತನಿಗೆ ಎಡಿಎಲ್ಆರ್ ಸೇರಿದಂತೆ ಈ ಎಲ್ಲಾ ಅಧಿಕಾರಿಗಳು ಸೇರಿಕೊಂಡು ಮಾಸಿಕ 15 ಸಾವಿರ ವೇತನವನ್ನೂ ನೀಡುತ್ತಿದ್ದರು ಎಂಬುದು ಲೋಕಾಯುಕ್ತರ ವಿಚಾರಣೆಯಲ್ಲಿ ಬೆಳಕಿಗೆ ಬಂದಿದೆ.

ವಿವಿಧ ಅಧಿಕಾರಿಗಳ ಮೊಹರು ಪತ್ತೆ: ನಿತಿನ್ ಪ್ರೇಮಾನಂದ ಮಹಾಲೆ ಮತ್ತು ಎಡಿಎಲ್ಆರ್ ಮಹಮದ್ ಹುಸೇನ್ ವಾಸವಿದ್ದ ಮೈಸೂರು ಮನೆಯಲ್ಲಿ ಶಂಕರ್ ಭೂಮಾಪಕರು, ಹುಣಸೂರು ತಾಲೂಕು ಕಚೇರಿ ಪರ್ಯಾವೇಕ್ಷಕರ ಸಹಿವುಳ್ಳ ಎಲ್.ಆರ್ ಟಿಪ್ಪಣಿ ಪುಸ್ತಕದ ದಾಖಲೆಯನ್ನು ಸೃಷ್ಟಿಸಿ, ಇಟ್ಟುಕೊಂಡಿರುವುದು ಕಂಡುಬಂದಿದೆ. ಅಲ್ಲದೆ ಹಾಸನ ಜಿಲ್ಲೆ ಸಕಲೇಶಪುರ ತಾಲೂಕು ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ ಅಧೀಕ್ಷಕರು (ಕಾ.ನಿ), ಶಂಕರ ಭೂಮಾಪಕರು, ಭೂಮಾಪಕರಾದ ಕೆ.ಎನ್.ರಮೇಶ್, ಕೆ.ಎಸ್.ದೇವರಾಜ್, ಡಿ.ಎಸ್.ಗಿರೀಶ್, ಹುಣಸೂರು ತಾಲೂಕು ಕಚೇರಿ ಪರ್ಯಾವೇಕ್ಷಕರು, ಕೋಲಾರ ಜಿಲ್ಲೆ ಮುಳುಬಾಗಿಲು ತಾಲೂಕು ಭೂಮಾಪಕರು, ಸಕಲೇಶಪುರ ತಾಲೂಕು ಭೂಮಾಪನ ವಿಭಾಗದ ತಹಶೀಲ್ದಾರ್ ಹಾಗೂ ಅಲ್ಲಿನ ಪರ್ಯಾವೇಕ್ಷಕರ ಮೂಲ ಸೀಲುಗಳು ಹಾಗೂ ಒಂದು ಇಂಕ್ ಪ್ಯಾಡ್ ಪತ್ತೆಯಾಗಿದೆ.

ನಕಲಿ ದಾಖಲೆ ಸೃಷ್ಟಿ ಶಂಕೆ: ಈ ಇಬ್ಬರು ರೆವಿನ್ಯೂ/ಸರ್ವೆ ಇಲಾಖೆ ವ್ಯವಹಾರಕ್ಕೆ ಸಂಬಂಧಪಟ್ಟ ಸರ್ಕಾರಿ ದಾಖಲೆ ನಮೂನೆಗಳನ್ನು ಬಳಸಿ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ದುರ್ಬಳಕೆ ಮಾಡಿಕೊಳ್ಳುವ ದುರುದ್ದೇಶ ಹೊಂದಿರುವುದು ಹಾಗೂ ನಕಲಿ ಸೀಲುಗಳು, ನಕಲಿ ಸಹಿ ಮತ್ತು ದಾಖಲೆಗಳನ್ನು ಇಟ್ಟುಕೊಳ್ಳುವ ಮೂಲಕ ಅಧಿಕಾರ ದುರುಪಯೋಗದೊಂದಿಗೆ ಇಲಾಖೆಗೆ ವಂಚಿಸಿರುವ ಶಂಕೆ ಇದೆ. ಅಲ್ಲದೆ ಅವರ ಮನೆಯಲ್ಲಿ 1,40,200 ರೂ. ನಗದು ಪತ್ತೆಯಾಗಿದ್ದು, ಇದರ ಬಗ್ಗೆ ಇಬ್ಬರೂ ಸಮಂಜಸ ವಿವರಣೆ ನೀಡದ ಹಿನ್ನೆಲೆಯಲ್ಲಿ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ನಿತಿನ್ ಬ್ಯಾಂಕ್ ಖಾತೆಯನ್ನು ಪರಿಶೀಲಿಸಿದಾಗ ಲಕ್ಷಾಂತರ ರೂಪಾಯಿ ಹಣದ ವಹಿವಾಟು ನಡೆದಿರುವುದು ಕಂಡುಬಂದಿದೆ.

ನಿತಿನ್–ಹುಸೇನ್ ಜೋಡೆತ್ತು!: ದಕ್ಷಿಣ ಕನ್ನಡ ಜಿಲ್ಲೆ ಮೂಲದ ಎಡಿಎಲ್ಆರ್ ಮಹಮ್ಮದ್ ಹುಸೇನ್ ಹಾಗೂ ಉತ್ತರ ಕನ್ನಡ ಜಿಲ್ಲೆ ಭಟ್ಕಳ ಮೂಲದ ನಿತಿನ್ ಪ್ರೇಮಾನಂದ ಮಹಾಲೆ ಜೋಡೆತ್ತಿನಂತಿದ್ದವರು. ಮಹಮ್ಮದ್ ಹುಸೇನ್ ಈ ಹಿಂದೆ ಕರ್ತವ್ಯ ನಿರ್ವಹಿಸಿದ ಸಕಲೇಶಪುರ ಮತ್ತು ಹುಣಸೂರಿನ ಎಡಿಎಲ್ಆರ್ ಕಛೇರಿಗಳಲ್ಲೂ ನಿತಿನ್‌ನನ್ನು ಹೊರಗುತ್ತಿಗೆ ನೌಕರನ ಸೋಗಿನಲ್ಲಿ ತನ್ನ ಕಚೇರಿಯಲ್ಲಿ ಕರ್ತವ್ಯಕ್ಕೆ ನಿಯೋಜಿಸಿಕೊಂಡಿದ್ದರು. ಹುಣಸೂರಿನಲ್ಲಿ ಮಹಿಳೆಯೊಬ್ಬರಿಗೆ ಅವಾಚ್ಯವಾಗಿ ನಿಂದಿಸಿದ್ದು ಲೋಕಾಯುಕ್ತ ವಿಚಾರಣೆ ವೇಳೆ ತಿಳಿದುಬಂದಿದೆ.

ಈ ಕರ್ಮಕಾಂಡ ಬಯಲಾಗಿದ್ದು ಹೀಗೆ

ಶ್ರೀರಂಗಪಟ್ಟಣ ತಾಲೂಕು, ಮಹದೇವಪುರ ಗ್ರಾಮದ ಸರ್ವೆ ನಂ.411ರಲ್ಲಿ ಸುಮಾರು 200 ಎಕರೆಯಷ್ಟು ಸರ್ಕಾರಿ ಜಮೀನಿದೆ. ಸದರಿ ಜಮೀನಿನಲ್ಲಿ ಅಕ್ರಮ ಖಾತೆಗಳ ಮೂಲಕ ಕ್ರಯಪತ್ರ, ಅಕ್ರಮ ಆರ್‌ಟಿಸಿ ಸೃಷ್ಟಿಸಿ, ಸರ್ವೆ ಅಧಿಕಾರಿಗಳಿಗೆ ಲಂಚ ನೀಡಿ ದುರಸ್ತಿ ಮಾಡಿಸಿಕೊಳ್ಳುತ್ತಿದ್ದು, ಇದರಲ್ಲಿ ತಹಶೀಲ್ದಾರ್, ಶ್ರೀರಂಗಪಟ್ಟಣ ಎಡಿಎಲ್ಆರ್ ಶಾಮೀಲಾಗಿರುತ್ತಾರೆ ಎಂದು ಮಹದೇವಪುರದ ನಾಗೇಂದ್ರ, ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಉಪಲೋಕಾಯುಕ್ತ–2 ನ್ಯಾಯಮೂರ್ತಿ ಬಿ.ವೀರಪ್ಪ ಅವರು ದೂರು ದಾಖಲಿಸಿಕೊಂಡು, ಶ್ರೀರಂಗಪಟ್ಟಣ ತಹಶೀಲ್ದಾರ್ ಚೇತನ ಯಾದವ್, ತಾಲೂಕಿನ ಮಹದೇವಪುರ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಜಿ.ಆರ್.ನಾಗೇಂದ್ರ, ತಾಲೂಕು ಭೂದಾಖಲೆಗಳ ಸಹಾಯಕ ನಿರ್ದೇಶಕ(ಎಡಿಎಲ್ಆರ್) ಮಹಮದ್ ಹುಸೇನ್ ಹಾಗೂ ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್ ಅವರ ಕಚೇರಿ ಹಾಗೂ ಮನೆಗಳಲ್ಲಿ ಶೋಧನಾ ಕಾರ್ಯ ನಡೆಸಲು ವಾರಂಟ್ ಜಾರಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಮಂಡ್ಯದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಸ್.ಸುರೇಶ್ ಬಾಬು ನೇತೃತ್ವದಲ್ಲಿ ಉಪ ಅಧೀಕ್ಷಕ ಹೆಚ್.ಟಿ.ಸುನೀಲ್‌ಕುಮಾರ್, ಇನ್ಸ್‌ಪೆಕ್ಟರ್‌ಗಳಾದ ಎಂ.ರವಿಕುಮಾರ್, ಬಿ.ಪಿ.ಬ್ಯಾಟರಾಯಗೌಡ ಹಾಗೂ ಆರ್.ಜಿ.ಲೇಪಾಕ್ಷಮೂರ್ತಿ ಅವರನ್ನೊಳಗೊಂಡ ನಾಲ್ಕು ತಂಡಗಳು ಕಾರ್ಯಾಚರಣೆಗಿಳಿದಾಗ ಶ್ರೀರಂಗಪಟ್ಟಣ ತಾಲೂಕು ಎಡಿಎಲ್ಆರ್ ಕಚೇರಿಯ ಕರ್ಮಕಾಂಡ ಬಯಲಾಗಿದೆ.

ವಿದ್ಯುತ್ ಕೊರತೆ ನೀಗಲು ಸಜ್ಜಾಗಿ

ಇದಕ್ಕೆ ತಕ್ಕಂತೆ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಯೋಜನೆ ಜೊತೆಗೆ ಅಗತ್ಯವಾದ ಹಣಕಾಸು ನಕ್ಷೆ (Financing Roadmap) ಸಿದ್ಧಪಡಿಸಬೇಕು ಎಂದು ಸಲಹೆ ನೀಡಿದರು. ಮೀಟರ್‌ಗಳು ಹಾಗೂ ವಿದ್ಯುತ್ ವಿತರಣಾ ವ್ಯವಸ್ಥೆಯ ಆಧುನೀಕರಣಕ್ಕಾಗಿ ಕೇಂದ್ರ ಸರ್ಕಾರದ ನೆರವು ಪಡೆಯುವ ಉದ್ದೇಶದಿಂದ ಪರಿಷ್ಕೃತ ವಿತರಣಾ ವಲಯ ಯೋಜನೆ (RDSS) ಯನ್ನು ವೇಗವಾಗಿ ಅನುಷ್ಠಾನಗೊಳಿಸಬೇಕು. ಸ್ಮಾರ್ಟ್ ಮೀಟರ್‌ಗಳನ್ನು ಪಾರದರ್ಶಕವಾಗಿ ಹಾಗೂ ನಿಗದಿತ ಸಮಯದಲ್ಲಿ ಅಳವಡಿಸಬೇಕು.

ರಾಜ್ಯದಲ್ಲಿ ವೇಗವಾಗಿ ಹೆಚ್ಚುತ್ತಿರುವ ನವೀಕರಿಸಬಹುದಾದ ಇಂಧನ ಸಾಮರ್ಥ್ಯವನ್ನು ಸಮರ್ಪಕವಾಗಿ ನಿಭಾಯಿಸಲು ರಾಜ್ಯದ ವಿದ್ಯುತ್ ಜಾಲ ಮೂಲಸೌಕರ್ಯವನ್ನು ಮತ್ತಷ್ಟು ಬಲಪಡಿಸಬೇಕು ಎಂದರು.

ವಿದ್ಯುತ್ ಪ್ರಸರಣ ಯೋಜನೆಗಳಿಗೆ ಇರುವ ತಾಂತ್ರಿಕ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಿಕೊಳ್ಳಿ, ಭೂಸ್ವಾಧೀನ, ಹಕ್ಕು ಮಾರ್ಗ (Right of Way) ಹಾಗೂ ಕಾನೂನುಬದ್ಧ ಅನುಮತಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಶೀಘ್ರ ಪರಿಹರಿಸಿ ಯೋಜನೆಗಳನ್ನು ವೇಗಗೊಳಿಸಬೇಕು ಎಂದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಬಿಜೆಪಿ–ಜೆಡಿಎಸ್ ಆಕ್ರೋಶ

ಪರ ಪ್ರಚಾರಕ್ಕೆ ಬಳಸಿಕೊಳ್ಳಲಾಗಿದೆ, ಚಾಮರಾಜಪೇಟೆ ಮುಂತಾದ ಕಡೆಗಳಲ್ಲಿ ಎಸ್‌ಐಆರ್ ವಿಚಾರದಲ್ಲಿ ಉಂಟಾಗಿರುವ ಗೊಂದಲ ಸಂಬಂಧ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದು, ಚುನಾವಣಾಧಿಕಾರಿಗಳು ಸಮಸ್ಯೆ ಪರಿಹರಿಸಬೇಕು ಎಂದರು.

ಎಸ್‌ಐಆರ್ ನಿಲ್ಲಿಸಲು ಆಗ್ರಹ: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪ್ರತ್ಯೇಕವಾಗಿ ಮಾತನಾಡಿ, ಜಿಬಿಎ ವ್ಯಾಪ್ತಿಯ 27 ವಾರ್ಡ್‌ಗಳಲ್ಲಿ ಕರ್ನಾಟಕ ರಾಜ್ಯ ಚುನಾವಣಾ ಆಯೋಗ ನಡೆಸುತ್ತಿರುವ ಸಮಾನಾಂತರ ಎಸ್‌ಐಆರ್ ತಕ್ಷಣ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಕೇಂದ್ರ ಚುನಾವಣಾ ಆಯೋಗ ರಾಜ್ಯದಾದ್ಯಂತ ಎಸ್‌ಐಆರ್ ನಡೆಸುತ್ತಿದೆ. ಈ ನಡುವೆ ಜಿಬಿಎ ವಾರ್ಡ್‌ಗಳಲ್ಲಿ ರಾಜ್ಯ ಚುನಾವಣಾ ಆಯೋಗ ಮತ್ತೊಂದು ಎಸ್‌ಐಆರ್ ನಡೆಸುತ್ತಿದೆ, ಇದು ಮತದಾರರನ್ನು ಗೊಂದಲಕ್ಕೀಡು ಮಾಡಿದೆ. ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ತೃಪ್ತಿಪಡಿಸಲು ರಾಜ್ಯ ಕಾಂಗ್ರೆಸ್ ಸರ್ಕಾರ ಇಂತಹ ಕೆಲಸ ಮಾಡುತ್ತಿದೆ. 20 ವರ್ಷಗಳ ನಂತರ ಎಸ್‌ಐಆರ್ ನಡೆಯುತ್ತಿದ್ದು, ದೇಶದಲ್ಲಿ ಅಕ್ರಮ ವಲಸಿಗ ಮತದಾರರ ಗುರುತಿಸಲು, ಮೃತಪಟ್ಟವರ ಹೆಸರು ಹಾಗೂ ಎರಡು ಕಡೆ ಇರುವ ಮತದಾರರ ಹೆಸರನ್ನು ಪಟ್ಟಿಯಿಂದ ತೆಗೆಯಲು ಎಸ್‌ಐಆರ್ ನಡೆಯುತ್ತಿದೆ.

ಹಲವು ವರ್ಷಗಳಿಂದ ಅಲ್ಪಸಂಖ್ಯಾತ ನಾಯಕರು ಅಕ್ರಮ ಬಾಂಗ್ಲಾ ವಲಸಿಗರನ್ನು ರಾಜ್ಯಕ್ಕೆ ಕರೆತಂದಿದ್ದು, ಇವರನ್ನು ಕರ್ನಾಟಕದ ನಿವಾಸಿಗಳಾಗಿಸಲು ಮತ್ತು ಮತದಾರರ ಪಟ್ಟಿಯಲ್ಲಿ ಸೇರಿಸುವ ಷಡ್ಯಂತ್ರ ನಡೆಯುತ್ತಿದೆ.

ರಾಜ್ಯದ ವಿವಿಧ ಭಾಗದಲ್ಲಿ ನೆಲೆಸಿರುವ ಅಕ್ರಮ ಬಾಂಗ್ಲಾದೇಶಿಗರನ್ನು ಮತಪಟ್ಟಿಗೆ ಸೇರಿಸಿ ಭಾರತದ ಪ್ರಜೆಗಳನ್ನಾಗಿ ಸಕ್ರಮಗೊಳಿಸುವ ಕುತಂತ್ರ ನಡೆಯುತ್ತಿದೆ ಎಂದು ಆರೋಪಿಸಿದರು. ಬಿಹಾರ ಮತ್ತು ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆ ನಂತರ ಮತದಾರರ ಪಟ್ಟಿಯಿಂದ ಕೈಬಿಟ್ಟ ಅಕ್ರಮ ಬಾಂಗ್ಲಾ ವಲಸಿಗರು ರಾಜ್ಯಕ್ಕೆ ಬಂದಿದ್ದು, ಇವರಲ್ಲಿ ಕೆಲವರು ಸಿಕ್ಕಿ ಬಿದ್ದಿದ್ದಾರೆ. ಮುಖ್ಯಮಂತ್ರಿಗಳ ಮೌಖಿಕ ಆದೇಶದ ಮೇಲೆ ಬಿಎಲ್‌ಓಗಳು ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದು, ಅಕ್ರಮ ನಿವಾಸಿಗಳನ್ನು ಮತಪಟ್ಟಿಗೆ ಸೇರಿಸಲಾಗುತ್ತಿದೆ.

ಮಸೀದಿಗಳು, ಶಾದಿ ಮಹಲ್‌ಗಳು, ಕಲ್ಯಾಣ ಮಂಟಪಗಳಲ್ಲಿ ಎನ್ಯೂಮರೇಷನ್ ಫಾರಂಗಳನ್ನು ಭರ್ತಿ ಮಾಡಿಸಿಕೊಳ್ಳುವ ಕೆಲಸ ನಡೆಯುತ್ತಿದೆ, ಅಕ್ರಮ ವಲಸಿಗರಿಗೆ ವಿಳಾಸ ಇಲ್ಲ, ಮನೆ ಸಂಖ್ಯೆ ಇಲ್ಲ, ಆದರೂ ಕಾನೂನು ಉಲ್ಲಂಘಿಸಿ ಅವರ ಹೆಸರನ್ನು ಸೇರಿಸಲಾಗುತ್ತಿದೆ.

ಎಸ್‌ಐಆರ್ ಫಾರಂಗಳನ್ನು ಬಿಎಲ್‌ಓಗಳು ಮನೆಗಳಿಗೆ ಖುದ್ದಾಗಿ ಹೋಗಿ ಕೊಡಬೇಕು ಎಂಬ ನಿಯಮವಿದೆ, ಆದರೂ, ಎಲ್ಲ ನಿಯಮ ಗಾಳಿಗೆ ತೂರಿ ಬಿಎಲ್‌ಓಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ರಾಜ್ಯದ ಸೈಬರ್ ಕೇಂದ್ರಗಳಲ್ಲಿ ಅಕ್ರಮವಾಗಿ ಜನನ ಪ್ರಮಾಣ ಪತ್ರ ಕೊಡಲಾಗುತ್ತಿದೆ, ಎಸ್‌ಐಆರ್ ಪ್ರಕ್ರಿಯೆ ಆರಂಭದ ನಂತರ ಜನನ ಪ್ರಮಾಣಪತ್ರ ಕೊಡುವ ಕಾರ್ಯದಲ್ಲಿ ಹೆಚ್ಚಳ ಕಂಡುಬಂದಿದೆ.

ರಾಜ್ಯದಲ್ಲಿ ಹುಟ್ಟಿದವರಿಗೆ, ಬದುಕಿದವರಿಗೆ ಪ್ರಮಾಣಪತ್ರ ಕೊಡಬೇಕಿಲ್ಲ, ನಮ್ಮ ಮನೆ ಇದೆ, ಮತಪಟ್ಟಿಯಲ್ಲಿ ಹೆಸರಿದೆ, ಅಕ್ರಮ ಬಾಂಗ್ಲಾ ವಲಸಿಗರನ್ನು ಕರೆತಂದು ನಿವಾಸಿ ಪ್ರಮಾಣಪತ್ರ ನೀಡಲಾಗುತ್ತಿದೆ.

ಅಕ್ರಮ ಗೆಲುವಿಗೆ ಸಿದ್ಧತೆ: ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಅಕ್ರಮವಾಗಿ ಗೆಲ್ಲುವುದೇ ಮುಖ್ಯಮಂತ್ರಿ ಮತ್ತು ರಾಜ್ಯ ಸರ್ಕಾರದ ಉದ್ದೇಶವಾಗಿದ್ದು, ಕೇಂದ್ರ ಚುನಾವಣಾ ಆಯೋಗ ಮಧ್ಯಪ್ರವೇಶಿಸಿ ಕ್ರಮ ಕೈಗೊಳ್ಳಬೇಕು. ಜಿಬಿಎ ಚುನಾವಣೆಯಲ್ಲಿ ಗೆಲ್ಲುವ ಉದ್ದೇಶದಿಂದ ಒಂದು ಸಮುದಾಯದ ಮತದಾರರನ್ನು ಸೇರಿಸಲು ವ್ಯವಸ್ಥಿತ ಷಡ್ಯಂತ್ರ ನಡೆದಿದೆ, ಅಲ್ಪಸಂಖ್ಯಾತರನ್ನು ಮತಪಟ್ಟಿಗೆ ಸೇರಿಸುವುದು ಸರ್ಕಾರದ ಆದ್ಯತೆಯಾದರೆ ಬಹುಸಂಖ್ಯಾತರ ಮತ ಬೇಡವೇ ಎಂದರು. ಬಿಎಲ್‌ಓಗಳು ಗುಂಪಾಗಿ ಜನರನ್ನು ಸೇರಿಸಿ ಎಸ್‌ಐಆರ್ ಮಾಡುವುದು ಸರಿಯಲ್ಲ, ಬಿಎಲ್‌ಓಗಳಿಗೆ ಸೂಕ್ತ ತರಬೇತಿ ನೀಡಿಲ್ಲ, ಮ್ಯಾಪಿಂಗ್ ಮಾಡುತ್ತಿಲ್ಲ, ಅರ್ಜಿಯನ್ನು ಮನೆಗೆ ಬಿಸಾಕಿ ಬರುತ್ತಿದ್ದಾರೆ, ಬಿಎಲ್‌ಓಗಳ ಮೇಲೆ ಒತ್ತಡ ಹೇರಲಾಗುತ್ತಿದೆ. ಎಸ್‌ಐಆರ್ ಪ್ರಕ್ರಿಯೆಯಲ್ಲಿನ ಕಾನೂನು ವಿರೋಧಿ ಕ್ರಮಗಳನ್ನು ರಾಜ್ಯ ಸರ್ಕಾರ ತಕ್ಷಣ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಏಳು ಮಂದಿ ಬಂಧನ

ಬಯಲಿಗೆ ಬಂತು ಎಂದರು. ಬಳಿಕ ಗುರುವಾರ ರಾತ್ರಿ ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಗೆ ಬಂದು ಗೂಡ್ಸ್ ವಾಹನದ ಚಾಲಕ ಶಂಕರ್ ಅವರು ದೂರು ದಾಖಲಿಸಿದರು. ಈ ಸಂಬಂಧ ತನಿಖೆ ನಡೆಸಿದಾಗ ಕಾರಿನ ನಂಬರ್ ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಗಿದೆ. ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ ಟಯೋಟ ಫಾರ್ಚುನರ್ ಕಪ್ಪು ಬಣ್ಣದ ಕಾರು ಹಾಗೂ ಒಂದು ಪಿಸ್ತೂಲ್ (ಓ2 ಏರ್ ಪಿಸ್ತೂಲ್), ಕಾರ್ಬನ್ ರೀಫಿಲ್ಸ್–02, ಪಿಲ್ಲೆಟ್ಸ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎಸ್ಪಿ ಶೋಭಾರಾಣಿ ಹೇಳಿದರು.

ಹೆದ್ದಾರಿಯಲ್ಲಿ ಅಪರಾಧ ಕೃತ್ಯ ತಡೆಯಲು ಕ್ರಮ: ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪರಾಧ ಕೃತ್ಯಗಳನ್ನು ತಡೆಯುವ ನಿಟ್ಟಿನಲ್ಲಿ ಈಗಾಗಲೇ ಹೈವೇ ಪೆಟ್ರೋಲಿಂಗ್ ವಾಹನಗಳ ಗಸ್ತು ತಿರುವಿಕೆಯನ್ನು ಹೆಚ್ಚಿಸಲಾಗಿದೆ. ಜೊತೆಗೆ ಏರಿಯಾ ಡಾಮಿನೇಷನ್ ಅನ್ನೋ ಹೊಸ ಕಾರ್ಯಾಚರಣೆ ಆರಂಭಿಸಿದ್ದು, ಈ ವಾಹನವು ರಾತ್ರಿ 9ರಿಂದ 12 ಗಂಟೆಯವರೆಗೆ ಹೈವೆಯಲ್ಲಿ ಗಸ್ತು ತಿರುಗುತ್ತದೆ. ಅನುಮಾನಾಸ್ಪದ ವಾಹನಗಳು ಅಥವಾ ವ್ಯಕ್ತಿಗಳು ಕಂಡು ಬಂದರೆ ತಕ್ಷಣ ವಶಕ್ಕೆ ಪಡೆಯಲಾಗುವುದು ಎಂದರು. ಈ ರೀತಿಯ ಕಾರ್ಯಾಚರಣೆ ಜಿಲ್ಲೆಯ ಗಡಿ ಭಾಗ ನಿಡಘಟ್ಟದಿಂದ ನಗುವನಹಳ್ಳಿವರೆಗೆ ನಡೆಯಲಿದ್ದು, ಎಕ್ಸ್‌ಪ್ರೆಸ್‌ವೇ, ಅಂಡರ್‌ಪಾಸ್, ಸರ್ವೀಸ್ ರಸ್ತೆಗಳಲ್ಲಿ ಅನುಮಾನಾಸ್ಪದವಾಗಿ ಸಂಚರಿಸುವ ವಾಹನಗಳು, ವ್ಯಕ್ತಿಗಳು ಜೊತೆಗೆ ಹೈವೇ ಆಜುಬಾಜಲ್ಲಿ ಮದ್ಯಪಾನ ಮಾಡುವವರನ್ನು ಅಬಕಾರಿ ಕಾಯ್ದೆಯಡಿ ವಶಪಡಿಸಿಕೊಂಡು ಕೇಸು ದಾಖಲು ಮಾಡುತ್ತಿದ್ದೇವೆ ಎಂದು ಹೇಳಿದರು.

ಕೋಟ್ಯಾಂತರ ರಾಮ ಭಕ್ತರಿಗೆ ನೋವಾಗಿದೆ

ಮತ್ತು ತಾಳ್ಮೆಯನ್ನು ಪ್ರದರ್ಶಿಸಬೇಕು. ಈ ದುರದೃಷ್ಟಕರ ಘಟನೆಯನ್ನು ದುರುಪಯೋಗಪಡಿಸಿಕೊಂಡು ಹಿಂದೂ ಧರ್ಮ ಮತ್ತು ಸಮಾಜವನ್ನು ಜಗತ್ತಿನ ಮುಂದೆ ತೇಜೋವಧೆ ಮಾಡಲು ಹೊಂಚು ಹಾಕುತ್ತಿರುವ ಹಿಂದೂ ವಿರೋಧಿ ಹಾಗೂ ದೇಶ ವಿರೋಧಿ ಶಕ್ತಿಗಳ ಸಂಚನ್ನು ಭಕ್ತರು ವಿಫಲಗೊಳಿಸಬೇಕು ಎಂದು ಹೊಸಬಾಳೆ ಮನವಿ ಮಾಡಿದ್ದಾರೆ. ದೇವಸ್ಥಾನದಲ್ಲಿ ದೋಷರಹಿತ, ಪಾರದರ್ಶಕ ಹಣಕಾಸು ನಿರ್ವಹಣೆ ಮತ್ತು ಧಾರ್ಮಿಕ ಪವಿತ್ರತೆಯ ವಾತಾವರಣವನ್ನು ಕಾಪಾಡಿಕೊಳ್ಳುವ ಮೂಲಕ ಭಕ್ತರ ನಂಬಿಕೆಯನ್ನು ಟ್ರಸ್ಟ್ ಮತ್ತಷ್ಟು ಗಟ್ಟಿಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಅಯೋಧ್ಯೆಯ ರಾಮಮಂದಿರದಲ್ಲಿ ಭಕ್ತರು ನೀಡಿದ ದೇಣಿಗೆ ಹಣವನ್ನು ಎಣಿಕೆ ಮಾಡುವ ಸಂದರ್ಭದಲ್ಲಿ ಕೋಟ್ಯಾಂತರ ರೂಪಾಯಿ ಹಣವನ್ನು ವ್ಯವಸ್ಥಿತವಾಗಿ ಕಳವು ಮಾಡಲಾಗಿದೆ ಎಂಬ ಗಂಭೀರ ದೂರು ಕೇಳಿಬಂದಿತ್ತು. ಈ ಪ್ರಕರಣದ ತನಿಖೆಗಾಗಿ ಉತ್ತರ ಪ್ರದೇಶ ಸರ್ಕಾರವು ವಿಶೇಷ ತನಿಖಾ ತಂಡವನ್ನು ರಚಿಸಿದೆ.

ಇತ್ತೀಚಿನ ವರದಿಗಳ ಪ್ರಕಾರ, ಈ ಹಗರಣದಲ್ಲಿ ಸುಮಾರು 200 ಕೋಟಿವರೆಗೂ ಅವ್ಯವಹಾರ ನಡೆದಿರುವ ಆರೋಪ ಕೇಳಿ ಬಂದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ 8 ಜನರನ್ನು ಬಂಧಿಸಿ ಜೈಲಿಗೆ ಅಟ್ಟಲಾಗಿದೆ. ಸಿಸಿಟಿವಿ ದೃಶ್ಯಾವಳಿ ಹಾಗೂ ಡಿಜಿಟಲ್ ಪುರಾವೆಗಳ ಆಧಾರದ ಮೇಲೆ ಎಸ್‌ಐಟಿ ತನಿಖೆ ತೀವ್ರಗೊಂಡಿದೆ.

ಡಿಕೆಶಿ ಮುಖ್ಯಮಂತ್ರಿಯಾಗಿ 30 ದಿನ

ಭೇಟಿ ಮಾಡಿ ರಾಜ್ಯದ ನೀರಾವರಿ ಯೋಜನೆಗಳು, ಬೆಂಗಳೂರಿನ ಮೆಟ್ರೋ, ಆರ್‌ಆರ್‌ಟಿಎಸ್ ರೈಲು ಯೋಜನೆ ಪ್ರಸ್ತಾಪ. ದೆಹಲಿಯಲ್ಲಿರುವ ರಾಜ್ಯದ ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳ ಸಭೆ ನಡೆಸಿ, ಕರ್ನಾಟಕದ ಸರ್ವತೋಮುಖ ಅಭಿವೃದ್ಧಿ ಕುರಿತು ಚರ್ಚೆ. ಕಾಲೇಜು ಚುನಾವಣೆಗಳನ್ನು ಪ್ರಸಕ್ತ ವರ್ಷದಿಂದಲೇ ಪ್ರಾರಂಭಿಸಲು ಚಿಂತನೆ, ಎಲ್ಲಾ ತಾಲೂಕುಗಳಲ್ಲಿ ರಿಂಗ್ ರಸ್ತೆ, ಗ್ರಿಡ್ ಗುರುತಿಸಲು ನಿರ್ದೇಶನ.

ರಾಜ್ಯದ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಬೆಳಗ್ಗೆ 10 ಗಂಟೆಗೆ ಜಿಪಿಎಸ್ ತಂತ್ರಾಂಶದ ಸಿಬ್ಬಂದಿ ಹಾಜರಾತಿಗೆ ಸೂಚನೆ. ನೂತನ ಸಿಎಸ್‌ಆರ್ ನೀತಿ ಹಾಗೂ ತೆರಿಗೆ ವಂಚನೆ ತಡೆಯುವಂತೆ ಅಧಿಕಾರಿಗಳಿಗೆ ಆದೇಶ.

ಬರ ಪರಿಸ್ಥಿತಿ ನಿರ್ವಹಣೆಗೆ ಅಗತ್ಯ ಸಿದ್ಧತೆಗೆ ಅಧಿಕಾರಿಗಳ ಸಭೆ, ಮಾವು ಬೆಳೆಗಾರರಿಗೆ ಕಳೆದ ವರ್ಷದಂತೆ ಪ್ರೋತ್ಸಾಹಧನ ಮುಂದುವರಿಸಲು ತೀರ್ಮಾನ, ರೈತರಿಗೆ ಸಕಾಲದಲ್ಲಿ ಬಿತ್ತನೆ ಬೀಜ, ಗೊಬ್ಬರ ಪೂರೈಕೆಗೆ ನಿರ್ದೇಶನ.

ಸುಪ್ರೀಂಕೋರ್ಟ್‌ನಲ್ಲಿ ರಾಜ್ಯಕ್ಕೆ ಸಂಬಂಧಿಸಿದ ವಿವಿಧ ಪ್ರಕರಣಗಳ ನಿರ್ವಹಣೆ ಮತ್ತು ತ್ವರಿತ ಇತ್ಯರ್ಥಕ್ಕೆ ವಕೀಲರ ತಂಡ ಸದೃಢಗೊಳಿಸಲು ತೀರ್ಮಾನ. ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಜಾರಿಗೆ ಪಂಚಾಯತ್ ಹಾಗೂ ವಾರ್ಡ್ ಮಟ್ಟದಲ್ಲಿ ಗ್ಯಾರಂಟಿ ಸಮಿತಿ ರಚನೆಗೆ ನಿರ್ಧಾರ.

ತುಂಗಭದ್ರಾ ಅಣೆಕಟ್ಟು ನೂತನವಾಗಿ ಅಳವಡಿಸಲಾಗಿರುವ ಸ್ಟಿಲ್ ಗೇಟ್‌ಗಳ ಉದ್ಘಾಟನೆ, ತುಂಗಭದ್ರಾ ಪಾತ್ರದ ರೈತರ ರಕ್ಷಣೆಗೆ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ನೇತೃತ್ವದಲ್ಲಿ ಕರ್ನಾಟಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ, ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಒಟ್ಟಾಗಿ ಒಮ್ಮತದ ತೀರ್ಮಾನ, ಅಣೆಕಟ್ಟೆಯಲ್ಲಿನ ಹೂಳು ತೆಗೆಯಲು ಕೇಂದ್ರದಿಂದ ಯೋಜನೆ.

ಬಡವರ ವಸತಿ ಯೋಜನೆಗಳ ಶೀಘ್ರ ಅನುಷ್ಠಾನ ಹಾಗೂ ವಿತರಣೆ, ಬಡವರಿಗೆ ನಿವೇಶನ ಬದಲು ಮನೆ ಕಟ್ಟಿಕೊಡಲು ಅಧಿಕಾರಿಗಳಿಗೆ ಸೂಚನೆ, ಕೆಂಪೇಗೌಡ ಬಡಾವಣೆಯಲ್ಲಿ 10 ಪಥಗಳ ಎಸ್.ಎಂ.ಕೃಷ್ಣ ರಸ್ತೆ ಉದ್ಘಾಟನೆ. ರಾಜಕೀಯ ವ್ಯವಹಾರಗಳ ಸಮಿತಿ ರಚನೆಗೆ ತೀರ್ಮಾನ, ಬಂಡೀಪುರ, ನಾಗರಹೊಳೆ ಹುಲಿ ಸಫಾರಿ ಪುನರಾರಂಭ. ಹೆಬ್ಬಾಳ ಬಳಿ ಸಣ್ಣ ಸುರಂಗ ರಸ್ತೆ ನಿರ್ಮಾಣಕ್ಕೆ ಶಂಕುಸ್ಥಾಪನೆ, ಕೆಂಪೇಗೌಡ ಜಯಂತಿ ಹಿನ್ನೆಲೆಯಲ್ಲಿ ಬಿಡಿಎ ವತಿಯಿಂದ ಬೆಂಗಳೂರಿನಲ್ಲಿ 15 ಲಕ್ಷ ಸಸಿ ನೆಡುವ ಕಾರ್ಯಕ್ರಮ, ಗಿನ್ನೀಸ್ ದಾಖಲೆ ನಿರ್ಮಾಣ.

ಸಾರ್ವಜನಿಕ ಯೋಜನೆಗಳಿಗೆ ಭೂಮಿ ಕೊಡುವ ರೈತರು, ಭೂ ಮಾಲೀಕರಿಗೆ ಗೌರವ ನೀಡಲು ವಾಲ್ ಆಫ್ ಗ್ರ್ಯಾಟಿಟ್ಯೂಡ್ ನಿರ್ಮಾಣಕ್ಕೆ ನಿರ್ಧಾರ. 2028ಕ್ಕೆ ನಶೆ ಮುಕ್ತ ಕರ್ನಾಟಕ ನಿರ್ಮಾಣದ ಗುರಿ, ಅಮಲು ಬೆರೆಸುವ ಪಾನ್ ಮಸಾಲ, ಗುಟ್ಕಾಗಳ ನಿಷೇಧಿಸುವ ಎಚ್ಚರಿಕೆ, ಡ್ರಗ್ಸ್ ಜಾಲ ನಿಗ್ರಹಕ್ಕೆ ಸುಳಿವು ನೀಡಿದವರಿಗೆ ಬಹುಮಾನ ನೀಡಲು ತೀರ್ಮಾನ.

ಹಾಸನದ ಐಐಟಿಗೆ ಭೂಸ್ವಾಧೀನದಿಂದ ಸರಿಯಾದ ಪರಿಹಾರ ಸಿಗದೆ ನೊಂದ ಹಾಸನದ ರೈತರಿಗೆ 2013ರ ಕೋರ್ಟ್ ಆದೇಶ ಅನ್ವಯ ಪರಿಹಾರ ನೀಡುವ ಭರವಸೆ ಕಲ್ಪಿಸಲಾಗಿದೆ.

ಮೈಸೂರಿನ ಕಾವೇರಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಯಶಸ್ವಿ ಕೊಲನ್ ಕ್ಯಾನ್ಸರ್ ಶಸ್ತ್ರಚಿಕಿತ್ಸೆ

22 ದಿನಗಳ ಚಿಕಿತ್ಸೆ ಬಳಿಕ ಆರೋಗ್ಯವಾಗಿ ಮನೆಗೆ ಮರಳಿದ ನಿವೃತ್ತ ಶಿಕ್ಷಕಿ



ಕೊಲನ್ ಕ್ಯಾನ್ಸರ್‌ನಿಂದ ಚೇತರಿಸಿಕೊಂಡ ಮಹಿಳೆಯೊಂದಿಗೆ ಕಾವೇರಿ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ತಂಡ.

ಮೈಸೂರು, ಜು.3– ಸಾಮಾನ್ಯ ಆರೋಗ್ಯ ಸಮಸ್ಯೆಗಳಂತೆ ಕಾಣುವ ತೀವ್ರ ರಕ್ತಹೀನತೆ, ಹೊಟ್ಟೆನೋವು, ಆಯಾಸ, ತಲೆಸುತ್ತಿನಿಂದ ಬಳಲುತ್ತಿದ್ದ 64 ವರ್ಷದ ನಿವೃತ್ತ ಶಿಕ್ಷಕಿಯೊಬ್ಬರನ್ನು ಮೈಸೂರಿನ ಕಾವೇರಿ ಹಾರ್ಟ್ ಅಂಡ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವೈದ್ಯರು, ಸೂಕ್ತ ವೈದ್ಯಕೀಯ ಪರೀಕ್ಷೆಗೆ ಒಳಪಡಿಸುವ ಮೂಲಕ ಕೊಲನ್ ಕ್ಯಾನ್ಸರ್ ಇರುವುದನ್ನು ಪತ್ತೆ ಹಚ್ಚಿ, ಯಶಸ್ವಿ ಶಸ್ತ್ರಚಿಕಿತ್ಸೆ ಹಾಗೂ ಸಮನ್ವಯ ಚಿಕಿತ್ಸೆ ಮೂಲಕ ರೋಗಿಯನ್ನು ಪ್ರಾಣಾಪಾಯದಿಂದ ಪಾರು ಮಾಡಿದ್ದಾರೆ.

ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಿದಾಗ ಅವರ ಹಿಮೋಗ್ಲೋಬಿನ್ ಕೇವಲ 4 ಗ್ರಾಂ/ಡಿಸಿಲೀಟರ್ ಮಾತ್ರ ಇತ್ತು. ಇದು ಅಪಾಯಕಾರಿಯಾದ ಸ್ಥಿತಿಯಾಗಿದ್ದರಿಂದ ಅವರಿಗೆ ಕೂಡಲೇ ನಾಲ್ಕು ಯೂನಿಟ್ ರಕ್ತವನ್ನು ನೀಡಲಾಯಿತು. ಆದರೂ ಹಿಮೋಗ್ಲೋಬಿನ್ ಕಡಿಮೆಯಾಗುತ್ತಿರುವುದು ವೈದ್ಯರಲ್ಲಿ ಅನುಮಾನ ಮೂಡಿಸಿತು. ತಕ್ಷಣ ಜನರಲ್ ಫಿಸಿಷಿಯನ್, ಗ್ಯಾಸ್ಟ್ರೋಎಂಟರಾಲಜಿ, ರೇಡಿಯಾಲಜಿ ಹಾಗೂ ಸರ್ಜಿಕಲ್ ಆಂಕಾಲಜಿ ವಿಭಾಗಗಳ ವೈದ್ಯರು ಸಮಗ್ರ ಪರೀಕ್ಷೆ ನಡೆಸಿ, ಸಿಟಿ ಸ್ಕ್ಯಾನ್, ಕೊಲೊನೋಸ್ಕೋಪಿ ಹಾಗೂ ಪೆಟ್–ಸಿಟಿ ಪರೀಕ್ಷೆಗಳ ಮೂಲಕ ದೊಡ್ಡ ಕರುಳಿನ ಭಾಗದಲ್ಲಿ ಗೆಡ್ಡೆ ಇರುವುದನ್ನು ಪತ್ತೆಹಚ್ಚಲಾಯಿತು. ಗೆಡ್ಡೆಯಿಂದ ಕರುಳಿನ ಮಾರ್ಗವು ಬಹುತೇಕ ಮುಚ್ಚಿಕೊಂಡಿದ್ದ ಕಾರಣ ತಕ್ಷಣ ಶಸ್ತ್ರಚಿಕಿತ್ಸೆ ನಡೆಸುವ ನಿರ್ಧಾರ ಕೈಗೊಳ್ಳಲಾಯಿತು.

ಖ್ಯಾತ ಸರ್ಜಿಕಲ್ ಆಂಕಾಲಜಿಸ್ಟ್ ಡಾ.ಕಿರಣ್ ಶಂಕರ್ ಅವರ ನೇತೃತ್ವದಲ್ಲಿ ದೊಡ್ಡ ಕರುಳಿನ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿತು. ಸುಮಾರು 10 ಸೆಂ.ಮೀ. ಗಾತ್ರದ ಗೆಡ್ಡೆ ಹಾಗೂ ಅದರ ಸುತ್ತಲಿನ ಪರಿಣಾಮಿತ ಕರುಳಿನ ಭಾಗವನ್ನು ಸಂಪೂರ್ಣವಾಗಿ ತೆಗೆದುಹಾಕಲಾಯಿತು. ಶಸ್ತ್ರಚಿಕಿತ್ಸೆಯ ನಂತರದ ಅಂತಿಮ ವರದಿಯಲ್ಲಿ ಇದು ಕರುಳಿನ ಕ್ಯಾನ್ಸರ್ ಎಂದು ದೃಢಪಟ್ಟಿತು. ಸದ್ಯ ಪರೀಕ್ಷೆಗೆ ಒಳಪಡಿಸಿದ 24 ಲಿಂಫ್ ನೋಡ್‌ಗಳಲ್ಲಿಯೂ ಕ್ಯಾನ್ಸರ್ ಹರಡಿರಲಿಲ್ಲ. ಶಸ್ತ್ರಚಿಕಿತ್ಸೆಯ ಅಂಚುಗಳೂ ಸಂಪೂರ್ಣವಾಗಿ ಕ್ಯಾನ್ಸರ್ ಮುಕ್ತವಾಗಿದ್ದು, ರಕ್ತನಾಳ, ಲಿಂಫ್ಯಾಟಿಕ್ ಹಾಗೂ ನರಗಳ ಮೂಲಕ ಕ್ಯಾನ್ಸರ್ ಹರಡಿರುವ ಯಾವುದೇ ಲಕ್ಷಣಗಳು ಕಂಡುಬರಲಿಲ್ಲ. ಸದ್ಯ ಮಹಿಳೆ ಚೇತರಿಸಿಕೊಂಡು ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ತೆರಳಿದ್ದಾರೆ. ಮಹಿಳೆಯ ಕುಟುಂಬದ ಸದಸ್ಯರು ಆಸ್ಪತ್ರೆಯ ಆಡಳಿತ ಮಂಡಳಿ, ಡಾ.ಸರಳಾ ಚಂದ್ರಶೇಖರ್, ಡಾ.ಕಿರಣ್ ಶಂಕರ್, ಡಾ.ಎಸ್.ಪಿ. ಆದರ್ಶ್, ಡಾ.ಟಿ.ಆರ್.ವಿಜಯ್ ಕುಮಾರ್ ಸೇರಿದಂತೆ ಎಲ್ಲಾ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಮುಂದಿನ ಚಿಕಿತ್ಸೆಯ ಅವಶ್ಯಕತೆ ನಿರ್ಧರಿಸಲು ಟ್ಯೂಮರ್ ಮಾದರಿಯನ್ನು ದೆಹಲಿಯ ವಿಶೇಷ ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ಅದರ ವರದಿಯ ಆಧಾರದ ಮೇಲೆ ಕೀಮೋಥೆರಪಿ ಅಗತ್ಯ ವಿದೆಯೇ ಅಥವಾ ನಿಯಮಿತ ವೈದ್ಯಕೀಯ ಮೇಲ್ವಿಚಾರಣೆ ಸಾಕಾಗಬಹುದೇ ಎಂಬುದನ್ನು ವೈದ್ಯರು ನಿರ್ಧರಿಸಲಿದ್ದಾರೆ ಎಂದು ಆಸ್ಪತ್ರೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

> ಈ ಪ್ರಕರಣದಲ್ಲಿ ಕ್ಯಾನ್ಸರ್ ಕರುಳಿನೊಳಗೆ ಮಾತ್ರ ಸೀಮಿತವಾಗಿದ್ದು, ಯಾವುದೇ ಲಿಂಫ್ ನೋಡ್‌ಗೆ ಹರಡಿರಲಿಲ್ಲ. ಶಸ್ತ್ರಚಿಕಿತ್ಸೆಯಲ್ಲಿ ಸಂಪೂರ್ಣವಾಗಿ ಗೆಡ್ಡೆಯನ್ನು ತೆಗೆದುಹಾಕಲು ಸಾಧ್ಯವಾಯಿತು. ಈಗ ಎಂಎಂಆರ್ ಪರೀಕ್ಷೆಯ ವರದಿ ಬಂದ ನಂತರ ಮುಂದಿನ ಚಿಕಿತ್ಸೆಯ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ. ದೀರ್ಘಕಾಲದ ರಕ್ತಹೀನತೆ, ಹೊಟ್ಟೆನೋವು ಅಥವಾ ಮಲದಲ್ಲಿ ರಕ್ತದಂತಹ ಲಕ್ಷಣಗಳನ್ನು ನಿರ್ಲಕ್ಷಿಸದೇ ತಕ್ಷಣ ಪರೀಕ್ಷೆ ಮಾಡಿಸಿಕೊಳ್ಳುವುದರಿಂದ ಜೀವ ಉಳಿಸಬಹುದು.
> -ಡಾ.ಕಿರಣ್ ಶಂಕರ್, ಸರ್ಜಿಕಲ್ ಆಂಕಾಲಜಿಸ್ಟ್(ಕ್ಯಾನ್ಸರ್ ತಜ್ಞ)

> ಕೊಲೊನೋಸ್ಕೋಪಿ ಪರೀಕ್ಷೆ ದೊಡ್ಡ ಕರುಳಿನ ಕಾಯಿಲೆಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಲು ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ. ಕೆಲವೊಮ್ಮೆ ರೋಗಿಯ ಆರೋಗ್ಯ ಸ್ಥಿತಿ ಅಥವಾ ಕರುಳಿನ ತಯಾರಿ ಕಾರಣದಿಂದ ಒಂದಕ್ಕಿಂತ ಹೆಚ್ಚು ಬಾರಿ ಪರೀಕ್ಷೆ ನಡೆಸಬೇಕಾಗಬಹುದು. ರಕ್ತಹೀನತೆ, ಮಲದಲ್ಲಿ ರಕ್ತ ಅಥವಾ ಮಲ ವಿಸರ್ಜನೆಯ ಅಭ್ಯಾಸದಲ್ಲಿ ಬದಲಾವಣೆ ಕಂಡುಬಂದರೆ ಕೊಲೊನೋಸ್ಕೋಪಿ ಪರೀಕ್ಷೆಯನ್ನು ಮುಂದೂಡಬಾರದು.
> -ಡಾ.ಟಿಆರ್.ವಿಜಯ್ ಕುಮಾರ್, ಗ್ಯಾಸ್ಟ್ರೋಎಂಟರಾಲಜಿಸ್ಟ್

> ಸಮಯೋಚಿತ ರೋಗ ನಿರ್ಣಯ, ವಿವಿಧ ತಜ್ಞರ ಸಮನ್ವಯ ಚಿಕಿತ್ಸೆ ಮತ್ತು ರೋಗಿಯ ಮೇಲಿನ ಮಾನವೀಯ ಕಾಳಜಿಯೇ ಈ ಪ್ರಕರಣದ ಯಶಸ್ಸಿಗೆ ಕಾರಣ. ಆರಂಭಿಕ ಹಂತದಲ್ಲಿ ಪತ್ತೆಯಾದರೆ ಕೊಲನ್ ಕ್ಯಾನ್ಸರ್‌ಗೆ ಪರಿಣಾಮಕಾರಿ ಚಿಕಿತ್ಸೆ ನೀಡಲು ಸಾಧ್ಯ.
> -ಡಾ.ಸರಳಾ ಚಂದ್ರಶೇಖರ್, ಆಸ್ಪತ್ರೆ ನಿರ್ದೇಶಕರು, ಹಿರಿಯ ಪ್ರಸೂತಿ ತಜ್ಞೆ

> ತೀವ್ರ ರಕ್ತಹೀನತೆ ಎಂದರೆ ಕೇವಲ ಕಬ್ಬಿಣದ ಕೊರತೆ ಎಂದು ಭಾವಿಸುವುದು ತಪ್ಪು. ಅದರ ಹಿಂದೆ ಜೀರ್ಣಾಂಗದ ರಕ್ತಸ್ರಾವ, ಅಲ್ಸರ್ ಅಥವಾ ಕ್ಯಾನ್ಸರ್‌ನಂತಹ ಗಂಭೀರ ಕಾರಣಗಳೂ ಇರಬಹುದು. ವಿಶೇಷವಾಗಿ 50 ವರ್ಷ ಮೇಲ್ಪಟ್ಟವರು ಈ ಲಕ್ಷಣಗಳನ್ನು ನಿರ್ಲಕ್ಷಿಸಬಾರದು.
> -ಡಾ.ಎಸ್.ಪಿ.ಆದರ್ಶ್, ಜನರಲ್ ಫಿಸಿಷಿಯನ್

ವರ್ಷಕ್ಕೆ 65 ಸಾವಿರ ಹೊಸ ಪ್ರಕರಣ: ಐಸಿಎಂಆರ್ ಹಾಗೂ ಗ್ಲೋಬೋಕನ್ ಅಂಕಿಅಂಶಗಳ ಪ್ರಕಾರ ದೇಶದಲ್ಲಿ ಪ್ರತಿವರ್ಷ ಸುಮಾರು 65 ಸಾವಿರಕ್ಕೂ ಹೆಚ್ಚು ಕೊಲೊರೆಕ್ಟಲ್ ಕ್ಯಾನ್ಸರ್ ಹೊಸ ಪ್ರಕರಣಗಳು ದಾಖಲಾಗುತ್ತಿವೆ. ಆದ್ದರಿಂದ ದೀರ್ಘಕಾಲದ ರಕ್ತಹೀನತೆ, ಮಲದಲ್ಲಿ ರಕ್ತ, ನಿರಂತರ ಹೊಟ್ಟೆನೋವು, ಮಲಬದ್ಧತೆ ಅಥವಾ ಮಲವಿಸರ್ಜನೆಯ ಪದ್ಧತಿಯಲ್ಲಿ ಬದಲಾವಣೆ ಕಂಡುಬಂದರೆ ನಿರ್ಲಕ್ಷಿಸದೆ ತಕ್ಷಣ ವೈದ್ಯರನ್ನು ಸಂಪರ್ಕಿಸುವುದು ಅತ್ಯಗತ್ಯ ಎಂದು ಸಲಹೆ ನೀಡಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾ ಇಂಟಿ ಬಂಗಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಬಲರಾಮನ ಆ ದಿನಗಳು (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಆಲ್ಫಾ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ನಾಗಬಂಧನಂ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಗಟ್ಟಾ ಕುಸ್ತಿ (ತ)	4 ಪ್ರದರ್ಶನಗಳು
ಸಂಗಂ	
ನಾಗಬಂಧನಂ (ಕ)	4 ಪ್ರದರ್ಶನಗಳು
ಲಿಡೋ	
ಡೆಡ್ಲಿ ಕಿಲ್ಲರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಅಪರಾಧಿ ನಾನಲ್ಲ (ಕ)	4 ಪ್ರದರ್ಶನಗಳು

ರಾಷ್ಟ್ರೀಯ ಸರಣಿ ಟೆನ್ನಿಸ್ ಪಂದ್ಯಾವಳಿಯಲ್ಲಿ ಪದ್ಮಪ್ರಿಯ ರಮೇಶ್‌ಕುಮಾರ್‌ಗೆ ಪ್ರಶಸ್ತಿ



ರಾಷ್ಟ್ರೀಯ ಸರಣಿ ಟೆನ್ನಿಸ್ ಪಂದ್ಯಾವಳಿಯಲ್ಲಿ ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ಗೆಲುವು ಸಾಧಿಸಿದ ಟೆನ್ನಿಸ್‌ಪಟು ಪದ್ಮಪ್ರಿಯ ರಮೇಶ್‌ಕುಮಾರ್.

ಮೈಸೂರು, ಜು.3(ಎಂಟಿವೈ)– ಹೈದರಾಬಾದ್‌ನಲ್ಲಿರುವ ಸಾನಿಯಾ ಮಿರ್ಜಾ ಟೆನಿಸ್ ಅಕಾಡೆಮಿಯಲ್ಲಿ ನಡೆದ 16 ವರ್ಷದೊಳಗಿನವರ ಎಐಟಿಎ(ಅಖಿಲ ಭಾರತ ಟೆನಿಸ್ ಅಸೋಸಿಯೇಷನ್) ರಾಷ್ಟ್ರೀಯ ಸರಣಿ ಟೆನ್ನಿಸ್ ಪಂದ್ಯಾವಳಿಯಲ್ಲಿ ಮೈಸೂರಿನ ಟೆನ್ನಿಸ್ ಪಟು ಪದ್ಮಪ್ರಿಯ ರಮೇಶ್‌ಕುಮಾರ್ ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ಗೆಲುವು ಸಾಧಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ಅಖಿಲ ಭಾರತ ಟೆನ್ನಿಸ್ ಅಸೋಸಿಯೇಷನ್ ಆಯೋಜಿಸಿದ್ದ ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯಲ್ಲಿ ಮೈಸೂರಿನ ಪದ್ಮಪ್ರಿಯ ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ಚಾಂಪಿಯನ್ ಆಗಿದ್ದಾರೆ.

ಪಂದ್ಯಾವಳಿಯ ಫೈನಲ್ಸ್‌ನಲ್ಲಿ ಪದ್ಮಪ್ರಿಯಾ ತೆಲಂಗಾಣದ ಅನಿಹಾ ಗವಿಯೊನಲ್ಲಾ ಅವರನ್ನು 6–4, 6–3 ಸೆಟ್‌ನಿಂದ ಸೋಲಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದಾರೆ. ಇದಕ್ಕೂ ಮುನ್ನ ಸೆಮಿ ಫೈನಲ್ಸ್‌ನಲ್ಲಿ ತೆಲಂಗಾಣದ ಜೋಹಾ ಖುರೇಷಿ ಅವರನ್ನು 7–5, 7–5 ಅಂತರದಿಂದ ಸೋಲಿಸಿದ್ದರು. ಕ್ವಾರ್ಟರ್–ಫೈನಲ್ಸ್‌ನಲ್ಲಿ ಕರ್ನಾಟಕದ ಉನ್ನತಿ ಮುರಳೀಧರನ್ ಅವರನ್ನು 6–3, 7–6 ಅಂತರದಿಂದ ಮಣಿಸಿದ್ದರು.

ಪಂದ್ಯಾವಳಿಯ ಡಬಲ್ಸ್ ವಿಭಾಗದಲ್ಲಿ ಪದ್ಮಪ್ರಿಯಾ ಮತ್ತು ತೆಲಂಗಾಣದ ಜೋಹಾ ಖುರೇಶಿ ಜೋಡಿ ತೆಲಂಗಾಣದ ಅನಿಹಾ ಗವಿಯೋನಲ್ಲಾ ಮತ್ತು ಬೃಧಿ ವೆಲದಂಧಿ ವಿರುದ್ಧ 6–2, 6–2 ಅಂತರದಿಂದ ಸೋಲಿಸಿ ಚಾಂಪಿಯನ್ ಆದರು. ಈ ಜೋಡಿ ಸೆಮಿಫೈನಲ್ಸ್‌ನಲ್ಲಿ ಕರ್ನಾಟಕದ ಉನ್ನತಿ ಮುರಳೀಧರನ್ ಮತ್ತು ಸೃಷ್ಟಿಕಾ ಕಾರ್ತಿಕೇಯನ್ ಜೋಡಿಯನ್ನು 6–4, 6–2 ಅಂತರದಿಂದ ಸೋಲಿಸಿ ಫೈನಲ್ ಪ್ರವೇಶಿಸಿತ್ತು.

ಕುವೆಂಪುನಗರದ ಗಂಡಭೇರುಂಡ ಪಾರ್ಕ್ ಅಭಿವೃದ್ಧಿಗೆ ಶಾಸಕ ಶ್ರೀವತ್ಸ ಗುದ್ದಲಿ ಪೂಜೆ



ಮೈಸೂರಿನ ಗಂಡ–ಭೇರುಂಡ ಪಾರ್ಕ್‌ನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಶುಕ್ರವಾರ ಗುದ್ದಲಿ ಪೂಜೆ ನೆರವೇರಿಸಿದರು


ಮೈಸೂರು, ಜು.3(ಎಂಕೆ)– ಮೈಸೂರಿನ ಕುವೆಂಪುನಗರದ ಗಂಡಭೇರುಂಡ ಪಾರ್ಕ್‌ನಲ್ಲಿ ಸುಮಾರು 27 ಲಕ್ಷ ರೂ.ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಶುಕ್ರವಾರ ಗುದ್ದಲಿ ಪೂಜೆ ನೆರವೇರಿಸಿದರು.

ಪಾದಚಾರಿ ಮಾರ್ಗದಲ್ಲಿ ಟೈಲ್ಸ್ ಅಳವಡಿಕೆ, ಧ್ವಜ ಸ್ತಂಭ ನಿರ್ಮಾಣ, ಹಸಿರು ಲಾನ್, ಅಲಂಕಾರಿಕ ಗಿಡಗಳನ್ನು ನೆಡುವುದು, ನೀರು ಪೂರೈಕೆಗೆ 10 ಸಾವಿರ ಲೀಟರ್ ಸಾಮರ್ಥ್ಯದ ಸಂಪ್ ನಿರ್ಮಾಣ ಸೇರಿದಂತೆ ಇನ್ನಿತರೆ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕುವೆಂಪುನಗರ ಮಾತ್ರವಲ್ಲದೆ ವಿವಿಧ ಬಡಾವಣೆಗಳಿಂದ ಬೆಳಗ್ಗೆ ಮತ್ತು ಸಂಜೆ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಗಂಡಭೇರುಂಡ ಪಾರ್ಕ್‌ಗೆ ವಾಯುವಿಹಾರಕ್ಕೆಂದು ಆಗಮಿಸುತ್ತಾರೆ. ಆದ್ದರಿಂದ ವಾಯುವಿಹಾರಗಳ ಮನವಿ ಮೇರೆಗೆ ಹಾಗೂ ಪಾರ್ಕ್‌ನಲ್ಲಿ ಹಸಿರೀಕರಣವನ್ನು ಇನ್ನಷ್ಟು ಹೆಚ್ಚಿಸುವ ಉದ್ದೇಶದಿಂದ ನಗರಪಾಲಿಕೆಯಿಂದ 27 ಲಕ್ಷ ರೂ.ವೆಚ್ಚದ ವಿವಿಧ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ವಲಯ ಕಚೇರಿ–3ರ ಆಯುಕ್ತ ಸಂದೀಪ್, ನಗರ ಪಾಲಿಕೆ ವಿದ್ಯುತ್ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ದೀಪಕ್, ತೋಟಗಾರಿಕೆ ವಿಭಾ ಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮೋಹನ್, ಗುತ್ತಿಗೆದಾರರಾದ ಮಹದೇವ್, ಮಂಜು ಮತ್ತಿತರರು ಉಪಸ್ಥಿತರಿದ್ದರು.

ಪಾಕಿಸ್ತಾನದಲ್ಲಿ ಭೀಕರ ರಸ್ತೆ ಅಪಘಾತ; 40 ಮಂದಿ ದುರ್ಮರಣ!



ಕ್ವೆಟ್ಟಾ: ಪಾಕಿಸ್ತಾನದ ನೈಋತ್ಯ ಭಾಗದಲ್ಲಿ ಶುಕ್ರವಾರ ಮುಂಜಾನೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಕನಿಷ್ಠ 40 ಮಂದಿ ಮೃತಪಟ್ಟಿದ್ದು, 8 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಅತಿವೇಗದಲ್ಲಿ ಸಂಚರಿಸುತ್ತಿದ್ದ ಹಾಗೂ ಸಾಮರ್ಥ್ಯಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಬಸ್, ನಿಯಂತ್ರಣ ತಪ್ಪಿ ಆಳವಾದ ಕಂದಕಕ್ಕೆ ಉರುಳಿ ದುರ್ಘಟನೆ ಸಂಭವಿಸಿದೆ.

ಬಲೂಚಿಸ್ತಾನ್ ಮತ್ತು ಖೈಬರ್ ಪಖ್ತುನ್ಖ್ವಾ ಪ್ರಾಂತ್ಯಗಳ ಗಡಿಭಾಗದ ಡಾನಾ ಸಾರ್ ಎಂಬ ದುರ್ಗಮ ಪ್ರದೇಶದಲ್ಲಿ ಈ ಅಪಘಾತ ಸಂಭವಿಸಿದೆ ಎಂದು ಬಲೂಚಿಸ್ತಾನ ಸರ್ಕಾರದ ವಕ್ತಾರ ಶಾಹಿದ್ ರಿಂಡ್ ತಿಳಿಸಿದ್ದಾರೆ.

ಬಸ್ ತನ್ನ ಪ್ರಯಾಣಿಕರನ್ನು ಮಾತ್ರವಲ್ಲದೆ ಕೆಟ್ಟುಹೋದ ಮತ್ತೊಂದು ಬಸ್‌ನ ಪ್ರಯಾಣಿಕರನ್ನೂ ಹೊತ್ತೊಯ್ಯುತ್ತಿತ್ತು. ಇದರಿಂದ ಬಸ್‌ನಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚಿನ ಜನರು ಪ್ರಯಾಣಿಸುತ್ತಿದ್ದರು.

ಇದಲ್ಲದೆ, ಬಸ್ ಅತಿವೇಗದಲ್ಲಿ ಸಾಗಿದ್ದು, ಚಾಲಕನ ನಿಯಂತ್ರಣ ತಪ್ಪಿ ಹೆದ್ದಾರಿಯಿಂದ ಕಂದಕಕ್ಕೆ ಉರುಳಿ ಬಿದ್ದಿದೆ. ಪರಿಣಾಮ ಸ್ಥಳದಲ್ಲೇ ಹಲವು ಸಾವನ್ನಪ್ಪಿದ್ದು, ಇನ್ನೂ ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆಂದು ಮಾಹಿತಿ ನೀಡಿದ್ದಾರೆ.

ಅಪಘಾತದ ಮಾಹಿತಿ ತಿಳಿಯುತ್ತಿದ್ದಂತೆ ರಕ್ಷಣಾ ಸಿಬ್ಬಂದಿ, ಪೊಲೀಸರು ಹಾಗೂ ಸ್ಥಳೀಯರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿದರು.

ದುರ್ಗಮ ಪ್ರದೇಶವಾಗಿರುವುದರಿಂದ ರಕ್ಷಣಾ ಕಾರ್ಯಕ್ಕೆ ತೊಂದರೆ ಉಂಟಾಗಿದ್ದು, ಮೃತರ ಗುರುತು ಪತ್ತೆ ಕಾರ್ಯವೂ ಮುಂದುವರಿದಿದೆ.

ನಾಳೆ 'ಏಕ್ ಶಾಮ್ ಮ್ಯೂಸಿಕ್ ಕೆ ನಾಮ್' ಚಿತ್ರಗೀತೆ ಕಾರ್ಯಕ್ರಮ

ಮೈಸೂರು, ಜು.3(ಜಿಎ)–ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಜು.5 ರಂದು ಸಂಜೆ 5ಗಂಟೆಗೆ 'ಏಕ್ ಶಾಮ್ ಮ್ಯೂಸಿಕ್ ಕೆ ನಾಮ್' ಶೀರ್ಷಿಕೆಯಲ್ಲಿ ಕನ್ನಡ ಹಾಗೂ ಹಿಂದಿ ಹಾಡುಗಳ ಚಿತ್ರಗೀತೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹಿನ್ನೆಲೆ ಗಾಯಕ ವಿ. ಜಾರ್ಜ್ ಪ್ರಭಾಕರ್ ಈ ವಿಷಯ ತಿಳಿಸಿ, ತಾವು ರಾಜನ್ ನಾಗೇಂದ್ರ ಅವರ ಶಿಷ್ಯರಾಗಿದ್ದು, ಈ ಬಾರಿಯ ಕಾರ್ಯಕ್ರಮದಲ್ಲಿ ಜ್ಯೂನಿಯರ್ ಅಮಿತಾ ಬಚ್ಚನ್ ಸಹಾ ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿನಯ್, ಪ್ರಕಾಶ್, ಹರೀಶ್‌ಗೌಡ, ಎಸ್.ಪ್ರಮೋದ್, ಶಿವರಾಜು ಉಪಸ್ಥಿತರಿದ್ದರು.

ರೋಟರಿ ಸೆಂಟ್ರಲ್ ಮೈಸೂರ್ ಕ್ಲಬ್‌ಗೆ ಪ್ಲಾಟಿನಮ್ ಪ್ಲಸ್ ಪ್ರಶಸ್ತಿ ಪ್ರದಾನ...



ರೋಟರಿ ಅಂತಾರಾಷ್ಟ್ರೀಯ ಜಿಲ್ಲೆ 3181 ವತಿಯಿಂದ ನಡೆದ ರೋಟರಿ ಅನುಬಂಧನ್ ಅವಾರ್ಡ್ ಕಾರ್ಯಕ್ರಮದಲ್ಲಿ 'ರೋಟರಿ ಸೆಂಟ್ರಲ್ ಮೈಸೂರ್ ಕ್ಲಬ್'ಗೆ ಅತ್ಯುತ್ತಮ ಸಮಾಜ ಸೇವೆಗಾಗಿ ಪ್ಲಾಟಿನಮ್ ಪ್ಲಸ್ ಪ್ರಶಸ್ತಿ ನೀಡಿ ಗೌರವಿಸಿದೆ. ರೋಟರಿ ಜಿಲ್ಲಾಧ್ಯಕ್ಷ ಪಿ.ಕೆ.ರಾಮಕೃಷ್ಣ ಅವರಿಂದ ರೋಟರಿ ಸೆಂಟ್ರಲ್ ಮೈಸೂರ್ ಸಂಸ್ಥೆಯ ಪದಾಧಿಕಾರಿಗಳು ಪ್ರಶಸ್ತಿ ಸ್ವೀಕರಿಸಿದರು.

ಅಕ್ಕಿ ಬೆಲೆ ಏರಿಕೆ; ಬರ ಪರಿಸ್ಥಿತಿ ಎದುರಾದರೆ ಗಗನಕ್ಕೇರುವ ಸಾಧ್ಯತೆ



ಮಧ್ಯ ಪ್ರಾಚ್ಯ ಯುದ್ಧದ ಹಿನ್ನೆಲೆಯಲ್ಲಿ ಡ್ರೈಫ್ರೂಟ್ಸ್ ದರದಲ್ಲಿ ಏರಿಕೆ



ಡ್ರೈಫ್ರೂಟ್ಸ್‌ನೊಂದಿಗೆ ಶ್ರೀ ಗಣೇಶ್ ಟ್ರೇಡರ್ಸ್ ಮಳಿಗೆ ಮಾಲೀಕ ಕೆ.ಜಿ.ಸಾಗರ್

ಮೈಸೂರು,ಜು.3(ಪಿಎಂ)– ಕಳೆದ ಎರಡು ತಿಂಗಳಿಂದ ಹಂತ ಹಂತವಾಗಿ ಅಕ್ಕಿ ಬೆಲೆಯಲ್ಲಿ ಕೆಜಿಗೆ 5ರಿಂದ 8 ರೂ.ವರೆಗೆ ಹೆಚ್ಚಳವಾಗಿದೆ. ಜೊತೆಗೆ ಈಗಾಗಲೇ ಇಡೀ ದೇಶದಲ್ಲಿ ಬರಗಾಲದ ಛಾಯೆ ಮೂಡಿದ್ದು, ಹಾಗಾಗಿ ಮುಂದಿನ ದಿನಗಳಲ್ಲಿ ಅಕ್ಕಿ ಬೆಲೆಯಲ್ಲಿ ಮತ್ತಷ್ಟು ದುಬಾರಿಯಾಗುವ ಆತಂಕ ಗ್ರಾಹಕರಲ್ಲಿ ಮೂಡುವಂತಾಗಿದೆ.

ತೈಲ ಬೆಲೆ ಏರಿಕೆ, ಹೊರ ರಾಷ್ಟ್ರಗಳಿಗೆ ರಫ್ತು ಪ್ರಮಾಣ ಹೆಚ್ಚಳ, ಬೇಸಿಗೆಯಲ್ಲಿ ನಿರೀಕ್ಷಿತ ಪ್ರಮಾಣದ ಫಸಲು ಬಾರದಿರುವುದು ಇನ್ನಿತರೆ ಕಾರಣಗಳಿಗೆ ಅಕ್ಕಿ ಬೆಲೆಯಲ್ಲಿ ಏರಿಕೆ ಉಂಟಾಗಿದೆ ಎಂಬುದು ವ್ಯಾಪಾರಸ್ಥರ ಅಭಿಪ್ರಾಯವಾಗಿದೆ.

ಶಿವರಾಂಪೇಟೆಯ ಶ್ರೀ ಗಣೇಶ್ ಟ್ರೇಡರ್ಸ್ ಮಳಿಗೆ ಮಾಲೀಕ ಕೆ.ಜಿ.ಸಾಗರ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಜಿಟಿಎಸ್ ಬುಲೆಟ್ ಅಕ್ಕಿ 30 ಕೆಜಿ ಬ್ಯಾಗ್ 2,200 ರೂ. ಇತ್ತು. ಈಗ 2,500 ರೂ. ಆಗಿದೆ. ಅಲ್ಲಿಗೆ 300 ರೂ. ಹೆಚ್ಚಳವಾಗಿದೆ. ಅದೇ ರೀತಿ ಕೆಜಿಗೆ 9ರಿಂದ 10 ರೂ. ತುಟ್ಟಿಯಾಗಿದೆ. ಮತ್ತೊಂದು ವಿಧದ ಜಿಟಿಎಸ್ ಬುಲೆಟ್ ಓರಿಜಿನಲ್‌ನ 30 ಕೆಜಿ ಬ್ಯಾಗ್ 2,500 ಆಗಿದೆ. ರಾ ರೈಸ್ 26 ಕೆಜಿ ಬ್ಯಾಗ್‌ಗೆ 1,300 ರೂ. ಇತ್ತು. ಈಗ 1,550 ರೂ. ಆಗಿದೆ. ಬಸವೇಶ್ವರ ಅಕ್ಕಿ 1,690 ರೂ. ಆಗಿದೆ ಎಂದು ಮಾಹಿತಿ ನೀಡಿದರು.

ದೇವರಾಜ ಮಾರುಕಟ್ಟೆಯ ನಾಮ ಆದಿನಾರಾಯಣ ಶೆಟ್ಟಿ ಅಂಡ್ ಸನ್ಸ್ ಮಳಿಗೆ ಪಾಲುದಾರ ಆನಂದ್‌ಕುಮಾರ್ ಮಾತನಾಡಿ, ಅಕ್ಕಿ ಬೆಲೆಯಲ್ಲಿ ಮಾತ್ರ ಏರಿಕೆಯಾಗಿದೆ. ಉಳಿದ ದಿನಸಿಯ ಬೆಲೆಯಲ್ಲಿ ಯಥಾಸ್ಥಿತಿ ಇದೆ. ಕೆಜಿ ಅಕ್ಕಿ 5ರಿಂದ 8 ರೂ.ವರೆಗೆ ಹೆಚ್ಚಳವಾಗಿದೆ. ಕೆಜಿ ಬಸವೇಶ್ವರ ಅಕ್ಕಿಗೆ 68 ರೂ. ಇದೆ. ಹಿಂದೆ 60ರಿಂದ 62 ರೂ. ಇತ್ತು. ಎಲ್ಲಾ ರೀತಿಯ ಅಕ್ಕಿ ಸಂಬಂಧ ಸುಮಾರು 8 ರೂ. ಏರಿಕೆಯಾಗಿದೆ ಎನ್ನಬಹುದು ಎಂದು ಹೇಳಿದರು.

ಇದೇ ಮಳಿಗೆ ಪಾಲುದಾರ ಶ್ರೀನಿವಾಸ್ ಮಾತನಾಡಿ, ಅಕ್ಕಿ ಬೆಲೆಯಲ್ಲಿ ಎರಡು ತಿಂಗಳಿಂದ ಜಾಸ್ತಿಯಾಗಿದೆ. ಮಳೆ ಕೊರತೆ, ರಸಗೊಬ್ಬರ ಸಮಸ್ಯೆ ಸೇರಿದಂತೆ ಮೊದಲಾದ ಕಾರಣಗಳಿಂದ ನಿರೀಕ್ಷಿತ ಪ್ರಮಾಣದಲ್ಲಿ ಫಸಲು ಬಂದಿಲ್ಲ. ಹೀಗಾಗಿ ಈ ಹೆಚ್ಚಳ ಉಂಟಾಗಿದೆ. 26 ಕೆಜಿ ಬ್ಯಾಗ್ ಮಿಸ್ಟರ್ ಗೋಲ್ಡ್ 1,200 ರೂ. ಇತ್ತು. 1,320 ರೂ. ಆಗಿದೆ. ಬುಲೆಟ್ ಎ1 ಅಕ್ಕಿ 1,300ರಿಂದ 1,400 ಇತ್ತು. ಈಗ 1,500ರಿಂದ 1,600 ಆಗಿದೆ ಎಂದರು.

ಸಂತೆಪೇಟೆಯ ಅನ್ನಪೂರ್ಣ ಟ್ರೇಡಿಂಗ್ ಕಂಪನಿಯ ಕಸ್ತೂರಿರಂಗನ್ ಮಾತನಾಡಿ, ಅಕ್ಕಿ ಬೆಲೆ ಏರಿಕೆಗೆ ಹಲವು ಕಾರಣಗಳಿವೆ. ತುಂಗ ಭದ್ರಾ ಡ್ಯಾಂನಲ್ಲಿ ಗ್ರೆಸ್ಟ್ ಗೇಟ್‌ಗೆ ಹಾನಿಯಾಗಿತ್ತು. ಈ ಹಿನ್ನೆಲೆಯಲ್ಲಿ ಈ ಜಲಾಶಯದ ಅಚ್ಚುಕಟ್ಟು ಪ್ರದೇಶದ ಒಂದು ಬೆಳೆಗೆ ನೀರು ದೊರೆಯಲ್ಲಿಲ್ಲ. ಇದೂ ಒಂದು ಕಾರಣ. ಜೊತೆಗೆ ಈ ವರ್ಷದ ಬೇಸಿಗೆಯಲ್ಲಿ ನಿರೀಕ್ಷಿತ ಪ್ರಮಾಣದ ಫಸಲು ಬರಲಿಲ್ಲ. ಜೊತೆಗೆ ಅಧಿಕ ರಫ್ತು ಸಹ ಕಾರಣವಾಗಿದೆ. ಅಲ್ಲದೆ, ಮದುವೆ ಮೊದಲಾದ ಕಾರ್ಯಕ್ರಮಗಳ ಕಾರಣವೂ ಸೇರಿದೆ ಎಂದು ತಿಳಿಸಿದರು.

ಪಿಸ್ತಾ, ಬಾದಾಮಿ ಬೆಲೆ ಏರಿಕೆ: ಡ್ರೈಫ್ರೂಟ್ಸ್‌ಗಳ ಪೈಕಿ ಪಿಸ್ತಾ ಮತ್ತು ಬಾದಾಮಿ ಬೆಲೆಯಲ್ಲಿ ಏರಿಕೆ ಉಂಟಾಗಿದೆ. ಸಾಲ್ಟೆಡ್ ಪಿಸ್ತಾ ಕೆಜಿಗೆ (ಹಳೇ ದರ 1,100 ರೂ.) ಈಗ 1,500 ರೂ, ಪ್ಲೈನ್ ಪಿಸ್ತಾ ಕೆಜಿಗೆ (ಹಳೇ ದರ 1,700 ರೂ.) ಈಗ 2,700 ರೂ. ಹಾಗೂ ಬಾದಾಮಿ ಕೆಜಿಗೆ (ಹಳೇ ದರ 700ರಿಂದ 750 ರೂ.) ಈಗ 900ರಿಂದ 960 ರೂ. ಆಗಿದೆ. ಗರಿಷ್ಠ ಪ್ರಮಾಣದಲ್ಲಿ ಪಿಸ್ತಾ ಇರಾನ್‌ನಿಂದ ಬರುತ್ತದೆ. ಈ ಕಾರಣದೊಂದಿಗೆ ಡಾಲರ್ ದರದಲ್ಲಿನ ವ್ಯತ್ಯಾಸ ಸೇರಿ ಪಿಸ್ತಾದ ಬೆಲೆಯಲ್ಲಿ ಏರಿಕೆಯಾಗಿದೆ ಎಂದು ಶಿವರಾಂಪೇಟೆಯ ಶ್ರೀ ಗಣೇಶ್ ಟ್ರೇಡರ್ಸ್ ಮಳಿಗೆ ಮಾಲೀಕ ಕೆ.ಜಿ.ಸಾಗರ್ ತಿಳಿಸಿದರು.

ದೇವರಾಜ ಮಾರುಕಟ್ಟೆಯ ನಾಮ ಆದಿನಾರಾಯಣ ಶೆಟ್ಟಿ ಅಂಡ್ ಸನ್ಸ್ ಮಳಿಗೆ ಪಾಲುದಾರ ಶ್ರೀನಿವಾಸ್ ಮಾತನಾಡಿ, ಶೇ.80ರಷ್ಟು ಡ್ರೈಫ್ರೂಟ್ಸ್ ಕೊಲ್ಲಿ ರಾಷ್ಟ್ರಗಳಿಂದ ಆಮದು ಆಗಲಿದ್ದು, ಯುದ್ಧದ ಹಿನ್ನೆಲೆಯಲ್ಲಿ ಆಮದಿನಲ್ಲಿ ಹಿನ್ನಡೆಯಾದ ಕಾರಣ ಡ್ರೈಫ್ರೂಟ್ಸ್ ಬೆಲೆಯಲ್ಲಿ ಹೆಚ್ಚಳ ಉಂಟಾಗಿತ್ತು. ಈಗ ನಿಯಂತ್ರಣಕ್ಕೆ ಬರುತ್ತಿದ್ದು, ಸದ್ಯ ಪಿಸ್ತಾ ಒಂದರ ಬೆಲೆ ದುಬಾರಿಯಾಗಿದೆ. ಕೆಜಿಗೆ 900ರಿಂದ 1 ಸಾವಿರ ರೂ. ವರೆಗೆ ಇದ್ದ ಇದರ ಬೆಲೆ ಈಗ 1,200 ರೂ.ವರೆಗೆ ಹೋಗಿದೆ ಎಂದರು.

ಇನ್ಫೋಸಿಸ್ ಜಂಕ್ಷನ್‌ನಿಂದ ಬೆಮೆಲ್‌ವರೆಗಿನ ಮುಖ್ಯ ರಸ್ತೆ ಅಭಿವೃದ್ಧಿ ಕಾಮಗಾರಿ ಆರಂಭ

ಕಾಮಗಾರಿ ಮಾಹಿತಿ ನೀಡಲು ಇಂಜಿನಿಯರ್ ಅಸಡ್ಡೆ!



ಮೈಸೂರಿನ ಕೈಗಾರಿಕಾ ಪ್ರದೇಶದಲ್ಲಿ ಇನ್ಫೋಸಿಸ್ ಜಂಕ್ಷನ್‌ನಿಂದ ಬೆಮೆಲ್ ಸಂಪರ್ಕಿಸುವ ಮುಖ್ಯ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಲಾಗಿದೆ.

ಮೈಸೂರು, ಜು.3(ಎಂಕೆ)– ಮೈಸೂರಿನ ಕೈಗಾರಿಕಾ ಪ್ರದೇಶದಲ್ಲಿರುವ ಇನ್ಫೋಸಿಸ್ ಜಂಕ್ಷನ್‌ನಿಂದ ಬೆಮೆಲ್(ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್) ಕಾರ್ಖಾನೆ ಸಂಪರ್ಕಿಸುವ ಮುಖ್ಯ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ(ಕೆಐಎಡಿಬಿ) ವ್ಯಾಪ್ತಿಯ ಹೆಬ್ಬಾಳ ಕೈಗಾರಿಕಾ ಪ್ರದೇಶ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶ ಹಾಗೂ ಬನ್ನಿಮಂಟಪ ಕೈಗಾರಿಕಾ ಪ್ರದೇಶವನ್ನು ಸಂಪರ್ಕಿಸುವ ಅತೀ ಮುಖ್ಯರಸ್ತೆ ಇದಾಗಿದ್ದು, ಈ ರಸ್ತೆಯೂ ಸಂಪೂರ್ಣವಾಗಿ ಗುಂಡಿ ಬಿದ್ದು ಹಾಳಾಗಿದ್ದರ ಕುರಿತು 'ಮೈಸೂರು ಮಿತ್ರ'ನ ಜೂ.30ರ ಸಂಚಿಕೆಯಲ್ಲಿ 'ಬಿಇಎಂಎಲ್ ಸೇರಿದಂತೆ ಪ್ರಮುಖ ಕೈಗಾರಿಕಾ ಘಟಕಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಸಂಚಾರ ದುಸ್ಸಾಹಸ!' ಶೀರ್ಷಿಕೆಯಡಿ ವರದಿ ಪ್ರಕಟಿಸಲಾಗಿತ್ತು.

ವರದಿ ಬಳಿಕ ಎಚ್ಚೆತ್ತ ಕೆಐಎಡಿಬಿ ಅಧಿಕಾರಿಗಳು, ಇನ್ಫೋಸಿಸ್ ಜಂಕ್ಷನ್‌ನಿಂದ ಬೆಮೆಲ್‌ವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಂಡಿದ್ದು ಮೊದಲ ಹಂತವಾಗಿ ಜಂಕ್ಷನ್‌ನಿಂದ ನೂರು ಮೀಟರ್ ವರೆಗೆ ಡಾಂಬರೀಕರಣ ಮಾಡಲಾಗುತ್ತಿದೆ. ರಸ್ತೆ ಬದಿಯಲ್ಲಿದ್ದ ಮಣ್ಣಿನ ಗುಡ್ಡೆಗಳು ಹಾಗೂ ತ್ಯಾಜ್ಯ ವಿಲೇವಾರಿ ಬಳಿಕ ರಸ್ತೆ ಗುಂಡಿಗಳನ್ನು ಜಲ್ಲಿಕಲ್ಲಿನಿಂದ ಮುಚ್ಚಿ ನಂತರ ಡಾಂಬರೀಕರಣ ಮಾಡಲಾಗುತ್ತಿದೆ ಎಂದು ಗುತ್ತಿಗೆದಾರರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮೊದಲು ತೀರಾ ಹಾಳಾಗಿರುವ ಸ್ಥಳಗಳಲ್ಲಿ ಡಾಂಬರೀಕರಣಕ್ಕೆ ಸೂಚನೆ ನೀಡಿದ್ದು, ನಂತರ ಬೆಮೆಲ್‌ವರೆಗೂ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ. ನಿನ್ನೆ(ಜು.2)ಯಿಂದ ಕಾಮಗಾರಿ ಆರಂಭವಾಗಿದ್ದು, ಹೆಬ್ಬಾಳ ಕೈಗಾರಿಕಾ ಪ್ರದೇಶದ ಪ್ರಮುಖ ರಸ್ತೆಯಾಗಿರುವ ಹಿನ್ನಲೆಯಲ್ಲಿ ಕಾಮಗಾರಿಯನ್ನು ವೇಗವಾಗಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಪ್ರತಿಕ್ರಿಯಿಸದ ಇಂಜಿನಿಯರ್ ಹೇಮಂತ್: ಇನ್ಫೋಸಿಸ್ ಜಂಕ್ಷನ್‌ನಿಂದ ಬೆಮೆಲ್ ಸಂಪರ್ಕಿಸುವ ರಸ್ತೆ ಅಭಿವೃದ್ಧಿ ಕುರಿತು ಮಾಹಿತಿ ಪಡೆಯಲು ಕೆಐಎಡಿಬಿ ಇಂಜಿನಿಯರ್ ಹೇಮಂತ್ ಅವರನ್ನು ಸಂಪರ್ಕಿಸಿದಾಗ ಮಾಹಿತಿ ನೀಡಲು ಹಿಂದೇಟು ಹಾಕಿದ ಅವರು, ಪೇಪರ್ ನೋಡಿಯೇ ಹೇಳಬೇಕು. ಮೀಟಿಂಗ್ ಇದೆ. ಮೀಟಿಂಗ್ ಮುಗಿದ ಬಳಿಕ ಮಾತಾನಾಡುವುದಾಗಿ ಹೇಳಿ ಕಾಲ್ ಕಟ್ ಮಾಡಿದ ನಂತರ ಹತ್ತಾರು ಬಾರೀ ಕಾಲ್ ಮಾಡಿದರೂ ಕರೆ ಸ್ವೀಕರಿಸಲಿಲ್ಲ.

ವಾಹನ ದಟ್ಟಣೆ: ಇನ್ಫೋಸಿಸ್ ಜಂಕ್ಷನ್‌ನಿಂದ ಬೆಮೆಲ್‌ವರೆಗೆ ಹಾಗೂ ವಿವಿಧ ಕಾರ್ಖಾನೆಗಳನ್ನು ಸಂಪರ್ಕಿಸುವ ಈ ಮುಖ್ಯ ರಸ್ತೆಯಲ್ಲಿ ವಾಹನ ದಟ್ಟಣೆ ಯಥೇಚ್ಛವಾಗಿದೆ. ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ, ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ವಾಹನ ಸಂಚಾರ ಹೆಚ್ಚಾಗಿರಲಿದೆ. ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದ್ದು, ತ್ವರಿತವಾಗಿ ರಸ್ತೆ ಅಭಿವೃದ್ಧಿ ಮಾಡುವಂತೆ ಸ್ಥಳೀಯ ಕಾರ್ಖಾನೆ ಮಾಲೀಕರು ಆಗ್ರಹಿಸಿದ್ದಾರೆ.

COMMERCIAL PROPERTIES FOR SALE IN PRIME LOCATION

1) **43x100** East Facing
(for Go Down - Rent / Sale)
Pampapathi Road,
Kuvempunagar 2nd stage

2) Ramakrishna Nagar, 'H' Block,
East Facing **40x60**

Dattagalli
3) **44x42** East Facing
40x60 South Facing

4) MMG Temple Bell , Srirampura
40x55 - East Facing Site

5) **40x60** New House
For Sale in Police Layout

Call - **9008111454**



PREMIUM LAND FOR SALE

DADADAHALLI
4kms from Mysore Airport
4000 sq.ft., N/F
Rs. 2700/- sq.ft., (Nego.,)
Call : 99805 27878
Brokers Excuse

ಕೈಗಾರಿಕಾ ಜಮೀನು ಬಾಡಿಗೆಗೆ

2.5 ಎಕರೆ–ಉತ್ತಮ ಕೈಗಾರಿಕಾ ಜಾಗ ಬಾಡಿಗೆಗೆ ಲಭ್ಯ. ರೀಡ್ & ಟೇಲರ್ ಎದುರು, ತಾಂಡ್ಯ ಕೈಗಾರಿಕಾ ಪ್ರದೇಶ, ತಾಂಡವಪುರ, ನಂಜನಗೂಡು ತಾಲ್ಲೂಕು, ಮೈಸೂರು. ಕಾರ್ಖಾನೆ, ಗೋದಾಮು, ಲಾಜಿಸ್ಟಿಕ್ಸ್ ಹಾಗೂ ಇತರೆ ಕೈಗಾರಿಕಾ ಬಳಕೆಗೆ ಸೂಕ್ತ.

8861757351

NANDI ENCLAVE

BILIKERE, MYSORE

30x30
30x40
30x50
40x60

Immediate Registration
C.C Road and
Gated Community
Bank Loan Available
9972085599

ವೈದ್ಯಕೀಯ ದಾಖಲಾತಿಗಳ ವಿಲೇವಾರಿ ಮಾಡುವ ಬಗ್ಗೆ ಸಾರ್ವಜನಿಕ ಪ್ರಕಟಣೆ

ಭಾರತೀಯ ವೈದ್ಯಕೀಯ ಮಂಡಳಿಯ ಪ್ರಕಾರ ವೈದ್ಯಕೀಯ ದಾಖಲೆಗಳ ನೀತಿಗೆ ಸಂಬಂಧಿಸಿದಂತೆ ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ, ಮೈಸೂರು. ಇಲ್ಲಿನ 2020 ನೇ ವರ್ಷದ ಒಳರೋಗಿ ಹಾಗೂ ಹೊರ ರೋಗಿ ಕಡತಗಳನ್ನು (IN PATIENT AND OUT PATIENT FILES) ಗಳನ್ನು ವಿಲೇವಾರಿ ಮಾಡುತ್ತಿದ್ದು, ಆಸಕ್ತಿಯುಳ್ಳ ರೋಗಿಗಳು ಸದ–ರಿಯವರ ಒಳರೋಗಿ ಹಾಗೂ ಹೊರ ರೋಗಿ ಕಡತದ ಮಾಹಿತಿಯನ್ನು ಪಡೆದುಕೊಳ್ಳಲು ಈ ಪ್ರಕಟಣೆಗೊಂಡ 15 ದಿನಗಳ ಒಳಗಾಗಿ ವೈದ್ಯಕೀಯ ದಾಖಲೆಗಳ ವಿಭಾಗದಲ್ಲಿ ಸಂಪರ್ಕಿಸಬಹುದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ: ವೈದ್ಯಕೀಯ ದಾಖಲಾತಿ ವಿಭಾಗ. ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ, ನಜರ್ ಬಾದ್, ಮೈಸೂರು– 570010, ದೂರವಾಣಿ ಸಂಖ್ಯೆ: 0821–4001600

ಸಹಿ/– ಆಡಳಿತಾಧಿಕಾರಿ

ಮೈಸೂರು ಮಿತ್ರ 47

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

5ನೇ ವರ್ಷದ ಸವಿನೆನಪು



ಶ್ರೀ ಸಿ.ಕೃಷ್ಣ (ಕಾರ್ಪ)
ನಿಧನ: 04.07.2021

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ. ದುಃಖತಪ್ತರು: ಪತ್ನಿ ವೇದಾವತಿ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು

25ನೇ ವರ್ಷದ ಸವಿನೆನಪು



ಶ್ರೀ ಶ್ರೀನಿವಾಸಯ್ಯ
BA, LLB
ನಿವೃತ್ತ ಪೊಲೀಸ್ ಇನ್ಸ್ಪೆಕ್ಟರ್ ಹಾಗೂ ವಕೀಲರು ನಿಧನ: 04–07–2001

ನೀವು ನಮ್ಮನ್ನಗಲಿ ಇಂದಿಗೆ 25ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿದೆ ನೀವು ತೋರಿದ ಪ್ರೀತಿ ಅಜರಾಮರ ನಿಮ್ಮ ದಿವ್ಯ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ತಾಯಿ ಚಾಮುಂಡೇಶ್ವರಿಯಲ್ಲಿ ಪ್ರಾರ್ಥಿಸುತ್ತೇವೆ.

ದುಃಖತಪ್ತರು: ಪತ್ನಿ ಶ್ರೀಮತಿ ವನಜ, ಮಕ್ಕಳು ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಮೈಸೂರು



